ಶಿವಮೊಗ್ಗ ಜಿಲ್ಲಾ ರೈತ ಅಧ್ಯಯನ ಶಿಬಿರ — 1

'ಸಾಲಿಗುಡಿ'ಯಲ್ಲಿ ಪೋಲಂಕಿ ಮೇಷ್ಟ್ರು

June 4 1987

ಆಗುಂಬೆ ಮತ್ತಷ್ಟು ಹಸಿರಾಗಿತ್ತು. ಹಸಿರು ರುಮಾಲು ಸುತ್ತಿಕೊಂಡ ಮಣ್ಣಿನ ಮಕ್ಕಳು ಅಲ್ಲಿ ಕೂಡಿದ್ದರು. ಇತ್ತೀಚೆಗೆ ಕೊಂಚ ಮಂಕು ಆವರಿಸಿದಂತೆ ಕಾಣುವ ರೈತ ಚಳವಳಿಗೆ ಹೊಸ ಉಸಿರು ತುಂಬಲು ಅವರು ಹಸಿರು ತಾಯಿಯ ಮಡಿಲನ್ನರಸಿ ಬಂದಿದ್ದರು.

ಕರ್ನಾಟಕ ರೈತ ರಾಜ್ಯಸಂಘ ಕಳೆದ ತಿಂಗಳ 26, 27, 28 ರಂದು ನಿತ್ಯ ಹಸುರಿನ ಆಗುಂಬೆಯ ನೆಲದಲ್ಲಿ ತನ್ನ ಕಾರ್ಯಕರ್ತರಿಗಾಗಿ ಮೂರು ದಿನಗಳ ಅಧ್ಯಯನ ಶಿಬಿರ ಏರ್ಪಡಿಸಿದ್ದು ಅರ್ಥಪೂರ್ಣ ಯೋಜನೆ.

ಆಗುಂಬೆ ಒಂದು ತಣ್ಣನೆಯ ಅನುಭವ. ದಕ್ಷಿಣ ಕನ್ನಡದ ಸುಡುತ್ತಿರುವ ಕೆಂಡದ ನೆಲದಿಂದ ಮೇಲೇರುತ್ತಿದ್ದಂತೆ ತಂಪು ಹೊತ್ತು ತುಯ್ಯುತ್ತ ಮುಖಕ್ಕೆ ಮುದ್ದಿಡುವ ಗಾಳಿ. ಹಸಿರು ಪಚ್ಚಡ ಹೊದ್ದುಕೊಂಡ ಬೆಟ್ಟಗಳ ರಮಣೀಯತೆ ಎಲ್ಲವೂ ಹಿಮ್ಮುರಿ ಸುತ್ತುಗಳು ಹುಟ್ಟಿಸುವ ಆತಂಕವನ್ನು ಮೀರಿ ನಮ್ಮನ್ನು ಮೈಮರೆಸುತ್ತದೆ.

26ರಂದು 11 ಗಂಟೆಗೆ ಡಾ. ಪೋಲಂಕಿ ರಾಮ ಮೂರ್ತಿಯವರು ಶಿಬಿರವನ್ನು ಉದ್ಘಾಟಿಸಬೇಕಿತ್ತು. ಆದರೆ ಹಲವು ಪ್ರಮುಖ ವಿಷಯಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಬೇಕಾದವರ ಗೈರು ಹಾಜರಿಯಿಂದ ಶಿಬಿರ ಆ ದಿನ ಉದ್ಘಾಟನೆಗೊಳ್ಳಲೇ ಇಲ್ಲ. ಅಂದ ಮಾತ್ರಕ್ಕೆ ಆ ದಿನ ಒಣ ಹರಟೆಯ ವ್ಯರ್ಥ ದಿನವಾಗಲಿಲ್ಲ ಯಾಕೆಂದರೆ ನಮ್ಮೊಡನೆ ಪೋಲಂಕಿ ಇದ್ದರು.

ಅದೊಂದು ಪುಟ್ಟ ದೇವಸ್ಥಾನ. ಶಿಬಿರ ಹತ್ತಿರದ ಶಾಲೆಯಲ್ಲಿ ನಡೆಯಬೇಕಾಗಿದ್ದಿತು. ಮೊದಲ ದಿನ ಶಿಬಿರ ಅಡುಗೆ ಮತ್ತು ಊಟದ ಮನೆಯಾಗಿದ್ದ ದೇವಸ್ಥಾನದ ಹಜಾರದಲ್ಲಿಯೇ ನಡೆಯಿತು. ಪೋಲಂಕಿಯವರನ್ನು ದೇವರ ಸನ್ನಿಧಿಯಲ್ಲಿ ಕಾಣುವುದೇ ಒಂದು ಮೋಜಿನ ಪ್ರಸಂಗ. ನೆಲದಲ್ಲಿ ಚಾಪೆ ಹಾಕಿ ಕುಳಿತ ಅವರ ಸುತ್ತ ವಿದ್ಯಾರ್ಥಿಗಳಂತೆ ರೈತರು ನೆರೆದಿದ್ದರು. ಅಂದು ಗುಡಿ 'ಸಾಲಿಗುಡಿ' ಆಗಿತ್ತು.

ಮಣ್ಣಿನ ಸನಿಹದಿಂದ ಬಂದವರೆಲ್ಲರ ಅಪ್ಪನಂತೆ ಕಾಣುವ ಪೋಲಂಕಿ ಬಾಯಿ ಬಿಟ್ಟರೆ ಬೆಚ್ಚಿಬೀಳಿಸುವ ಹೊಸ ಸತ್ಯ ಅನಾವರಣಗೊಳ್ಳುತ್ತದೆ. ಅಂದು ನಡೆದದ್ದೂ ಅದೇ. ದೇವಸ್ಥಾನದ ಸುತ್ತ ಮೇಯುತ್ತಿದ್ದ ಬಡಕಲು ಹಸುಗಳು ಅವರ ಮಾತಿಗೆ ಆಹಾರವಾಯಿತು.

ಗೋಸೇವೆಯನ್ನು ತರಾಟೆಗೆ ತೆಗೆದುಕೊಂಡ ಅವರು, ಉಳಿದ ಪ್ರಾಣಿಗಳ ಬಗ್ಗೆ ಭಾರತೀಯರಿಗಿರುವ ಕೀಳು ಭಾವನೆಯತ್ತ ಬೊಟ್ಟು ಮಾಡಿದರು. ಈ ದೇಶದಲ್ಲಿ ದೈಹಿಕ ವಿಕಲತೆಯಿಲ್ಲದ ಒಂದೇ ಒಂದು ನಾಯಿಯೂ ಕಾಣಸಿಗಲಾರದು. ಅನ್ನ ಹಾಕಿದವರ ನಮ್ರ ಸೇವಕನಾಗುವ ಪ್ರಾಮಾಣಿಕತೆಗೆ ಮತ್ತೊಂದು ಹೆಸರಾದ ನಾಯಿ ಜಾತಿ ಬಗ್ಗೆ ಏಕೆ ಈ ಅಸ್ಪರ್ಶ ಮನೋಭಾವ? ಅವರು ಪ್ರಶ್ನಿಸಿದರು. ಪ್ರಾಣಿಗಳ ಬಗ್ಗೆ ಭಾರತೀಯರಿಗಿರುವ ತಿರಸ್ಕಾರ ವಿದೇಶಗಳಲ್ಲಿ ಟೀಕೆಯ ವಸ್ತುವಾಗಿದೆ ಎಂದರು ಪೋಲಂಕಿ.

ಭಿಕ್ಷಾ ಪರಂಪರೆ

ಅಲ್ಲಿಂದ ಮಾತು ಬುದ್ಧ ಮತ್ತು ಬಸವಣ್ಣನವರ ಚಿಂತನೆಯತ್ತ ಹರಿಯಿತು. ಅವರಿಬ್ಬರು ಮಾಡಿದ ತಪ್ಪು ಮನುಷ್ಯರನ್ನು ಜೀವನದಿಂದ ವಿಮುಖರಾಗಿಸಿದ್ದು ಎಂದು ಪೋಲಂಕಿ ವಿಶ್ಲೇಷಿಸಿದರು. ಭಾರತಕ್ಕೆ ಭಿಕ್ಷಾ ಪರಂಪರೆಯೇ ಇದೆ. ಬುದ್ಧ ಭಿಕ್ಷುಗಳನ್ನು ಸೃಷ್ಟಿಸಿ ಕೈಯಲ್ಲಿ ಕರಟ ಕೊಟ್ಟರೆ, ಬಸವ ಶರಣರ ಸಂತಾನಕ್ಕೆ ಕಾರಣರಾದ. ಈ ತಪ್ಪಿನಿಂದಾಗಿ ಅವರಿಬ್ಬರ ಚಿಂತನೆ ನೆಲದ ಆಳಕ್ಕೆ ಇಳಿಯಲಿಲ್ಲ. ನಮಗಿಂದು ಬೇಕಾಗಿರುವುದು ಸ್ವಾಭಿಮಾನದ ಪಾಠ. ಬದುಕನ್ನು ಗಾಢವಾಗಿ ಪ್ರೀತಿಸುತ್ತ ದುಡಿದುಣ್ಣುವ ಜೀವನಕ್ರಮ. ಪೋಲಂಕಿ ಪಾಠ ಮುಂದುವರಿದಿತ್ತು.

"ಭಾರತಕ್ಕೆ ಭಿಕ್ಷಾಪರಂಪರೆಯಿದೆ. ಬುದ್ಧ, ಭಿಕ್ಷುಗಳನ್ನು ಸೃಷ್ಟಿಸಿ ಕೈಯಲ್ಲಿ ಕರಟಕೊಟ್ಟರೆ, ಬಸವ ಶರಣರ ಸಂತಾನಕ್ಕೆ ಕಾರಣವಾದ. ನಮಗಿಂದು ಬೇಕಾಗಿರುವುದು ಸ್ವಾಭಿಮಾನದ ಪಾಠ. ಬದುಕನ್ನು ಗಾಢವಾಗಿ ಪ್ರೀತಿಸುತ್ತ ದುಡಿದುಣ್ಣುವ ಜೀವನ ಕ್ರಮ" ಸಾಲಿಗುಡಿಯಲ್ಲಿ ಪೋಲಂಕಿ ಮೇಷ್ಟ್ರ ಪಾಠ ಮುಂದುವರಿದಿತ್ತು. ವಿದ್ಯಾರ್ಥಿಗಳಂತೆ ಎದುರು ಕುಳಿತಿದ್ದ ರೈತರ ಮನದಲ್ಲಿ ವೈಚಾರಿಕ ಕಿಡಿ ನಿಧಾನವಾಗಿ ಹೊತ್ತಿಕೊಳ್ಳುತ್ತಿತ್ತು.

'DEMAND' – ಒತ್ತಾಯ

'ಡಿಮಾಂಡ್' ಎನ್ನುವ ಶಬ್ದಕ್ಕೆ ಅರ್ಥಕೋಶದಲ್ಲಿ 'ಬೇಡಿಕೆ' ಎನ್ನುವ ಅರ್ಥವಿದೆ. ಇದು ತಪ್ಪು ಅಂದರು ಪೋಲಂಕಿ. ದಾಸ್ಯ ಪ್ರವೃತ್ತಿ ನಾವು ಬಳಸುವ ಭಾಷೆಯನ್ನೂ ಬಿಟ್ಟಿಲ್ಲ ಅದು ಬದಲಾಗಬೇಕು ಎಂದು ಅವರು ಒತ್ತಾಯ ಎಂದು ಅರ್ಥವನ್ನು ತಿದ್ದಿದ್ದರು. (ರೈತ ಸಂಘ 'ಒತ್ತಾಯ' ಎಂದೇ ಬಳಸುತ್ತಿದೆ.) ಬಸ್ಸಿನ ಕಂಡಕ್ಟರ್, ಹೋಟೇಲಿನ ಮಾಣಿ, ಸರಕಾರಿ ಕಚೇರಿಯ ಅಧಿಕಾರಿ, ಎಲ್ಲರೊಡನೆಯೂ ವ್ಯವಹರಿಸುವಾಗ ಗುಲಾಮಗಿರಿಯ ಭಾಷೆಯನ್ನೆ ಬಳಸುತ್ತಿರುವ ಬಗ್ಗೆ ವಿಷಾದಿಸಿದ ಪೋಲಂಕಿ ಮಾನಸಿಕವಾಗಿ ನಾವಿನ್ನೂ ಗುಲಾಮರಾಗಿರುವುದೇ ಇದಕ್ಕೆ ಕಾರಣ ಎಂದರು.

ಈ ನೆಲದ ನಿಜವಾದ 'ಒಡೆಯರಾದ' ರೈತರು 'ಸಾರ್,' 'ಸ್ವಾಮಿ,' 'ಸನ್ನಿಧಾನಕ್ಕೆ' ಮುಂತಾದ ಜೀತದಾಳಿನ ಭಾಷೆಯನ್ನು ಬಳಸಬಾರದು, ಸ್ವಾಭಿಮಾನವನ್ನು ರೂಢಿಸಿಕೊಳ್ಳಬೇಕು ಎಂದರು.

ಸ್ವಾಭಿಮಾನದ ಪಾಠ

ಈ ದೇಶದಲ್ಲಿ ಸ್ವಾಭಿಮಾನವಿರುವ ಎರಡು ಜನಾಂಗ ಸಿಖ್ಖರು ಮತ್ತು ತಮಿಳರು. ಮಾನದ ಎದುರು ಪ್ರಾಣವನ್ನು ಕ್ಷುಲ್ಲಕ ಎಂದು ಅವರು ಭಾವಿಸಿರುವ ಕಾರಣದಿಂದಾಗಿಯೇ ಪಂಜಾಬಿನಲ್ಲಿ ಸಿಕ್ಖರು, ಶ್ರೀಲಂಕಾದಲ್ಲಿ ತಮಿಳರು ಕಾದಾಡುತ್ತ ಸಾಯುತ್ತಿದ್ದಾರೆ. ಇಂದಿಗೂ ಉತ್ತರ ಭಾರತದಲ್ಲಿ ದಕ್ಷಿಣದವರೆಲ್ಲರನ್ನೂ ಒಟ್ಟಾಗಿ "ಮದ್ರಾಸಿ" ಎಂದು ಕರೆಯುವುದು ತಮಿಳರು, ಎಲ್ಲಿದ್ದರೂ ತಮ್ಮ ಸ್ವಂತ ಅಸ್ಮಿತೆಯನ್ನು ಉಳಿಸಿಕೊಂಡ ಕಾರಣದಿಂದಾಗಿ. ಆ ಬಗ್ಗೆ ನಾವು ಹೆಮ್ಮೆ ಪಡಬೇಕು......ಪೋಲಂಕಿ ರೈತರಿಗೆ ಸ್ವಾಭಿಮಾನದ ಪಾಠ ಹೇಳಿದರು.

ರಾಜ್ಯ ಅಲ್ಲ ನಾಡು

ಮತ್ತೊಮ್ಮೆ ಭಾಷೆಯನ್ನು ತರಾಟೆಗೆ ತೆಗೆದುಕೊಂಡ ಅವರು 'ರಾಜ್ಯ' ಎನ್ನುವ ಶಬ್ದದ ಬಳಕೆ ಸರಿಯಲ್ಲ ಎಂದರು. ರಾಜ ಆಳುವ ಪ್ರದೇಶ ಮಾತ್ರ ರಾಜ್ಯವಾಗುತ್ತದೆ. ಪ್ರಜೆಗಳೇ ಆಳುವ ಪ್ರದೇಶ ರಾಜ್ಯ ಹೇಗಾಗುತ್ತದೆ? ಕರ್ನಾಟಕ ರಾಜ್ಯ ಎಂದಾದರೆ ರಾಮಕೃಷ್ಣ ಹೆಗಡೆಯನ್ನು ರಾಜನೆಂದು ಒಪ್ಪಿಕೊಳ್ಳಬೇಕಾಗುತ್ತದೆ. 'ಯುನೈಟೆಡ್ ಕಿಂಗ್‌ಡಮ್' ಮತ್ತು ಯುನೈಟೆಡ್ ಸ್ಟೇಟ್‌ಗೂ ಇದೇ ವ್ಯತ್ಯಾಸವಿದೆ. ಬ್ರಿಟನಿನಲ್ಲಿ ರಾಣಿಯಿದ್ದಾಳೆ, ಅಮೆರಿಕದಲ್ಲಿ ಇಲ್ಲ ಎಂದರು ಪೋಲಂಕಿ. State ಅಂದರೆ ರಾಜ್ಯ ಅಲ್ಲ. ಅದಕ್ಕೆ ಮಣ್ಣಿನ ಶಬ್ದ ನಾಡು. ಹುಟ್ಟಿದ ನೆಲದ ಬಗ್ಗೆ ಅತ್ಯುಗ್ರ ಸ್ವಾಭಿಮಾನವಿರುವ ತೆಲುಗರು ಮತ್ತು ತಮಿಳರು ಕ್ರಮವಾಗಿ ಆಂಧ್ರ ಪ್ರದೇಶ (ತೆಲುಗು ದೇಶ?) ತಮಿಳುನಾಡು ಎಂದು ಕರೆಯುತ್ತಾರೆಯೇ ವಿನಃ ಅವರು ತಪ್ಪಿಯೂ 'ರಾಜ್ಯ' ಅನ್ನುವುದಿಲ್ಲ ಎಂದು ಹೊಸಸತ್ಯದತ್ತ ಪೋಲಂಕಿ ಬೊಟ್ಟು ಮಾಡಿದರು.

ಕೈ ಮುಗಿಯಬೇಡಿ

'ಎಂದಿಗೂ, ಯಾರಿಗೂ ಕೈಮುಗಿಯಬೇಡಿ. ಅದು ಅಸಮಾನತೆಯ ಸಂಕೇತ'– ಪೋಲಂಕಿ ಎಚ್ಚರಿಸಿದರು. ಕೈಮುಗಿಯುವ

ಸಂಪ್ರದಾಯವಿರುವ ಜಗತ್ತಿನ ಏಕೈಕ ದೇಶ ಭಾರತ. ಕೀಳು ಜಾತಿಯವರ ಕೈ ಮುಟ್ಟಲಾರದ ಮೇಲ್ವರ್ಗದ ಜನರು ತಮ್ಮ ಕೈಗಳನ್ನೆ ಮುಟ್ಟಿಕೊಂಡು ಆರಂಭಿಸಿದ ಸಂಪ್ರದಾಯವಿದು. 'ನಮಸ್ಕಾರ' ದ ಹಿನ್ನೆಲೆಯಲ್ಲಿ ಅಸ್ಪೃಶ್ಯತೆಯಿದೆ ಎಂದರು.

'ವಿದೇಶದಲ್ಲಿ ಜನರು ಆತ್ಮೀಯರನ್ನು ಎದುರುಗೊಂಡಾಗ ಕೈಕುಲುಕುತ್ತಾರೆ, ಅಪ್ಪಿಕೊಳ್ಳುತ್ತಾರೆ, ಚುಂಬಿಸುತ್ತಾರೆ, ಅದು ಮನುಷ್ಯರೆಲ್ಲರನ್ನು ಸಮಾನತೆಯಿಂದ ಕಾಣುವ ಭಾವ. ಅಂತಹ ಸಂಪ್ರದಾಯವನ್ನೇ ಅನುಸರಿಸಿ, 'ಹಲೋ' ಎನ್ನಲು ಮುಜುಗರವಾದರೆ 'ಭಲೇ' ಅನ್ನಿ. ಕೈಮುಗಿಯುವ ಬದಲು ಕೈ ಕುಲುಕಿ' ಪೋಲಂಕಿ ಹೊಸ ಸಂಪ್ರದಾಯ ಹೇಳಿ ಕೊಟ್ಟರು.

ವ್ಯಕ್ತಿಯ ಅಂತಸ್ತಿಗೆ ತಕ್ಕಂತೆ ಬದಲಾಗುವ ಸಂಬೋಧನೆಯ ಹಿನ್ನೆಲೆಯಲ್ಲಿರುವ ಕುಟಿಲತೆಯನ್ನು ಪೋಲಂಕಿ ಬಯಲಿಗೆಳೆದರು. 'ಸಾಹುಕಾರ್ ಜನಾರ್ಧನರಾಯರು ನಿಧನರಾದರು" ಎಂದು ಬರೆಯುವ ಪತ್ರಿಕೆಗಳು "ಪತ್ರಿಕೆ ಮಾರುತಿದ್ದ ಹುಡುಗ ಸತ್ತ" ಎಂದು ಬರೆಯುತ್ತವೆ. ರಾಮಕೃಷ್ಣ ಹೆಗಡೆ ಆಗಲಿ ಹಳ್ಳಿಯ 'ಸೋಮನಾಗಲಿ ಎಲ್ಲರನ್ನೂ ಏಕವಚನದಲ್ಲಿ ಸಂಬೋಧಿಸಬೇಕು. ಇಂಗ್ಲಿಷ್‌ನಲ್ಲಿನ ಬಳಕೆಯನ್ನೆ ನಾವು ಅನುಸರಿಸಬೇಕು ಎಂದು ಪೋಲಂಕಿ ಹೇಳಿದರು. ಅಲ್ಲಿಗೆ ಬೆಳಗ್ಗೆಯ 'ಪಾಠ' ಮುಗಿಯಿತು.

ಅಂತರ ಜಾತಿ ಮದುವೆಯಾಗಿ

ಸಂಜೆ ದೇವಸ್ಥಾನದ ಜಗಲಿಯಲ್ಲಿಯೇ ಮತ್ತೆ ಸಮಾವೇಶ. ಯಥಾಪ್ರಕಾರ ಗುರುವಿನ ಸ್ಥಾನ ಪೋಲಂಕಿಗೆ. ಚರ್ಚೆಯ ವಸ್ತು–ಜಾತಿ.

"ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 25ರಷ್ಟು ಒಕ್ಕಲಿಗ–ಲಿಂಗಾಯತರಿದ್ದಾರೆ. ಆದರೆ ವಿಧಾನಸಭೆಯಲ್ಲಿ ಅವರು ಶೇಕಡ 75ರಷ್ಟು ಸ್ಥಾನ ಪಡೆದಿದ್ದಾರೆ. ಇದೇ ಕೊಳಕು ಜಾತಿ ವ್ಯವಸ್ಥೆ ರೈತಸಂಘದಲ್ಲಿ ಮುಂದುವರಿದರೆ ಇದು ಉಳಿಯುವುದಿಲ್ಲ ನಿರ್ನಾಮವಾಗುತ್ತದೆ" ಬಿಚ್ಚು ನುಡಿಯ ಪೋಲಂಕಿ ರೈತ ಸಮುದಾಯಕ್ಕೆ ನೇರ ಎಚ್ಚರಿಕೆ ನೀಡಿದರು. ;ಜಾತಿ ಬಿಡಿ; ರೈತ ಜಾತಿ ಕಟ್ಟಿಕೊಳ್ಳಿ ಎಂದರು.

'ಜಾತಿ' ಎನ್ನುವುದು ಹುಟ್ಟಿನಿಂದ ರಕ್ತಸಂಬಂಧದಿಂದ ಬಂದದ್ದು. ಅದನ್ನು ತೊಡೆದುಹಾಕುವುದು ಕೂಡಾ ರಕ್ತಸಂಬಂಧದಿಂದ ಮಾತ್ರ ಸಾಧ್ಯ. ಜಾತಿ ನಿರ್ಮೂಲನೆಗೆ ಅಂತರ ಜಾತಿ ವಿವಾಹವೊಂದೇ ಉಳಿದಿರುವ ದಾರಿ ಪೋಲಂಕಿ ಹೇಳಿದರು.

ಕಳೆದ 3,000ವರ್ಷಗಳಿಂದ ಸ್ವಜಾತಿ ಮದುವೆ ಮಾತ್ರ ಮದುವೆಯಾಗಿ ಭಾರತದ ಮನುಷ್ಯ ತಳಿಯೇ ದುರ್ಬಲವಾಗಿದೆ. ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ಸಂಖ್ಯೆಯ ಕಿವುಡರು, ಮೂಗರು, ಕುರುಡರು, ಬುದ್ಧಿಮಾಂದ್ಯರು ಭಾರತದಲ್ಲಿದ್ದಾರೆ. ಇದು ಜಾತಿಯ ಶಾಪ. ಸ್ವಜಾತಿಯ ಸಂಬಂಧವನ್ನೆ ಬೆಳೆಸಿಕೊಂಡು ಬಂದ ಕಾರಣ ಭಾರತೀಯರು ಉಳಿದ ದೇಶಗಳ ಜನರಿಗಿಂತ ಬೌದ್ಧಿಕವಾಗಿ ದೈಹಿಕವಾಗಿ ದುರ್ಬಲರು. ಜಾತಿ ಬಿಟ್ಟು ಮದುವೆಯಾದ ಕಾರಣದಿಂದಲೇ ವಿದೇಶಗಳ ಜನ ಮುಂದುವರಿದಿದ್ದಾರೆ ಎಂದ ಪೋಲಂಕಿ ಜಾತಿ ಪದ್ಧತಿಯ ದುಷ್ಪರಿಣಾಮವನ್ನು ವಿವರಿಸಿದರು,

ಸೀರಿಯಸ್ ಆಗಿ

ಇದೇ ಸಂದರ್ಭದಲ್ಲಿ ಯಾರೋ 'ದೇವರ' ಬಗ್ಗೆ ಪ್ರಶ್ನೆ ಎತ್ತಿದರು. ತಕ್ಷಣ ಗಂಭೀರ ವದನರಾದ ಪೋಲಂಕಿ "ಸೀರಿಯಸ್" ಆಗಿರುವ ಮನುಷ್ಯ ಎಂದೂ ದೇವರಿದ್ದಾನೆಯೆ ? ಎಂದು ಕೇಳುವುದಿಲ್ಲ" ಎಂದರು.

ಈವರೆಗಿನ ಜಗತ್ತಿನ ಅತ್ಯಂತ ಗಂಭೀರ ಮನುಷ್ಯನಾದ ಬುದ್ಧ ತನ್ನ 80ವರ್ಷಗಳ ಜೀವಿತ ಅವಧಿಯಲ್ಲಿ ಯಾವತ್ತೂ ದೇವರ ಬಗ್ಗೆ ಮಾತಾಡಲಿಲ್ಲ. ಜೀವನದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿರುವ ಸೀರಿಯಸ್ ಮನುಷ್ಯರಿಗೆ ದೇವರ ಬಗ್ಗೆ ತಲೆಕೆಡಿಸಿಕೊಳ್ಳಲು ಪುರುಸೊತ್ತಿರುವುದಿಲ್ಲ. ಅದು ಸೋಮಾರಿ ಪ್ರಶ್ನೆ. ರೈತ ಸೋಮಾರಿಯಲ್ಲ ಅವನಲ್ಲಿ ಅಂತಹ ವ್ಯರ್ಥ ಜಿಜ್ಞಾಸೆಯಿರಬಾರದು ಎಂದು ಅವರು ವಾದಕ್ಕೆ ತೆರೆ ಎಳೆದೇ ಬಿಟ್ಟರು.

ಕುರ್ಚಿಯ ಆಸೆ

"ಆಳಬೇಕು, ಅಧಿಕಾರಬೇಕು ಎನ್ನುವ ಆಸೆಯಿದ್ದರೆ ಖಂಡಿತ ಬಿಟ್ಟು ಬಿಡಿ. ಅಧಿಕಾರದ ಹಿಂದೆ ಹೋದರೆ ಹಾಳಾಗಿ ಹೋಗ್ತೀರಿ" ಪೋಲಂಕಿಯವರ ಎಚ್ಚರಿಕೆಯ ಗಂಟೆ ಮೊಳಗಿತ್ತು. ಅಧಿಕಾರ ಪಡೆದುಕೊಂಡರೆ ಜನಸೇವೆಯನ್ನು ಹೆಚ್ಚು ಶಕ್ತಿಯುತವಾಗಿ ಮಾಡಬಹುದಲ್ಲ? ಪ್ರಶ್ನೆ ರೈತರದು.

ಹಳ್ಳಿಗಳನ್ನು ಭದ್ರಪಡಿಸಿಕೊಳ್ಳದೆ ದಿಲ್ಲಿ ಆಳಲು ಹೋಗಬೇಡಿ. ದಾಖಲೆಬಹುಮತ ಪಡೆದಿರುವ ಸರ್ವಶಕ್ತ ಪ್ರಧಾನಿ ರಾಜೀವ್ ಗಾಂಧಿ ಕೂಡಾ ಹದಗೆಡುತ್ತಿರುವ ದೇಶದ ಸ್ಥಿತಿಯನ್ನು ನಿಯಂತ್ರಿಸಲಾಗದೆ ಅಸಹಾಯಕರಾಗಿ ಕೈಚೆಲ್ಲಿ ಕೂತಿರುವ ಜ್ವಲಂತ ಉದಾಹರಣೆ ನಮ್ಮ ಕಣ್ಣು ಮುಂದಿದೆ ಇದರಿಂದ ಪಾಠ ಕಲಿತುಕೊಳ್ಳಿ ಎಂದು ಪೋಲಂಕಿ ವಿವರಿಸಿದರು.

ಅಧಿಕಾರದ ಕುರ್ಚಿಯೇರಿ ಕುಳಿತ ಕೂಡಲೇ ಎಲ್ಲವೂ ಸಾಧ್ಯವಾಗಲಾರದು. '4% ಮಂದಿ' ಹಳ್ಳಿಯಿಂದ ದಿಲ್ಲಿವರೆಗೆ ಅಧಿಕಾರದ ಸ್ಥಾನಗಳಲ್ಲಿ ಪಟ್ಟಭದ್ರರಾಗಿದ್ದಾರೆ. ಅವರನ್ನು ಕಟ್ಟಿಕೊಂಡು ಏನು ಮಾಡಲು ಸಾಧ್ಯ ? ಎನ್‌ಟಿಆರ್ ಯಾಕೆ ಸೋತ ? ಪೋಲಂಕಿ ಪ್ರಶ್ನಿಸಿದರು.

ಜನಶಕ್ತಿಯ ಬಲತುಂಬಿಕೊಂಡ ರೈತ ಸಂಘಟನೆಯನ್ನು ಬೆಂಗಳೂರು ಖಂಡಿತ ಕರೆಯುತ್ತದೆ. ಅವಸರಬೇಡ ಎಂದರು ಪೋಲಂಕಿ

ಆಗಲೇ ಸುತ್ತಲು ಕತ್ತಲು ಆವರಿಸಿತ್ತು. ವಿದ್ಯುತ್ ಕೂಡಾ ಕೈಕೊಟ್ಟಿತ್ತು. ರೈತ ಸಂಘದ ಕಾರ್ಯಕ್ರಮದ ನಡುವೆ ವಿದ್ಯುತ್ ಕಣ್ಣು ಮುಚ್ಚಾಲೆಯಾಗುವುದು ಸಾಮಾನ್ಯ ಎಂದು ರೈತ ಸಂಘದ ಕಾರ್ಯಕರ್ತರೊಬ್ಬರು ಗೊಣಗುತ್ತಿದ್ದರು. ಅದೇ ರೀತಿ ಅಯ್ಯಪ್ಪ

ದಿನೇಶ್ ಅಮಿನ್ ಮಟ್ಟು

ಪೂಜೆ, ಗಣಪತಿ ಉತ್ಸವ ನಡೆಯುತ್ತಿದ್ದಾಗಲೂ ವಿದ್ಯುತ್ ಮಾಯವಾಗುವುದರ ಹಿಂದೆ ಯಾವುದಕ್ಕೆ ಯಾರೂ ಕಾರಣರೆಂಬುದು ಎಲ್ಲರಿಗೂ ಗೊತ್ತಂತೆ.

ಮೊದಲ ದಿನದಂದು 'ಕೃಷಿನೀತಿ' ಬಗ್ಗೆ ಮಾತನಾಡಬೇಕಾದ ರಾಜ್ಯ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಬಾ ಬು ಗೌ ಡ ಪಾಟೀಲ್ ಸಂಘಟನೆ, ಶಿಸ್ತು, ರೈತಕಾರ್ಯಕರ್ತ ನೀತಿಸಂಹಿತೆ ಬಗ್ಗೆ ಮಾತಾಡಬೇಕಾದ ಪ್ರೊ|| ಎಂ. ಡಿ. ನಂಜುಂಡಸ್ವಾಮಿಯವರು ಕೊನೆಗಳಿಗೆ ವರೆಗೆ ಬಾರದೆ ಇದ್ದ ಕಾರಣ ಪೋಲಂಕಿಯವರ ಪಾಠದಲ್ಲಿಯೇ ಆ ದಿನ ಮುಗಿದಿತ್ತು.

ಪೋಲಂಕಿಯವರ ಮಾತನ್ನೆಲ್ಲ ಕೇಳಿದ ಹಿರಿಯ ರೈತರೊಬ್ಬರು ಊಟ ಮಾಡುತ್ತ ನಮ್ಮ ರೈತಸಂಘ ಎಲ್ಲಿ ಹೋಗುತ್ತಿದೆ ? ಎಂದು ಆತಂಕದಿಂದ ಪ್ರಶ್ನಿಸುತ್ತಿದ್ದರು. 'ಕೈಮುಗಿಯಬೇಡಿ' 'ಏಕವಚನದಲ್ಲಿಯೇ ಮಾತಾಡಿ' ಸಾರ್, ಸ್ವಾಮಿ ಅನ್ನಬೇಡಿ ಈ ಎಲ್ಲ ಕ್ರಾಂತಿಕಾರಿ ಕರೆಗಳಿಂದ ಅತ ಸುಸ್ತಾದಂತೆ ತೋರಿತ್ತು. ಅದು ಅತನೊಬ್ಬನ ಗೊಂದಲ ಆಗಿರಲಿಲ್ಲ ಬಹುಶಃ ಶಿಬಿರಾರ್ಥಿಗಳೆಲ್ಲರದಾಗಿತ್ತು.

(ಮುಂದುವರಿಯುವುದು)

ಇಂಡಿಯಾ ಇಂಚಿಗೇರಿ ಆಗಲಿ

ಪೋಲಂಕಿಯವರ ಮಾತಿನುದ್ದಕ್ಕೂ 'ಇಂಚಿಗೇರಿ' ಆಗಾಗ ಉದ್ಧರಣೆಯಾಗುತ್ತಿತ್ತು. ಏನಿದು 'ಇಂಚಿಗೇರಿ' ? ಹಲವರ ಪ್ರಶ್ನೆಗೆ ರಾಜ್ಯ ರೈತ ಸಂಘದ ಉಪಾಧ್ಯಕ್ಷರಾದ ಬಸವರಾಜ ತಂಬಾಕೆ ವಿವರ ನೀಡಿದರು.

ಬಿಜಾಪುರ ತಾಲೂಕಿನ ಇಂಡಿ ಗ್ರಾಮದಲ್ಲಿ ಇಂಚಿಗೇರಿ ಎನ್ನುವ ಮಠ ಇದೆ. ಮಠಕ್ಕೆ ಸಾಕಷ್ಟು ಉಂಬಳಿ ಜಮೀನಿತ್ತು. ಅದರ ಕೃಷಿಗಾಗಿ ಸುತ್ತಲಿನ ಊರಿನ ಜನ ಬಂದು ಅಲ್ಲಿ ನೆಲೆಸಿದ್ದರು. ಕ್ರಮೇಣ ಮಠವೇ ಒಂದು ಸಣ್ಣ ಹಳ್ಳಿ ಆಯಿತು. ಸಾಮೂಹಿಕ ಬೇಸಾಯ ಜಾರಿಗೆ ಬಂತು. ಬೆಳೆಯಲ್ಲಿ ಸಮಪಾಲು ಎಲ್ಲರಿಗೂ ಸಮಬಾಳು.

ಈ ಮಠದ ವೈಶಿಷ್ಟ್ಯವೆಂದರೆ ಇಲ್ಲಿ ಸ್ವಾಮಿಯ ಪಟ್ಟ ವಂಶಸ್ಥರಿಗೆ ಹೋಗುವುದಿಲ್ಲ. ಅಲ್ಲಿ ವಾಸಿಸುತ್ತಿರುವ 75ಕುಟುಂಬಗಳು ಆರಿಸಿದ ವ್ಯಕ್ತಿಯೇ ಸ್ವಾಮಿ ಆಗುತ್ತಾರೆ ಆ ಸ್ವಾಮಿೂ ಸಂಸಾರಸ್ಥನಾಗುತ್ತಾರೆ. ಹೊರಗಿನ ಹಳ್ಳಿಯವರು ಬಂದು ಅಲ್ಲಿ ದುಡಿಯಬಹುದು. ದುಡಿತಕ್ಕೆ ತಕ್ಕ ಸಂಬಳ ಸಿಗುತ್ತದೆ. ಅಲ್ಲಿ ನೆಲೆಸಲು ಮಠದ ಅನುಮತಿ ಬೇಕು.

ಇಂಚಿಗೇರಿಯಲ್ಲಿ ಮದ್ಯಪಾನ ನಿಷೇಧವಿದೆ. ಮದ್ಯ ಸೇವಿಸಿದವರಿಗೆ 500ರೂ. ದಂಡ ವಿಧಿಸಲಾಗುತ್ತದೆ. ಧೂಮಪಾನವನ್ನು ನಿಷೇಧಿಸಲಾಗಿದೆ. ಅಂತರ ಜಾತಿ ಮದುವೆಗಳೂ ನಡೆಯುತ್ತಿದೆ. ವಿಭಿನ್ನ ಜಾತಿ ಜನ ಅಲ್ಲಿ ಒಟ್ಟಾಗಿ ಬಾಳುತ್ತಿದ್ದಾರಂತೆ.

ತಂಬಾಕೆ ನೀಡಿದ ವಿವರ ಎಲ್ಲರನ್ನು ದಂಗುಬಡಿಸಿತ್ತು.

ಇದರಿಂದ ವಿಶೇಷವಾಗಿ ಆಕರ್ಷಿತರಾಗಿದ್ದ ಪೋಲಂಕಿಯವರು ಇಡೀ ಇಂಡಿಯಾ 'ಇಂಚಿಗೇರಿ' ಆಗಬೇಕು ಎಂದು ಕರೆ ಕೊಟ್ಟೆಬಿಟ್ಟರು.

‘ಕಠಿಣ ದುಡಿಮೆಯಿಂದ ಯಶಸ್ವಿ ಜೀವನ ಸಾಧ್ಯ’

ಕುಂದಾಪುರ, ಜೂ 3– "ನಂಬಿಕೆ, ಪ್ರಾಮಾಣಿಕತೆ ಹಾಗೂ ಕಠಿಣ ಪರಿಶ್ರಮದಿಂದ ಯಶಸ್ವಿ ಹಾಗೂ ಏಳಿಗೆಯ ಜೀವನ ಸಾಧ್ಯ" ಎಂದು ಸುಪ್ರೀಂಕೋರ್ಟಿನ ನ್ಯಾಯಮೂರ್ತಿ ಕೆ.ಜಗನ್ನಾಥ ಶೆಟ್ಟಿ ಹೇಳಿದ್ದಾರೆ.

ಇಲ್ಲಿನ ನ್ಯಾಯವಾದಿಗಳ ಸಂಘದ ಸದಸ್ಯರನ್ನು ಉದ್ದೇಶಿಸಿ ಇತ್ತೀಚೆಗೆ ಅವರು ಮಾತನಾಡುತ್ತಿದ್ದರು.

ಇದಕ್ಕೆ ಮುನ್ನ ನ್ಯಾಯಮೂರ್ತಿ ಶೆಟ್ಟಿಯವರನ್ನು ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಪುರಸಭಾ ಉಪಾಧ್ಯಕ್ಷ ಜಿ.ರಾಮಕೃಷ್ಣ ರಾವ್, ಮಾಜಿ ಶಾಸಕ ಎಸ್.ಎಸ್. ಕೊಳ್ಕೆಬೈಲ್, ವಕೀಲರ ಸಂಘದ ಅಧ್ಯಕ್ಷ ಎಂ.ಎಂ.ಹೆಬ್ಬಾರ್, ಪ್ರಿನ್ಸಿಪಾಲ್ ಮುನ್ಸೀಫ್ ಅಶೋಕ್ ಗದಗ, ಉಡುಪಿಯ ಮ್ಯಾಜಿಸ್ಟ್ರೇಟ್ ದೇಶಪಾಂಡೆ, ಕ್ಷೇತ್ರಾಭಿವೃದ್ಧಿ ಅಧಿಕಾರಿ ವಿಠಲಶೆಟ್ಟಿ, ಸತೂರು ಸೀತಾರಾಮ ಶೆಟ್ಟಿ, ಶ್ರೀಕಾಂತ ಹೆಗ್ಡೆ ಮುಂತಾದವರು ಬರಮಾಡಿಕೊಂಡರು.

ಸರ್ಕಲ್ ಇನ್ಸ್‌ಪೆಕ್ಟರ್ ಹರಿರಾಮ ಭಂಡಾರಿ ಅವರ ನೇತೃತ್ವದಲ್ಲಿ ಸಮವಸ್ತ್ರಧಾರಿ ಪೊಲೀಸ್ ಸಿಬ್ಬಂದಿಯವರಿಂದ ನ್ಯಾಯಮೂರ್ತಿಯವರಿಗೆ ಗೌರವರಕ್ಷೆ ನೀಡಲಾಯಿತು.

ನ್ಯಾಯವಾದಿ ಕೆ.ರಾಧಾಕೃಷ್ಣ ಕಾರಂತರು ಮಾತನಾಡಿ "ಹಂತ ಹಂತವಾಗಿ ಮೇಲೇರಿ ಬಂದ ಶೆಟ್ಟರು ಸುಪ್ರೀಂಕೋರ್ಟಿನಲ್ಲಿ ಉನ್ನತ ಹುದ್ದೆಯಲ್ಲಿರುವುದು ನಮಗೆಲ್ಲಾ ಹೆಮ್ಮೆಯ ಸಂಗತಿ" ಎಂದರು.

ಪ್ರಿನ್ಸಿಪಾಲ್ ಮುನ್ಸೀಫ್ ಅಶೋಕ ಗದಗ, ಉಡುಪಿಯ ಮ್ಯಾಜಿಸ್ಟ್ರೇಟ್ ದೇಶಪಾಂಡೆ, ವಿಠಲ ಶೆಟ್ಟಿ, ಶ್ರೀಕಾಂತ ಹೆಗ್ಡೆ ಮುಖ್ಯ ಅತಿಥಿಗಳಾಗಿದ್ದರು.

ವಕೀಲರ ಸಂಘದ ಅಧ್ಯಕ್ಷ ಎಂ.ಎಂ. ಹೆಬ್ಬಾರ್ ಗಂಧದ ಹಾರ ಹಾಕಿ ನ್ಯಾ। ಶೆಟ್ಟರನ್ನು ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಜಿ.ರಾಮಕೃಷ್ಣ ರಾವ್ ವಂದಿಸಿದರು.

(ಚಿತ್ರದಲ್ಲಿ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಅವರು ಮಾತನಾಡುತ್ತಿರುವುದು. ಎಡದಿಂದ ಬಲಕ್ಕೆ: ಜಿ.ರಾಮಕೃಷ್ಣ ರಾವ್ ಎಸ್.ಎಸ್.ಕೊಳ್ಕೆಬೈಲ್, ಎಂ.ಎಂ. ಹೆಬ್ಬಾರ್, ಜಗನ್ನಾಥ ಶೆಟ್ಟಿ, ಶ್ರೀಮತಿ ಜಗನ್ನಾಥ ಶೆಟ್ಟಿ, ಅಶೋಕ್ ಗದಗ ಹಾಗೂ ದೇಶಪಾಂಡೆ ಅವರನ್ನು ಕಾಣಬಹುದು.)

ಬಡ ಮುಸ್ಲಿಮರಿಗೆ ಫಿತ್ರ್ ವಿತರಣೆ

ಉಡುಪಿ, ಜೂ 3– ಸ್ಥಳೀಯ ಮುಸ್ಲಿಂ ವೆಲ್‌ಫೇರ್ ಎಸೋಸಿಯೇಶನ್ ಕಾರ್ಯಾಲಯಕ್ಕೆ ಸದಸ್ಯರಿಂದಲೂ ಸಾರ್ವಜನಿಕರಿಂದಲೂ, ಇತರ ಸಂಘ, ಸಂಸ್ಥೆಗಳಿಂದ ಒಟ್ಟು 10,505ರೂ.ಗಳಷ್ಟು ಫಿತ್ರ್ ಹಣ ಬಂದಿದೆ.

ಈದುಲ್ ಫಿತರ್‌ನ ಹಿಂದಿನ ರಾತ್ರಿ ಉಡುಪಿಯೂ ಸೇರಿದಂತೆ ಸುತ್ತಮುತ್ತಲ ಗ್ರಾಮೀಣ ಪ್ರದೇಶಗಳ ತೀರ ಬಡಕುಟುಂಬಗಳ ಒಟ್ಟು 132 ಮನೆಗಳಿಗೆ ತಲಾ ಮನೆಯ ಸದಸ್ಯರ ಸಂಖ್ಯೆಯನ್ನು ಹೊಂದಿಕೊಂಡು ತಲಾ 50 ರೂ. 75 ರೂ. ಹಾಗೂ 100 ರೂ.ಗಳಂತೆ ವಿತರಿಸಲಾಯಿತು.

ಸತತ ನಾಲ್ಕನೇ ವರ್ಷ ನಡೆದ ಫಿತ್ರ್ ಸಂಗ್ರಹ ಯೋಜನೆಯಲ್ಲಿ ಈ ವರ್ಷದ ಸಂಗ್ರಹವು ಕಳೆದ ಬಾರಿಗಿಂತ ಶೇ. 60 ರಷ್ಟು ಹೆಚ್ಚಾಗಿರುವುದು ಗಮನಾರ್ಹ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಇಚ್ಲಂಪಾಡಿ ಮಂಡಲ ಪಂಚಾಯತ್ ಪ್ರಧಾನರಾಗಿ ಆಯ್ಕೆಗೊಂಡ ವಿಷ್ಣುಮೂರ್ತಿ ಕೆ. ಎನ್.

ಗಾಯಾಳು ನಿಧನ

ಮಂಗಳೂರು, ಜೂ. 3– ಪುತ್ತೂರಿನಲ್ಲಿ ಮೇ 31ಕ್ಕೆ ರಿಕ್ಷಾ ಅಪಘಾತದಲ್ಲಿ ಗಾಯಗೊಂಡು ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಸೇರಿದ ಬಾಲಕೃಷ್ಣ ಮಂಗಳವಾರ ಮೃತಪಟ್ಟರು.

ಮಹಿಳಾ ಜಾಗೃತಿ ಶಿಬಿರ

ಕೋಟೇಶ್ವರ, ಜೂ 3– ಗ್ರಾಮೀಣ ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳನ್ನು ಹಾಗೂ ಕಾನೂನು ವ್ಯವಸ್ಥೆಯನ್ನು ತಿಳಿದು ತಮ್ಮೊಳಗೆ ಸಂಘಟಿತ ಅಭಿವೃದ್ಧಿ ಯೋಜನೆಗಳನ್ನು ಪ್ರೇರೇಪಿಸುವ ಉದ್ದೇಶದಿಂದ ಸ್ಥಳೀಯ ಆಶಾ ಸಂಸ್ಥೆಯ ಆಶ್ರಯದಲ್ಲಿ, ಆಶಾ ಯುವತಿ ಮಂಡಲದ ನೆರವಿನೊಂದಿಗೆ ಮಹಿಳಾ ಜಾಗೃತಿ ಶಿಬಿರವೊಂದು ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ಇತ್ತೀಚೆಗೆ ಜರಗಿತು.

ಹಣ ನಿರ್ವಹಣೆ, ಉಳಿತಾಯ ಯೋಜನೆ ಇತ್ಯಾದಿಗಳ ಬಗ್ಗೆ ಸ್ಥಳೀಯ ಸಿಂಡಿಕೇಟ್ ಬ್ಯಾಂಕಿನ ಮ್ಯಾನೇಜರ್ ಬಿ. ಪಿ. ಭಂಡಾರಿ ಮಾತನಾಡಿ ತಮ್ಮ ಬ್ಯಾಂಕಿನಿಂದ ಆಶಾ ಯುವತಿ ಮಂಡಲದ ಮೂಲಕ ಕೊಡಮಾಡಿದ ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ಕುಂದಾಪುರ ತಾಲೂಕು ತೋಟ ಮತ್ತು ಅರಣ್ಯ ವಿಭಾಗದ ನಿರ್ದೇಶಕ ಮಹಮ್ಮದ್ ಅನ್ವರ್ ಅವರು ಮಹಿಳಾ ಗ್ರಾಹಕರು ತೋಟ ಮತ್ತು ಅರಣ್ಯ ವಿಷಯದಲ್ಲಿ ಹೊಂದಿರಬೇಕಾದ ಜಾಗೃತಿ ಬಗ್ಗೆ ಮಾಹಿತಿ ನೀಡಿದರು. ಬೆಂಗಳೂರಿನ ಆಕ್ಸ್ ಫಾಮ್ ಸಂಸ್ಥೆಯ ನಿರ್ದೇಶಕ ಪ್ರಮೋದ್ ಉನಿಯಾ ಅವರು ಆಶಾ ಹೊಲಿಗೆ ತರಬೇತಿ ಕೇಂದ್ರದಲ್ಲಿ 1986ರ ಸಾಲಿನಲ್ಲಿ ಹೊಲಿಗೆ ಕಲಿತು ತೇರ್ಗಡೆ ಹೊಂದಿದ ವಿದ್ಯಾರ್ಥಿನಿಯರಿಗೆ ಪ್ರಶಸ್ತಿ ಪತ್ರ ವಿತರಣೆ ಮಾಡುತ್ತಾ, ಕೋಟೇಶ್ವರದಂತಹ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಸಂಘಟನೆಯಾದ ರೀತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಆಶಾ ಸಂಸ್ಥೆಯ ಆಡಳಿತ ನಿರ್ದೇಶಕ ಶ್ರೀರಾಮ ಕಾರಂತರು ಯುವತಿ ಮಂಡಲವನ್ನು ನಡೆಸುವ ರೀತಿಯ ಬಗ್ಗೆ ಹಾಗೂ ಮಹಿಳಾ ಗ್ರಾಹಕರ ಜಾಗೃತಿ ಬಗ್ಗೆ ತರಬೇತಿ ನೀಡಿದರು.

ಆರಂಭದಲ್ಲಿ ಆಶಾ ಕೇಂದ್ರದ ಪ್ರಾಂಶುಪಾಲೆ ಸುಮಿತ್ರಾ ಎಸ್. ಕಾರಂತರು ಸ್ವಾಗತಿಸಿದರು. ಯುವತಿ ಮಂಡಲದ ಅಧ್ಯಕ್ಷೆ ನಿರ್ಮಲಾ ಎಸ್. ಪೈ ಪ್ರಾರ್ಥನೆ ಮಾಡಿದರು. ಪೂರ್ಣಿಮಾ ಭಟ್, ಪ್ರತಿಭಾ ಶೆಟ್ಟಿ ಅವರು ತಮ್ಮ ಅನುಭವಗಳನ್ನು ವಿವರಿಸಿದರು.

● ಉಳ್ಳಾಲ, ಜೂ. 3– ಮಂಗಳೂರು ತಾಲೂಕು ಕಚೇರಿಯ ಹಿರಿಯ ಪಾಸ್ಲಿಯಾರ್ ಅವರು ಇತ್ತೀಚೆಗೆ ಹೃದಯಾಘಾತದಿಂದ ನಿಧನರಾದರು.

ಬೈಂದೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ

ಬೈಂದೂರು, ಜೂ. 3–ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯತ್‌ಗಳಿಗೆ ಇನ್ನೂ ಸಿಬ್ಬಂದಿಯನ್ನು ನೇಮಿಸದಿರುವುದು, ಸಕಾಲಕ್ಕೆ ಈ ಎರಡು ವ್ಯವಸ್ಥೆಗಳ ಕರ್ತವ್ಯನಿರ್ವಹಣೆಗಾಗಿ ಹಣಕಾಸು ಒದಗಿಸದಿರುವುದು, ತಾಲೂಕು ಪಂಚಾಯತ್ ಸಮಿತಿ ಸ್ಥಾಪಿಸದಿರುವ ಜನತಾಸರಕಾರದ ಆಡಳಿತ ವೈಖರಿಯನ್ನು ಬೈಂದೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಹಾಗೂ ಯುವ ಕಾಂಗ್ರೆಸ್ ಸಮಿತಿಗಳ ಕಾರ್ಯಕರ್ತರ ಸಮಾವೇಶ ಖಂಡಿಸಿದೆ.

ಶಾಸಕ ಜಿ. ಎಸ್. ಆಚಾರ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಈ ಸಮಾವೇಶದಲ್ಲಿ ಈ ಕುರಿತು ಕೆಳಗಿನ ನಿರ್ಣಯ ಸ್ವೀಕರಿಸಿ, ಹೊಸ ಆಡಳಿತ ವ್ಯವಸ್ಥೆಯು ಸುಸೂತ್ರವಾಗಿ ಕರ್ತವ್ಯನಿರ್ವಹಿಸಲು ತುರ್ತು ಗಮನ ನೀಡಬೇಕು ಎಂದು ಸರ್ಕಾರವನ್ನು ಆಗ್ರಹಪಡಿಸಲಾಯಿತು.

ದೇಸಾಯಿ ಆಯೋಗದ ವರದಿಯಂತೆ ವೀರಪ್ಪ ಮೊಯಿಲಿಯವರು ನಿರ್ದೋಷಿ ಎಂದು ತೀರ್ಮಾನವಾದ ಪ್ರಯುಕ್ತ, ಅವರ ಚಾರಿತ್ರ್ಯ ಹನನಕ್ಕೆ ಕಾರಣರಾದ ಮುಖ್ಯಮಂತ್ರಿಗಳು ಹಾಗೂ ಭೈರೇಗೌಡರು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು.

ಬಾಹ್ಯಶಕ್ತಿಗಳ ಕುಮ್ಮಕ್ಕಿನಿಂದ ಹಾಗೂ ಆಂತರಿಕ ಅಸೂಯಾಪರ ಶಕ್ತಿಗಳ ಅವಿವೇಕಿ ಪ್ರಚಾರದಿಂದ ರಾಷ್ಟ್ರದ ಪ್ರಧಾನಿಯವರ ಮೇಲೆ ವ್ಯವಸ್ಥಿತವಾಗಿ ಅಪಪ್ರಚಾರ ಮಾಡುವುದನ್ನು ಈ ಸಭೆಯು ತೀವ್ರವಾಗಿ ಖಂಡಿಸಿತು.

ಇತ್ತೀಚೆಗೆ ಒರಿಸ್ಸಾದಲ್ಲಿ ಕೇಂದ್ರದ ಸಹಾಯಕ ವಿತ್ತಸಚಿವ ಜನಾರ್ದನ ಪೂಜಾರಿಯವರ ಮೇಲೆ ಮತ್ತೊಮ್ಮೆ ಹಲ್ಲೆ ಆದುದನ್ನು ಖಂಡಿಸಲಾಯಿತು.

ಜಿಲ್ಲಾ ಪರಿಷತ್–ಹಾಗೂ ಮಂಡಲ ಪಂಚಾಯತ್‌ಗಳಿಗೆ ಇನ್ನೂ ಸಿಬ್ಬಂದಿಗಳನ್ನು ನೇಮಿಸದಿರುವುದು, ಹಣಕಾಸಿನ ಪೂರೈಕೆ ಮಾಡದಿರುವುದು, ತಾಲೂಕು ಪಂಚಾಯತ್ ಸಮಿತಿ ಸ್ಥಾಪಿಸದೆ ಇರುವುದು–ಇವೆಲ್ಲ ಜನರ ಕೈಗೆ ಅಧಿಕಾರ ಎಂಬ ಧ್ಯೇಯ ವಾಕ್ಯವನ್ನು ಜನತಾ ಸರ್ಕಾರವೇ ಮೂಲೆ ಗುಂಪಾಗಿಸಿರುವುದರಿಂದ, ಈ ವ್ಯವಸ್ಥೆ ಸಕ್ರಿಯವಾಗಿ ಕೆಲಸ ಮಾಡಲು ಕೂಡಲೇ ಅನುವು ಮಾಡಿಕೊಡಬೇಕೆಂದು ಒತ್ತಾಯಿಸಲಾಯಿತು.

ಜನತಾ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ನಾಲ್ಕನೇ ಬಾರಿ ವಿದ್ಯುತ್ ದರವನ್ನು ವಿಪರೀತ ಏರಿಸಿದ್ದರಿಂದ, ರೈತರಿಗೆ, ಚಿಕ್ಕ ಉದ್ದಿಮೆದಾರರಿಗೆ, ಗೃಹೋಪಯೋಗಿಗಳಿಗೆ ತುಂಬಾ ತೊಂದರೆ ಆಗಿರುವುದರಿಂದ, ವಿದ್ಯುತ್ ಪೂರೈಕೆ ವ್ಯವಸ್ಥೆ ಸರಿಯಾಗಿರಿಸಿ, ಸೋರಿಕೆ ನಿಲ್ಲಿಸಿ, ದರ ಹೆಚ್ಚಳವನ್ನು ಕೈಬಿಡಬೇಕೆಂದು ಒತ್ತಾಯಿಸಿತು.

ಈ ಮೇಲಿನ ಚರ್ಚೆಯಲ್ಲಿ ಕೆ. ಲಿಂಗಯ್ಯ ಶೆಟ್ಟಿ, ಬಿ. ರಘುರಾಮ ರಾವ್, ಎಸ್. ರಾಮ ಪೂಜಾರಿ, ಕೆ ಸೂರ ನಾಯ್ಕ, ರಿಯಾಜ್ ಅಹ್ಮದ್, ಯು. ನಾರಾಯಣ ಶೆಟ್ಟಿ, ಎ. ಅಣ್ಣಪ್ಪ ಶೆಟ್ಟಿ, ಎಂ. ವಿನಾಯಕ ರಾವ್, ಜಿ. ಹಸನಬ್ಬ, ಮೋಹನರಾಜ ಶೆಟ್ಟಿ, ಎಸ್. ಮದನ ಕುಮಾರ್, ನಾಗಮಾರ್ವಿ, ಶಕುಂತಳಾ ಎನ್, ಬಿ. ಕೃಷ್ಣಪ್ಪ ಶೆಟ್ಟಿ, ಎಸ್. ಎಮ್. ಸಯೀದ್ ಶಿರೂರು ಮೊದಲಾದವರು ಭಾಗವಹಿಸಿದ್ದರು.

ಸೀರೆ ಚಿನ್ನಾಭರಣ ಅಪಹರಣ

ಮಂಗಳೂರು, ಜೂ. 3– ಉರ್ವ ಸಮೀಪದ ಮನೆಯೊಂದಕ್ಕೆ ನುಗ್ಗಿದ ಅಪರಿಚಿತರ ಗುಂಪೊಂದು ರೂ 7000 ಮೌಲ್ಯದ ಚಿನ್ನಾಭರಣ ಅಲ್ಲದೇ ಬೆಲೆಬಾಳುವ ಸೀರೆಗಳನ್ನು ಅಪಹರಿಸಿ ಪರಾರಿಯಾಗಿದೆ.

ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪರೀಕ್ಷೆಯಲ್ಲಿ ಫೇಲು ವಿದ್ಯಾರ್ಥಿನಿ ಆತ್ಮಹತ್ಯೆ

ಮಂಗಳೂರು, ಜೂ. 3– ಈ ಬಾರಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಫೇಲಾದುದಕ್ಕೆ ಬೇಸರಗೊಂಡು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಪ್ರಕರಣ ಸುರತ್ಕಲ್ ಸಮೀಪದ ಮಧ್ಯ ಗ್ರಾಮದಲ್ಲಿ ನಿನ್ನೆ ನಡೆಯಿತು.

ಕ್ಯಾನ್ಸಿ ಡಿಸೋಜ (18) ಎಂಬ ಯುವತಿ ನಿನ್ನೆ ಹಗಲಿನಲ್ಲಿ ಸುಮಾರು 10-30ಕ್ಕೆ ಮನೆಯ ಪಕ್ಕಾಸಿಗೆ ನೇಣು ಹಾಕಿಕೊಂಡು ಮೃತಪಟ್ಟಳು.

ಎಸ್.ಎಸ್.ಎಲ್.ಸಿ.ಯಲ್ಲಿ ಈ ಬಾರಿ ಫೈಲಾದುದಕ್ಕೆ ಆಕೆ ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ಶಂಕಿಸಲಾಗಿದೆ. ಅವಳು ಆತ್ಮಹತ್ಯೆ ಮಾಡಿಕೊಳ್ಳುವಾಗ ಅವಳ ತಾಯಿ ಮತ್ತು ಅಕ್ಕ ಮನೆಯಲ್ಲಿರಲಿಲ್ಲ ಎಂದು ಗೊತ್ತಾಗಿದೆ.

ಬಜ್ಪೆ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಪಿ. ಕೃಷ್ಣರಾವ್ ತನಿಖೆ ನಡೆಸುತ್ತಿದ್ದಾರೆ.



ಉಪ್ಪಿನಂಗಡಿ ಮಂಡಲ ಪಂಚಾಯತ್ ಪ್ರಧಾನರಾಗಿ ಆಯ್ಕೆಯಾಗಿರುವ ಕೆ. ರಾಮನಾಯಕ್.

ದಾಂಧಲೆ ನಡೆಸುತ್ತಿದ್ದ ವ್ಯಕ್ತಿಯ ಬಂಧನ

ಮಂಗಳೂರು, ಜೂ. 3– ನಗರದ ಸೂಟರ್ ಪೇಟೆಯಲ್ಲಿ ಸೋಮವಾರ ಗಲಾಟೆ ಮಾಡಿದ್ದಕ್ಕಾಗಿ ನವೀನ್ ರಾಜ್ ಎಂಬವನನ್ನು ಪಾಂಡೇಶ್ವರ ಸಬ್ ಇನ್ಸ್‌ಪೆಕ್ಟರ್ ಹರಿಶ್ಚಂದ್ರ ಬಂಧಿಸಿದರು.

ಅವನನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದಾಗ ನ್ಯಾಯಾಧೀಶರು ಜಾಮೀನಿನ ಮೇಲೆ ಬಿಡುಗಡೆಗೊಳಿಸುವಂತೆ ಆದೇಶ ನೀಡಿರುತ್ತಾರೆ.

ಗಂಗೊಳ್ಳಿ ಜಿಲ್ಲಾ ಪರಿಷತ್ ಕ್ಷೇತ್ರ

ಸಮಸ್ಯೆಗಳ ಸುಳಿಯತ್ತ ದೃಷ್ಟಿ ಹಾಯಿಸಿದಾಗ

ಮೀನುಗಾರಿಕೆ ಮತ್ತು ಕೃಷಿಯನ್ನೇ ಹೆಚ್ಚು ಅವಲಂಬಿಸಿಕೊಂಡ ಕುಂದಾಪುರ ತಾಲೂಕಿನ ಗಂಗೊಳ್ಳಿ ಕೂಲಿ ಕಾರ್ಮಿಕರನ್ನು, ಕೃಷಿಕರನ್ನು ಒಳಗೊಂಡಿರುವ ಜಿಲ್ಲಾ ಪರಿಷತ್ ಕ್ಷೇತ್ರ. ಸುತ್ತಲೂ

...ಯಾಲ್ಲಿನ ಪೋಲಿತ್ತಲು ಎಲ್ಲಾ ಪ್ರಯತ್ನ ಮಾಡುವುದಾಗಿ' ಭರವಸೆ ಕೊಡುತ್ತಲೇ ಬಂದಿದ್ದಾರೆ. ಆದರೆ ಮೀನುಗಾರಿಕೆಯನ್ನೇ ನಂಬಿಕೊಂಡು ಬಂದಂತಹ ಜನ 'ಹೊಳೆ ಕ್ರಾಂತಿ'ಯ ಕೃತಿಯ ಯಾವಾಗ ಆಗುತ್ತ

ನೀರಿನ ಸರಬರಾಜು ಸಾಧಾರಣ ಮಟ್ಟಿಗೆ ಸುವ್ಯವಸ್ಥೆಯಿಂದ ಕೂಡಿದೆ. ಇನ್ನೊಂದು ಆಶ್ಚರ್ಯದ ಸಂಗತಿಯೆಂದರೆ ಸಾಕಷ್ಟು ಬೆಳೆದಿರುವ ಗಂಗೊಳ್ಳಿಯ ಉದ್ದಗಲಕ್ಕೂ ನೀರು ಹರಿಯುವ ಚರಂಡಿಯೇ ಇಲ್ಲ.

ಬರುವ ಬಸ್ಸುಗಳು ರಸ್ತೆ ಮೇಲೆ ತಿರುಗಿ, ರಸ್ತೆ ಮೇಲೆ ನಿಲ್ಲುವ ಸ್ಥಿತಿಯಿದೆ. ಅಲ್ಲದೆ ಈ ಕ್ಷೇತ್ರಕ್ಕೆ ಒಂದು ಪೊಲೀಸ್ ಠಾಣೆ ಅಗತ್ಯವಾಗಿ ಬೇಕಾಗಿದೆ.

ಗಂಗೊಳ್ಳಿಯಲ್ಲಿ ಒಂದು ಸರಕಾರಿ

ಪಾಡಲು-ಹುಲ್ಲಿನ ಮಾಡು, ಮಳೆಗಾಲದಲ್ಲಿ ಸುರಿಯುವ ಸಾಧ್ಯತೆಯಿದೆ. ಹೊಸಾಡು ಗ್ರಾಮದಲ್ಲಿರುವ ಶಾಲೆಗೆ ಸರಿಯಾದ ಆಟದ ಮೈದಾನವಿಲ್ಲ.

ಎಲ್ಲಾ ಗ್ರಾಮದಲ್ಲೂ ವಿದ್ಯುತ್‌ಸೌಕರ್ಯ

ಶಿವಮೊಗ್ಗ ಜಿಲ್ಲಾ ರೈತ ಅಧ್ಯಯನ ಶಿಬಿರ — 2

‘ಸೊಂಟದಲ್ಲಿ ಸದಾ ಕುಡುಗೋಲು ಇರಲಿ...’

ಶಿಬಿರದ ಎರಡನೇ ದಿನವೂ ಫೋಲಂಕಿಯವರಿಂದಲೇ ಆರಂಭ. ಶಿಬಿರವನ್ನು ರೈತ ಬಾವುಟ ಏರಿಸುವ ಮೂಲಕ ಅಧಿಕೃತವಾಗಿ ಉದ್ಘಾಟಿಸಿದರು.

ಮತ್ತೊಂದು ಕ್ಷಣದಲ್ಲಿ ನಾನು ಸಾಯಲಿದ್ದೇನೆಂದು ನನಗೆ ಗೊತ್ತಾದಾಗ ನಾನೇನು ಹೇಳುತ್ತಿದ್ದೇನೋ ಅದನ್ನೇ ಹೇಳಲು ಬಂದಿದ್ದೇನೆ......ಎಂದು ಆರಂಭಿಸಿದ ಫೋಲಂಕಿ ಮತ್ತು 'ಸೀರಿಯಸ್' ವಿಶ್ಲೇಷಣೆಗೆ ಇಳಿದರು.

'ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ ಈವರೆಗೆ ರೈತರಿಗೆ ಸ್ವಾತಂತ್ರ್ಯ ಬಂದಿಲ್ಲ. ಮೊದಲ ಬಾರಿಗೆ ಸ್ವಾತಂತ್ರ್ಯ ಹೋರಾಟ ಪ್ರಾರಂಭವಾಗಿದೆ. ಇದು ರೈತ ಸಂಗ್ರಾಮ. ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟ ಕೇವಲ ಬ್ರಾಹ್ಮಣರ ಹೋರಾಟ ಆಗಿತ್ತು' ಎಂದು ಫೋಲಂಕಿ ಅಭಿಪ್ರಾಯಪಟ್ಟರು.

ವರ್ಣಾಶ್ರಮ ವ್ಯವಸ್ಥೆಯಲ್ಲಿ ನಂಬಿಕೆಯಿಟ್ಟಿದ್ದ ಗಾಂಧೀಜಿ ಎಂದೂ ಜನಪರ ನಿಲುವು ಹೊಂದಿರಲಿಲ್ಲ...... ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷರಾಗಿದ್ದಕ್ಕೆ ಗಾಂಧೀಜಿ ಪ್ರತಿಕ್ರಿಯಿಸುತ್ತ 'ಲಿಂಕನ್ ಕಟ್ಟಿಗೆ ಒಡೆಯುವ ಕೆಲಸ ಬಿಟ್ಟು ರಾಜಕೀಯಕ್ಕೆ ಇಳಿಯಬಾರದಿತ್ತು' ಎಂದು ಹರಿಜನ ಪತ್ರಿಕೆಯಲ್ಲಿ ಹೇಳಿದ್ದರು. ತನ್ನ ಕೊನೆಗಾಲದಲ್ಲಿ ಗಾಂಧೀಜಿ ಧರ್ಮನಾಶವಾಗುತ್ತಿದೆ ಎಂದು ಕೊರಗುತ್ತಿದ್ದರು. ಹರಿಜನ ಉದ್ಧಾರ ಕಾರ್ಯಕ್ರಮ ಕೇವಲ ಪ್ರಾಯಶ್ಚಿತ್ತ ರೂಪದ್ದಾಗಿತ್ತು. ಈ ರೀತಿ ಫೋಲಂಕಿ ತಾವು ತಿಳಿದುಕೊಂಡ ಗಾಂಧೀಜಿಯವರ ಮತ್ತೊಂದು ಮುಖವನ್ನು ಅನಾವರಣಗೊಳಿಸುತ್ತ ಹೋದರು.

ಇಂಡಿಯಾದ ದಮನಿತ ವರ್ಗಕ್ಕೆ ಮೊದಲ ಬಾರಿಗೆ ಬಾಯಿಬಲ ನೀಡಿದವರು ಬ್ರಿಟಿಷರು. ಇಂಗ್ಲಿಷ್ ಶಿಕ್ಷಣದ ಮೂಲಕ ಅವರು ಹೊರಜಗತ್ತಿಗೊಂದು ಕಿಂಡಿ ಕೊರೆದರು. ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡಿದರು. ಇದನ್ನೆಲ್ಲ ಕಂಡ ಬ್ರಾಹ್ಮಣರ ಕಣ್ಣು ಕೆಂಪಾಯಿತು. ಅವರು ಬ್ರಿಟಿಷರನ್ನು ಓಡಿಸಲು ಹೋರಾಟ ಪ್ರಾರಂಭಿಸಿದರು. ಅದು ಕೊನೆಯವರೆಗೆ ಬ್ರಾಹ್ಮಣರ ಹೋರಾಟವಾಗಿಯೇ ಉಳಿಯಿತು ಎಂದು ಫೋಲಂಕಿ ಹೊಸ ಇತಿಹಾಸವನ್ನೇ ಬಿಚ್ಚಿಟ್ಟರು.

ಬ್ರಿಟಿಷರು ಭಾರತಕ್ಕೆ ಬಂದದ್ದರಿಂದ ಸೆಗಣಿ ಹೊರುವ ಕೆಲಸ ತಪ್ಪಿ ತಾನು ವಿದ್ಯೆ ಕಲಿಯುವಂತಾಯಿತು ಎಂದ ಕುವೆಂಪು ಮಾತನ್ನು ಉಲ್ಲೇಖಿಸಿದ ಫೋಲಂಕಿ, ಬ್ರಿಟಿಷರಿದ್ದಾಗ ಎಷ್ಟು ಕೋಮು ಗಲಭೆ, ಹರಿಜನರ ಮೇಲಿನ ದೌರ್ಜನ್ಯ, ವರದಕ್ಷಿಣೆ ಸಾವು ನಡೆದಿದ್ದವು ? ಈಗೆಷ್ಟು ನಡೆಯುತ್ತಿದೆ ಎಂದು ಪ್ರಶ್ನಿಸಿದರು.

ಹರಿಜನರಿಗೆ ಪ್ರತ್ಯೇಕ ಚುನಾವಣೆ ನಡೆಸಬೇಕೆಂದು ಅಂಬೇಡ್ಕರ್ ತನ್ನ ಬೇಡಿಕೆ ಮುಂದಿಟ್ಟಾಗ ಉಪವಾಸ ಮಾಡಿ ಸಾಯುತ್ತೇನೆಂದು ಬೆದರಿಕೆ ಹಾಕಿದ ಗಾಂಧೀಜಿ "ನಾವು ಭಾರತವನ್ನು ಒಂದು ಸಾವಿರ ವರ್ಷ ಆಳಿದ್ದೇವೆ ನಮಗೆ ಪ್ರತ್ಯೇಕ ಮುಸ್ಲಿಂ ರಾಷ್ಟ್ರಕೊಡಿ" ಎಂದು ಜಿನ್ನಾ ಬೇಡಿಕೆ ಮುಂದಿಟ್ಟಾಗ ಯಾಕೆ ತೆಪ್ಪಗೆ ಒಪ್ಪಿಬಿಟ್ಟರು ಎಂದು ಫೋಲಂಕಿ ಪ್ರಶ್ನಿಸಿದರು.

ಸೊಂಟಕ್ಕೆ ಕುಡುಗೋಲು

ಬಲಿಷ್ಠನಾದವನನ್ನು ಜಗತ್ತೆ ದಿಟ್ಟಿಸಿ ನೋಡುತ್ತಿದೆ. ಸಿಕ್ಖರು ಇಂದು ಎಲ್ಲರ ನಿದ್ದೆಗೆಡಿಸುವಷ್ಟು ಮಟ್ಟಕ್ಕೆ ಹೋಗಲು ಅವರಲ್ಲಿನ ಸ್ವಾಭಿಮಾನ ಮತ್ತು ಅದರಿಂದ ಮೂಡಿಬಂದ ಧೈರ್ಯ, ಸಾಹಸ ಕಾರಣ ಎಂದ ಫೋಲಂಕಿ, ರೈತರೆಲ್ಲ ಸಿಖ್ಖರಂತೆ ಆಯುಧಧಾರಿಗಳಾಗಬೇಕು. ಕಡ್ಡಾಯವಾಗಿ ಸೊಂಟಕ್ಕೆ ಕುಡುಗೋಲು ಕಟ್ಟಿಕೊಳ್ಳಬೇಕು. ತಲೆಗೆ ಹಸುರು ರುಮಾಲು. ಸೊಂಟಕ್ಕೆ ಕುಡುಗೋಲು ಇದು ರೈತರೆಲ್ಲರ ಲಾಂಛನವಾಗಲಿ. ಮೈಸೂರಿನಲ್ಲಿ ಒಂದು ರೈತ ಸಮಾವೇಶ ನಡೆಸಿ ಮಣ್ಣಿನ ಮಗ ಕುವೆಂಪುನಿಂದಲೇ ಕುಡುಗೋಲು ದೀಕ್ಷೆ ಪಡೆಯಿರಿ ಎಂದು ವೀರಾವೇಶದ ಕರೆ ನೀಡಿದರು. ಕುಡುಗೋಲು ದುಡಿಮೆಯ ಸಂಕೇತವಾಗಲಿ ಅದು ಹಿಂಸಾಚಾರದ ಸಂಕೇತವಾಗದಿರಲಿ ಎಂದು ಫೋಲಂಕಿ ಎಚ್ಚರಿಸಲು ಮರೆಯಲಿಲ್ಲ. ಫೋಲಂಕಿಯವರ ಮಾತಿನ ನಿಗೂಢತೆಯನ್ನು ರೈತರಲ್ಲಿ ಎಷ್ಟು ಮಂದಿ ಅರ್ಥಮಾಡಿಕೊಂಡಿದ್ದಾರೋ ಊಹೆಗೆ ಬಿಟ್ಟ ವಿಚಾರ.

ಮತ್ತೊಮ್ಮೆ ಶಬ್ದ ಸೀಳುವ ಸಾಹಸಕ್ಕೆ ಇಳಿದ ಫೋಲಂಕಿಯವರ ಕೈಗೆ ಮೊದಲು ಸಿಕ್ಕಿದ ಶಬ್ದ 'ಆರಂಭ' ಆರು ಅಂದರೆ ನೇಗಿಲು. ಆರಂಭ ಅಂದರೆ ನೇಗಿಲು ಹೂಡುವುದು ಎಂದರೆ ಆರಂಭಿಸುವುದು ಎಂದರ್ಥ ಎಂದು ಮಣ್ಣಿನ ಶಬ್ದವನ್ನು ಪರಿಚಯಿಸಿದರು.

'ಪ್ರೊಫೆಸರ್', 'ಡಾಕ್ಟರ್' ಅನ್ನಬೇಡಿ ಸಂಗಾತಿ ಅನ್ನಿ; ಸಂಘ ಎನ್ನುವ ಬದಲು ತಪ್ಪು (ಕುಂಡಿ ಸೀಳುವ ಕೆಲಸ ಮಾಡಬೇಡಿ) ಸಂಗ ಎಂದು ಹೇಳಿ ಹೀಗೆ ಅವರ ಶಬ್ದ ವಿಶ್ಲೇಷಣೆ ಮುಂದುವರಿಯಿತು.

ಈ ರೀತಿ ಯಾವುದೇ ನಿರ್ದಿಷ್ಟ ವಿಷಯದ ಬಗ್ಗೆ ಮಾತನಾಡದೆ ~~ಅವ್ಯಾಹತ~~ ಅವರ ಮಾತಿನ ಪ್ರವಾಹ ಹರಿದಿತ್ತು.

“ಬಲಿಷ್ಠನಾದವನನ್ನು ಜಗತ್ತೆ ದಿಟ್ಟಿಸಿ ನೋಡುತ್ತದೆ. ರೈತರೆಲ್ಲ ಸಿಕ್ಖರಂತೆ ಆಯುಧಧಾರಿಗಳಾಗಬೇಕು. ಕಡ್ಡಾಯವಾಗಿ ಸೊಂಟಕ್ಕೆ ಕುಡುಗೋಲು ಕಟ್ಟಿಕೊಳ್ಳಿ. ತಲೆಗೆ ಹಸುರು ರುಮಾಲು, ಸೊಂಟದಲ್ಲಿ ಕುಡುಗೋಲು ಇದು ರೈತರೆಲ್ಲರ ಲಾಂಛನವಾಗಲಿ. ಮಣ್ಣಿನ ಮಗ ಕುವೆಂಪುವಿನಿಂದಲೇ ಕುಡುಗೋಲು ದೀಕ್ಷೆ ಪಡೆಯಿರಿ. ಫೋಲಂಕಿ ರೈತರಿಗೆ ಸ್ವಾಭಿಮಾನದ ಪಾಠ ಹೇಳಿದರು.

ಗೋಬರ್ ಗ್ಯಾಸ್ ಸ್ಥಾಪಿಸಿ

ಗೋಬರ್ ಗ್ಯಾಸ್ ಸ್ಥಾವರಗಳನ್ನು ಹಳ್ಳಿಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಬೇಕು. ಎಷ್ಟೋ ಹಳ್ಳಿಗಳಲ್ಲಿ ಕಕ್ಕಸಿಲ್ಲ. ಅಂತಹ ಕಡೆಗಳಲ್ಲಿ ಕಕ್ಕಸುಗಳನ್ನು ಕಟ್ಟಿಸಿ. ಅಲ್ಲಿನ ಮಲದಿಂದ ಗ್ಯಾಸ್ ತಯಾರಿಸಿ. ಇದರಿಂದ ವಿದ್ಯುತ್ತಿನ ಮೇಲೆ ಅವಲಂಬಿಸಬೇಕಾದ ಅನಿವಾರ್ಯತೆ ರೈತರಿಗೆ ಇರುವುದಿಲ್ಲ ಎಂದ ಫೋಲಂಕಿ ಮಾತಿಗೆ ರೈತ ಸಮುದಾಯದಲ್ಲಿ ವಿರೋಧ ವ್ಯಕ್ತವಾಯಿತು.

ಹಳ್ಳಿ ಜನರಿಗೆ ಗೋಬರ್ ಗ್ಯಾಸ್ ತಯಾರಿಸಲು ಕರೆ ನೀಡುವ ಮೂಲಕ ಸರಕಾರ ಅವರು ಪಡೆಯಬೇಕಾಗಿರುವ ವಿದ್ಯುತ್ತಿನ ಪಾಲನ್ನು ಕಸಿದುಕೊಳ್ಳುತ್ತಿದೆ. ಹಳ್ಳಿ ಜನರಿಂದ ಕಸಿದುಕೊಂಡ ವಿದ್ಯುತ್ತನ್ನು ನಗರದ ಜನ ತಮ್ಮ ಮನೆ-ತೋಟಗಳ ಅಲಂಕಾರಕ್ಕೆ ದುರುಪಯೋಗಪಡಿಸುತ್ತಿದ್ದಾರೆ. ಹಳ್ಳಿ ಜನರಿಂದ ಗುಡಿಕೈಗಾರಿಕೆಗಳನ್ನು ಎಳೆದೊಯ್ದು ನಗರದ ಕಾರ್ಖಾನೆಗಳಲ್ಲಿ ವಿದ್ಯುತ್ ಪೋಲಾಗುತ್ತಿದೆ. ಪ್ಲಾಸ್ಟಿಕ್ ಪಾತ್ರೆಗಳನ್ನು ತಯಾರಿಸುವ ಕಾರ್ಖಾನೆಗಳಿಂದಾಗಿ ಹಳ್ಳಿಯ ಕುಂಬಾರ ನಿರುದ್ಯೋಗಿಯಾಗಿದ್ದಾನೆ. ಅಂತಹ ಕಾರ್ಖಾನೆಗಳಿಗೆ ಪೂರೈಸುವ ವಿದ್ಯುತ್ತಿಗಾಗಿ ನಾವು ತ್ಯಾಗ ಮಾಡಬೇಕೇ? ಉದ್ರಿಕ್ತ ರೈತರ ನಂತರದ ಪ್ರಶ್ನೆಗಳಿಗೆ ಬಹುಶಃ ಫೋಲಂಕಿಯವರಲ್ಲೂ ಉತ್ತರವಿರಲಿಲ್ಲ. ಫೋಲಂಕಿಯವರ ಒಟ್ಟು ವಿಚಾರದ ಬಗ್ಗೆ ಚರ್ಚೆ ನಡೆಯಿತು. ಫೋಲಂಕಿಯವರ ಹೆಚ್ಚಿನ ಅಭಿಪ್ರಾಯಗಳನ್ನು ಅಲ್ಲಿ ಸೇರಿದ್ದ ಬಹುತೇಕ ಜನ ಒಪ್ಪದಿದ್ದರೂ ಅದನ್ನು ನೇರವಾಗಿ ಪ್ರಶ್ನಿಸುವ ದಾರ್ಷ್ಟ್ಯವನ್ನು ತೋರಲಿಲ್ಲ. ಅಂತಹ ಚರ್ಚೆಗೆಲ್ಲ ಊಟ-ನಿದ್ದೆ ಹೊತ್ತಿನಲ್ಲಷ್ಟೇ ಹೆಚ್ಚು ಪಡೆಯಿತೆನ್ನಬಹುದು.

ಯಾವುದು ಪಾಶ್ಚಾತ್ಯ ಸಂಸ್ಕೃತಿ

ಫೋಲಂಕಿಯವರ ಮಾತನ್ನೆಲ್ಲ ಕೇಳಿದ ಒಬ್ಬ ರೈತರು ತಮ್ಮ ಸಂದೇಹ ಮುಂದಿಟ್ಟರು. "ನಮ್ಮ ದೇಶದ ಸಂಸ್ಕೃತಿಯನ್ನು ಕೈಬಿಟ್ಟು ವಿದೇಶಿ ಸಂಸ್ಕೃತಿಯನ್ನು ಕೈಗೆತ್ತಿಕೊಳ್ಳಲು ಕರೆ ನೀಡುವುದು ಸರಿಯೇ? ಅವರ ಪ್ರಶ್ನೆ. culture ಎನ್ನುವ ಪದವೇ cultivation ನಿಂದ ಬಂದದ್ದು. ಅದು ಕನ್ನಡದಲ್ಲಿ ಸಂಸ್ಕೃತಿ ಎಂದು ತಪ್ಪಾಗಿ ಉಲ್ಲೇಖವಾಗಿದೆ. culture ಎಂಬ ಇಂಗ್ಲಿಷ್ ಶಬ್ದಕ್ಕೆ ಸಮಾನ ಕನ್ನಡ ಶಬ್ದ 'ಜನಪದ.' ಆ ಜನಪದ ಸಂಪ್ರದಾಯವನ್ನೇ ಅಳವಡಿಸಿಕೊಳ್ಳಿ ಎಂದಷ್ಟೆ ತಮ್ಮ ವಿಚಾರ ಎಂಬ ಸ್ಪಷ್ಟನೆ ಫೋಲಂಕಿಯವರಿಂದ

ಆತ್ಮೀಯರನ್ನು ಅಪ್ಪಿಕೊಂಡು ಸ್ವಾಗತಿಸುವುದು, 'ಭಲೇ' ಎಂದು ಸಂಬೋಧಿಸುವುದು, ಸೊಂಟಕ್ಕೆ ಕುಡುಗೋಲು ಕಟ್ಟುವುದು ಪಾಶ್ಚಾತ್ಯ ಸಂಸ್ಕೃತಿ ಇವು ಫೋಲಂಕಿಯವರ ಪ್ರಶ್ನೆ. ಚರ್ಚೆ ಅಲ್ಲಿಗೆ ಮುಕ್ತಾಯ.

ಅರಣ್ಯ ನೀತಿ

ಅರಣ್ಯ ನೀತಿ ಬಗ್ಗೆ ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಅರಣ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ। ಎ. ಭಾಸ್ಕರ್ ತಮ್ಮ ಪ್ರಬಂಧ ಮಂಡಿಸಿದರು.

ಪಶ್ಚಿಮ ಘಟ್ಟದಲ್ಲಿನ ಕಾಡಿನ ಅಳಿವು-ಉಳಿವಿನ ಪ್ರಶ್ನೆಯ ಮೇಲೆಯೇ ದಕ್ಷಿಣ ಭಾರತದ ಭವಿಷ್ಯ ಅವಲಂಬಿತವಾಗಿದೆ. ಇಲ್ಲಿ ಶೇಕಡ 80 ರಷ್ಟಿದ್ದ ಕಾಡು ಶೇಕಡ 20 ಕ್ಕೆ ಇಳಿದಿದೆ. 1952 ರ ನಂತರ ಸುಮಾರು 4.5 ಮಿಲಿಯ ಹೆಕ್ಟೇರ್ ಅರಣ್ಯ ನಾಶವಾಗಿದೆ ಎಂದು ಹತಾಶದನಿಯಿಂದಲೇ ಭಾಸ್ಕರ್ ತಮ್ಮ ಮಾತನ್ನಾರಂಭಿಸಿದರು.

ರಾಜ್ಯದಲ್ಲಿ ಸುಮಾರು 1590 ಮರ ಆಧಾರಿತ ಕಾರ್ಖಾನೆಗಳಿವೆ. ಇವುಗಳಿಗೆ ಆಹಾರವಾಗಿ ಪಶ್ಚಿಮ ಘಟ್ಟದ ಅರಣ್ಯಗಳು ನಾಶವಾಗುತ್ತಿವೆ ಎಂದು ಅವರು ಇದಕ್ಕೆ ಪರಿಹಾರವನ್ನು ಸೂಚಿಸಿದರು. ವಿದೇಶಗಳಲ್ಲಿ ಮರಗಳು ಕೊಳ್ಳುವ ಗಿರಾಕಿಯಿಲ್ಲದೆ ಕೊಳೆಯುತ್ತ ಬಿದ್ದಿವೆ. ಮರದ ದಿಮ್ಮಿ ಆಮದಿಗೆ ಶೇಕಡ 100 ರಷ್ಟಿದ್ದ ಕಸ್ಟಮ್ ಡ್ಯೂಟಿಯನ್ನು ಈಗಾಗಲೇ ಶೇಕಡ 10 ಕ್ಕೆ ಇಳಿಸಿದ್ದು ಈ ಪ್ರಯೋಜನವನ್ನು ಸದುಪಯೋಗಪಡಿಸಿಕೊಂಡು ಮರ ಆಧಾರಿತ ಕಾರ್ಖಾನೆಗಳು ವಿದೇಶಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಮರ ಆಮದು ಮಾಡಿಕೊಂಡರೆ ಇಲ್ಲಿನ ಅರಣ್ಯ ಉಳಿದೀತು ಎಂದರು.

"ಅರಣ್ಯ ಬೆಳೆಸುವ ಕಾರ್ಯಕ್ರಮ ಕೇವಲ ಸರಕಾರದ ಕಾರ್ಯಕ್ರಮವಾಗಿಯೇ ಉಳಿದಿದೆ. ಜನ ತಮ್ಮ ಭೂಮಿಯಲ್ಲಿದ್ದ ಮರ ಕಡಿಯುತ್ತಾರೆ. ಆದರೆ ಬೆಳೆಯುವುದಿಲ್ಲ. ಮರ ಬೆಳೆಸುವುದು ಸರಕಾರದ ಕೆಲಸ ಅನ್ನುತ್ತಾರೆ. ಸರಕಾರ ಕಾಡು ಬೆಳೆಸಿ ನಮ್ಮ ಮನೆಬಾಗಿಲಿಗೆ ಸೌದೆ ತಂದುಕೊಡುತ್ತಾರೆ ಎಂದು ನಾವು ತಿಳಿದಿದ್ದರೆ ಅದು ಮೂರ್ಖತನ" ಎಂಬ ಭಾಸ್ಕರ್ ಅವರ ದನಿಯಲ್ಲಿ ವಿಷಾದವಿತ್ತು.

ದೊಡ್ಡ ಕೈಗಾರಿಕೆಗಳಿಂದಾಗಿ ಕಾಡು ನಾಶವಾಗುತ್ತಿದೆ. ಅವುಗಳ ನಿವೇಶನಕ್ಕೆ, ರಸ್ತೆ ಸೌಲಭ್ಯಕ್ಕೆ, ಕಾರ್ಮಿಕರ ವಸತಿಗೆ ಹೀಗೆ ಕಾಡುಗಳನ್ನು ನಿರ್ದಯವಾಗಿ ಕಡಿಯಲಾಗುತ್ತದೆ. "ಮಲೆನಾಡಿಗೆ ಬೃಹತ್ ಕೈಗಾರಿಕೆಗಳು ಬೇಡ. ನಗರೀಕರಣದಿಂದ ದೂರವಿರೋಣ" ಎಂದು ಅವರು ಕಳಕಳಿಯಿಂದ ವಿನಂತಿಸಿಕೊಂಡರು.

ಕೃಷಿ ಭೂಮಿ ವಿಸ್ತರಿಸಲು ಕಾಡುಗಳನ್ನು ಕಡಿಯಲಾಗುತ್ತಿದೆ ಎಂಬ ಭಾಸ್ಕರ್ ಅವರ ಮಾತಿನಿಂದ ಕೆರಳಿದ ರೈತರು ವಾಗ್ವಾದಕ್ಕೆ ಇಳಿದರು.

ಅರಣ್ಯಗಳನ್ನು ಸರಕಾರವೇ ಕೈಗಾರಿಕೆಗಳಿಗಾಗಿ ನಾಶ ಮಾಡುತ್ತಿರುವುದನ್ನು ಕಾಣುತ್ತಿರುವ ಜನರೂ ತಮ್ಮ ಅಗತ್ಯಕ್ಕೆ ತಕ್ಕಂತೆ ಮರಗಳನ್ನು ಕಡಿಯುವುದರಲ್ಲಿ ತಪ್ಪು ಕಾಣುತ್ತಿಲ್ಲ. ಸರಕಾರದ ಬೇಜವಾಬ್ದಾರಿ ನೀತಿಯಿಂದಾಗಿ ಅರಣ್ಯ 'ನಮ್ಮದು' ಎಂದು ಅನ್ನಿಸುವುದಿಲ್ಲ. ಅಂತಹ ವಾತಾವರಣ ನಿರ್ಮಾಣವಾಗಬೇಕು ಎಂಬ ಅಭಿಪ್ರಾಯ ರೈತರದು.

ನೀಲಗಿರಿ

ಭಾಸ್ಕರ್ ಅವರು ಮುಂದುವರಿಯುತ್ತ ನೀಲಗಿರಿ ಬಗ್ಗೆ ಪ್ರಸ್ತಾಪಿಸಿದರು. ಅದಕ್ಕಾಗಿ ಕಾಯುತ್ತಿದ್ದರೇನೋ ಎನ್ನುವಂತೆ 'ನೀಲಗಿರಿ' ಎಂಬ ಶಬ್ದ ಕೇಳಿದೊಡನೆ ಸಿಟ್ಟುಗೊಂಡ ರೈತರು ನೇರ ಮಾತಿನ ಸಮರಕ್ಕೆ ತೊಡಗಿದರು.

ನೀಲಗಿರಿ ಶೀಘ್ರಪ್ರಗತಿಯಲ್ಲಿ ಬೆಳೆಯುತ್ತದೆ. ಅವುಗಳನ್ನು ದನಕರುಗಳು ಮೇಯುವುದಿಲ್ಲ. ಗಿಡವನ್ನು ಕಡಿದ ಮೇಲೆ ಪುನಃ ಚಿಗುರುತ್ತದೆ. ಇವೆಲ್ಲಕ್ಕಿಂತ ಮಿಗಿಲಾಗಿ ನೀಲಗಿರಿ ಲಾಭದಾಯಕ ಮರ. ಅದಕ್ಕೆ ಉತ್ತಮ ಬೆಲೆಯಿದೆ ಎಂದೆಲ್ಲ ಹೇಳಿದ ಭಾಸ್ಕರ ನೀಲಗಿರಿ ಬೆಳೆಯುವುದನ್ನು ಬೆಂಬಲಿಸುತ್ತಿರುವಂತೆ ಕಂಡಿತು.

ಕೇವಲ ನೀಲಗಿರಿಯನ್ನು ಎಕರೆಗಟ್ಟಳೆ ಭೂಮಿಯಲ್ಲಿ ಬೆಳೆಸುವುದು ಅಪಾಯಕಾರಿ. ಆದರೆ ಇತರ ಮರಗಳ ಜತೆಮಿಶ್ರ ಕಾಡಾಗಿ ನೀಲಗಿರಿಯನ್ನು ಬೆಳೆಸಬಹುದು. ಖುಷ್ಕಿ ಭೂಮಿಯಲ್ಲಿ ನೀಲಗಿರಿ ಬೆಳೆಸಬಾರದು ಇತ್ಯಾದಿ ವಿವರ ನೀಡುತ್ತ ಹೋದ ಭಾಸ್ಕರ್ ಅವರು, ನೀಲಗಿರಿಯ ಸಾಧಕ-ಬಾಧಕಗಳ ಬಗ್ಗೆ ಖಚಿತವಾದ ವೈಜ್ಞಾನಿಕ ಅಭಿಪ್ರಾಯ ನೀಡಲೇ ಇಲ್ಲ.

ಎಕರೆಗಟ್ಟಳೆ ಭೂಮಿಯಲ್ಲಿ ಬೆಳೆಯುವುದರಿಂದಾಗಿ ನೀಲಗಿರಿಯಿಂದ ಅಪಾಯವಿದೆಯಾದರೆ ಅದರ ಬದಲು ಬೇರೆ ಜಾತಿಯ ಮರಗಳನ್ನು ಬೆಳೆಸಬಹುದಲ್ಲ ? ಇದು ರೈತರೊಬ್ಬರ ಪ್ರಶ್ನೆ. ನೀಲಗಿರಿ ಲಾಭದಾಯಕ ಬೆಳೆ ಎನ್ನುವ ಭಾಸ್ಕರ್ ಅವರ ಅಭಿಪ್ರಾಯದಿಂದ ಕೆರಳಿದ ಎನ್. ಡಿ. ಸುಂದರೇಶ್ ಲಾಭದಾಯಕ ಬೆಳೆಗಳನ್ನೆಲ್ಲ ಬೆಳೆಯಬಹುದಾದರೆ ನಾನು ಭಂಗಿ ಬೆಳೆಸುತ್ತೇನೆ ಸರಕಾರ ಅನುಮತಿ ನೀಡುವುದೇ ? ಎಂದು ಪ್ರಶ್ನಿಸಿದರು.

ಕೊನೆಗೂ ಭಾಸ್ಕರ್ ಅವರು ಜಾರಿಕೆಯ ಉತ್ತರದ ಮೂಲಕವೇ ಅಲ್ಲಿಂದ ಜಾರಿಕೊಂಡರು.

ನೆಹರೂ ನೀತಿಯಿಂದ ಅರಣ್ಯ ನಾಶ

ಅರಣ್ಯ ನೀತಿ ಬಗ್ಗೆ ಎರಡನೇ ಪ್ರಬಂಧ ಮಂಡಿಸಿದವರು ಡಾ। ಸೋಮಶೇಖರ್ ರೆಡ್ಡಿ.

1950 ರಲ್ಲಿ ಆಹಾರ ಧಾನ್ಯದ ಕೊರತೆ ಕಾಣಿಸಿಕೊಂಡಾಗ ಜನರು ಎಲ್ಲಿ ವ್ಯವಸಾಯಕ್ಕೆ ಯೋಗ್ಯ ಜಾಗವಿದೆಯೋ ಅದಕ್ಕೆಲ್ಲ ಅರ್ಜಿ ಗುಜರಾಯಿಸಿ ಗದ್ದೆ ಮಾಡಿಕೊಂಡರು. 1952 ರಲ್ಲಿ ಸ್ವತಂತ್ರ ಭಾರತದ ಮೊದಲ ಅರಣ್ಯ ಕಾನೂನು ಜಾರಿಗೆ ಬಂದಿತು. ಆದರೆ ನೆಹರೂ ನೀತಿಯಿಂದಾಗಿ ಆಗಲೇ ಕೈಗಾರಿಕೆಗಳಿಗಾಗಿ ಕಾಡು ನಾಶವಾಗತೊಡಗಿತ್ತು ಎಂದ ಸೋಮಶೇಖರ್ ಹಲವು ಪ್ರಕರಣಗಳನ್ನು ಉಲ್ಲೇಖಿಸಿದರು.

ದಾಂಡೇಲಿಯ ವೆಸ್ಟ್‌ಕೋಸ್ಟ್ ಕಾಗದ ಕಾರ್ಖಾನೆಗೆ ಟನ್ನಿಗೆ ಒಂದು ರೂಪಾಯಿಯಂತೆ ಬೊಂಬು ಒದಗಿಸಲಾಗಿತ್ತು. ನಾಗರ ಹೊಳೆ ಬಂಡಿಪುರಗಳಲ್ಲಿ ಟೀಕ್ ಬೆಳೆಸಲು ಅರಣ್ಯ ನಾಶಮಾಡಲಾಯಿತು. ಕಬಿನಿ ಯೋಜನೆಗಾಗಿ ಕಾಗಲ್ ಕೋಟೆಯ 20,000 ಎಕರೆ ಭೂಮಿ ಮುಳುಗಿದ್ದು ಪುನರ್‌ವಸತಿಗಾಗಿ 22,000 ಎಕರೆ ಅರಣ್ಯ ನೆಲಸಮವಾಯಿತು. 1951 ರಿಂದ 1981 ರ ವರೆಗಿನ 30 ವರ್ಷಗಳ ಅವಧಿಯಲ್ಲಿ ವ್ಯವಸಾಯ ಭೂಮಿ ಶೇಕಡ ನಾಲ್ಕರಷ್ಟು ಜಾಸ್ತಿಯಾಗಿದೆ ಎಂದು ಸೋಮಶೇಖರ್ ಅಳಿಯುತ್ತಿರುವ ಅರಣ್ಯದ ವಿವರ ನೀಡಿದರು.

ನೀಲಗಿರಿಯಿಂದಾಗಿ ತೀವ್ರ ಹಾನಿಗೊಳಗಾದ ಜಿಲ್ಲೆ ಕೋಲಾರ. ಆ ಬಗ್ಗೆ ಕೆಲವು ಆಶ್ಚರ್ಯಕರ ವಿವರ ನೀಡಿದರು ಸೋಮಶೇಖರ್.

ಕೋಲಾರದಲ್ಲಿ ಹೆಚ್ಚಾಗಿ ರಾಗಿ ಬೆಳೆಯುತ್ತಿದ್ದರು. ಈಗಿನ ಬೆಲೆ ಸ್ಥಿತಿಯಲ್ಲಿ ರಾಗಿ ಲಾಭದಾಯಕವಲ್ಲದ ಕಾರಣ ಮತ್ತೊಂದು ಲಾಭದ ಬೆಳೆಗೆ ಕಾತರಿಸುತ್ತಿದ್ದರು. ಆಗ ಎದುರಾದ ಬೆಳೆ ನೀಲಗಿರಿ. ಪಾಲಿಫೈಬರ್ ಕಾರ್ಖಾನೆಗಳು ನೀಲಗಿರಿ ಮರವನ್ನು ಟನ್ನಿಗೆ ರೂ. 500 ರಿಂದ 600 ರ ವರೆಗಿನ ಬೆಲೆಯಲ್ಲಿ ಖರೀದಿಸುತ್ತಿದ್ದವು. ಅಲ್ಲದೆ ಬೆಳೆಯಲು ಎಕರೆಗೆ 2,000 ರೂ. ಪ್ರಕಟಿ ಹಣ ಕೊಡುತ್ತಿದ್ದರು. ಕುಸಿದ ರಾಗಿಯ ಬೆಲೆಯಿಂದಾಗಿ ತತ್ತರಿಸಿದ್ದ ರೈತ ಬಹುಬೇಗ ಇದಕ್ಕೆ ಮರುಳಾದ ... ಸೋಮಶೇಖರ್ ರೆಡ್ಡಿ ವಿವರಿಸಿದರು.

1982 ರಲ್ಲಿ ಜಾರಿಗೆ ಬಂದ ಸಾಮಾಜಿಕ ಅರಣ್ಯ ಯೋಜನೆಯಿಂದಾಗಿಯೇ ನೀಲಗಿರಿ ಬೆಳೆಯಲಿಲ್ಲ

ದಿನೇಶ್ ಅಮಿನ್ ಮಟ್ಟು

1976 ರಲ್ಲಿಯೇ ರೈತರು ನೀಲಗಿರಿ ಬೆಳೆಸಲಾರಂಭಿಸಿದ್ದರು ಎಂದು ಸೋಮಶೇಖರ್ ಹೇಳಿದರು. ಇವರೂ ನೀಲಗಿರಿ ಬಗ್ಗೆ ಖಚಿತವಾದ ಅಭಿಪ್ರಾಯವನ್ನು ನೀಡದೆ, ಮಾತು ಮುಗಿಸಿದರು. ಆದರೆ ಭಾಸ್ಕರ್ ಅವರಂತೆ ಅರಣ್ಯ ನಾಶಕ್ಕೆ ರೈತರೂ ಕಾರಣ ಎಂದು ಹೇಳಿದುದರಿಂದ ಇವರ ಮಾತುಗಳು ಹೆಚ್ಚಿನ ರೈತರಿಗೆ ಪ್ರಿಯವಾದಂತೆ ಕಂಡಿತು.

ಎರಡನೇ ದಿನ 'ಶಿಕ್ಷಣ ನೀತಿ' ಬಗ್ಗೆ ಡಾ। ಕೃಷ್ಣರಾಜುಲು, "ರೈತ ಸಂಘಟನೆಯಲ್ಲಿ ವಿದ್ಯಾರ್ಥಿ ಪಾತ್ರ" ಬಗ್ಗೆ ಪ್ರೊ। ಕೆ. ಸಿ. ಬಸವರಾಜ್ ಮತ್ತು 'ಬಜೆಟ್ ಮತ್ತು ಯೋಜನಾ ನೀತಿ' ಬಗ್ಗೆ ಪ್ರೊ। ಎಂ. ಡಿ. ನಂಜುಂಡ ಸ್ವಾಮಿ ಅವರು ಪ್ರಬಂಧಗಳನ್ನು ಮಂಡಿಸಬೇಕಿತ್ತು. ಆದರೆ ಈ ಮೂವರೂ ಅಂದು ಗೈರು ಹಾಜರಾಗಿದ್ದರು

ಎರಡನೇ ದಿನವೂ ವಿದ್ಯುತ್ ಕೈಕೊಟ್ಟದ್ದರಿಂದ ರಾತ್ರಿ ನಡೆಯಬೇಕಾದ ಮನರಂಜನಾ ಕಾರ್ಯಕ್ರಮ ಸತತವಾಗಿ ಎರಡನೇ ದಿನವೂ ರದ್ದಾಗಿತ್ತು

ದನದ ಮಾಂಸ ತಿನ್ನಿ

'ದನದ ಮಾಂಸ ತಿನ್ನಿ'– ಫೋಲಂಕಿ ರೈತರಿಗೆ ಸಲಹೆ ನೀಡಿದರು. "ಅತೀ ಕಡಿಮೆ ಬೆಲೆಗೆ ಸಿಗುವ ಪೌಷ್ಟಿಕ ಆಹಾರ ದನದ ಮಾಂಸ. ಅದನ್ನು ಉಪಯೋಗಿಸಲು ಮಡಿವಂತಿಕೆ ಬೇಡ" ಅವರೆಂದರು.

"ದನದ ಮಾಂಸ ತಿನ್ನುವವರೇ ಪ್ರಪಂಚವನ್ನು ಆಳುತ್ತಿದ್ದಾರೆ. ಅವರೇ ನಮ್ಮನ್ನೂ ಆಳಿದ್ದರು..." ಫೋಲಂಕಿ ದನದ ಮಾಂಸದ ಮಹಿಮೆಯನ್ನು ಹೇಳತೊಡಗಿದರು.

ಆಗಲೇ ರೈತರಲ್ಲಿ ಗುಜುಗುಜು ಆರಂಭವಾಗಿತ್ತು. ನಂತರ ಊಟದ ಸಮಯದಲ್ಲೆಲ್ಲ 'ದನದ ಮಾಂಸ' ರೈತರ ಮಾತಿನ ಆಹಾರವಾಗಿರುತ್ತಿತ್ತು.



ಪಡುವರಿ ದೇವಾಲಯ ಇಂದು ಪ್ರತಿಷ್ಠಾಪನೆ

ಬೈಂದೂರು, ಜೂ. 4– ಇಲ್ಲಿಗೆ ಸಮೀಪದ ಪಡುವರಿಯ ಪುರಾತನ ಶ್ರೀ ಪಂಚಲಿಂಗೇಶ್ವರಿ ಅಮ್ಮನವರ ದೇವಾಲಯದ ಗರ್ಭಗುಡಿ ಕಲಾಮಂಟಪ ಹಾಗೂ ಕಲ್ಯಾಣಮಂಟಪವು ಪುನರ್ ನಿರ್ಮಾಣಗೊಂಡಿದ್ದು ಜೂನ್ ಐದರಂದು ಪ್ರತಿಷ್ಠಾಪನೆ ನೆರವೇರಲಿದೆ.

ಜಿಲ್ಲಾ ಜನತಾ ಪಕ್ಷದ ಅಧ್ಯಕ್ಷ ಬಿ. ಅಪ್ಪಣ್ಣ ಹೆಗ್ಡೆಯವರು ಗರ್ಭಗುಡಿ ಕಲಾಮಂಟಪವನ್ನು ಉದ್ಘಾಟಿಸುವರು. ಯುತ್ತರೆ ಮಂಜಯ್ಯಶೆಟ್ಟಿ ಅಧ್ಯಕ್ಷತೆ ವಹಿಸುವರು. ಸದ್ರಿ ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ಕೆ ನೆರವಾಗಿರುವ ಉದ್ಯಮಿ ಆರ್. ಎನ್. ಶೆಟ್ಟಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು.

ಮುರ್ಡೇಶ್ವರ ದಿವಂಗತ ನಾಗಪ್ಪಶೆಟ್ಟಿ ಕಲ್ಯಾಣಮಂಟಪವನ್ನು ಶಾಸಕ ಜಿ. ಎಸ್. ಆಚಾರ್ ಉದ್ಘಾಟಿಸುವರು. ದೀಕ್ಷಿತ್ ಪದ್ಮನಾಭ ಸೋಮಯಾಜಿಯವರು ಧಾರ್ಮಿಕ ವಿಧಿಗಳು, ಕಲಾಭಿವೃದ್ಧಿ ಹಾಗೂ ಬ್ರಹ್ಮ ಕಲಶೋತ್ಸವದ ನೇತೃತ್ವ ವಹಿಸುವರು.

ಈ ದೇವಾಲಯದ ಪುನರ್ ನಿರ್ಮಾಣ ಕಾರ್ಯವು ದಿವಂಗತ ನಾಗಪ್ಪ ಶೆಟ್ಟಿ ಮನೆತನದವರಿಂದ ಇತ್ತೀಚೆಗೆ ಪೂರ್ಣಗೊಂಡಿತು

ಉಡುಪಿ ಜುಬಿಲಿ ಚರ್ಚ್ ಹಗರಣ

ಯು.ಬಿ.ಎಂ. ಅಧಿಕಾರ ಸ್ವೀಕಾರಕ್ಕೆ ಅಡ್ಡಿ?

(ಮುಂಗಾರು ವರದಿ)

ಉಡುಪಿ, ಜೂ.4– ದ.ಕ. ಜಿಲ್ಲೆ ಮತ್ತು ಕೊಡಗು ಜಿಲ್ಲೆಗಳ ಸಂಯುಕ್ತ ಯು. ಬಿ. ಎಂ. ಸಭೆಗಳ ಅಧ್ಯಕ್ಷ ರೆ| ಫಾ| ಆರ್. ಎಲ್. ಜತ್ತನ್ನರವರ ಆದೇಶದಂತೆ ಮೇ 31ರ ಭಾನುವಾರ ಇಲ್ಲಿನ ಯು. ಬಿ. ಎಂ. ಚರ್ಚಿನ ಧರ್ಮಗುರುವಾಗಿ ಅಧಿಕಾರ ಸ್ವೀಕರಿಸಲು ಸುಮಾರು 600 ಜನ ತಮ್ಮ ಬೆಂಬಲಿಗರೊಂದಿಗೆ ಚರ್ಚಿನ ಆವರಣಕ್ಕೆ ಪ್ರವೇಶಿಸಿದ ರೆ| ಮನೋಹರ ಕುಂದರ್‌ರವರು, ಸಿ. ಎಸ್. ಐ ಬಣದವರ ಅಡ್ಡಿಯಿಂದ 'ಅಧಿಕಾರ ಸ್ವೀಕಾರ ಸಮಾರಂಭ' ಜರಗದೆ ವಾತಾವರಣ ಬಿಗಡಾಯಿಸಿದ ಪ್ರಕರಣ ಜರಗಿದೆ.

ಈ ಮೊದಲೇ ಅಲ್ಲಿ ತಮ್ಮ 60–70 ಜನ ಬೆಂಬಲಿಗರೊಂದಿಗೆ ಜಮಾಯಿಸಿದ್ದ ಸಿ. ಎಸ್. ಐ. ಬಣದ ದೇವದತ್‌ರವರು, ಯು. ಬಿ. ಎಂ. ಬಣದವರೊಡನೆ ವಾಗ್ಯುದ್ಧಕ್ಕೆ ಇಳಿದು, ವಾತಾವರಣ ಹದಗೆಟ್ಟು, ಇನ್ನೇನು-ಉಭಯ ಬಣಗಳೊಳಗೆ ಕಾದಾಟ ಜರಗಬೇಕೆನ್ನುವಷ್ಟರಲ್ಲಿ, ಮುಂಜಾಗರೂಕತೆಯಿಂದ ಅಲ್ಲಿ ಬಂದೋಬಸ್ತಿನಲ್ಲಿದ್ದ ಟೌನ್ ಎಸ್. ಐ. ಕೆ. ರಮಾನಂದ ರೈ ನೇತೃತ್ವದ ಪೊಲೀಸ್ ಸಿಬ್ಬಂದಿ ಮಧ್ಯೆ ಪ್ರವೇಶಿಸಿ, ಮುಂದಾಗಬಹುದಾದ ಅಹಿತಕರ ಘಟನೆಗಳನ್ನು ತಪ್ಪಿಸಿದರೆಂದೂ ತಿಳಿದುಬಂದಿದೆ.

ಎಸ್. ಐ. ರಮಾನಂದ ರೈಯವರು ಈ ಪ್ರಕರಣದ ಸಂಬಂಧ ಎಸ್. ಟಿ. ಕುಂದರ್ ಮತ್ತು ಇತರ ಆರು ಜನರನ್ನು ದಸ್ತಗಿರಿ ಮಾಡಿ, ನಂತರ ಜಾಮೀನಿನಲ್ಲಿ ಬಿಟ್ಟಿದ್ದಾರೆ.

ಯು. ಬಿ. ಎಂ. ಪದಾಧಿಕಾರಿಗಳು ಈ ಘಟನೆಯ ಕುರಿತು ಎಸ್. ಪಿ. ಮತ್ತು ಡಿ. ವೈ.ಎಸ್ಪಿ.ಯವರಿಗೆ ದೂರು ನೀಡಿ, ತಮಗಾದ ಅನ್ಯಾಯದ ಕುರಿತು ನೋವು ತೋಡಿಕೊಂಡಿದ್ದಾರೆಂದೂ ತಿಳಿದು ಬಂದಿದೆ.

ನಗರದ ಬಾರ್ ಕೌನ್ಸಿಲ್‌ನಲ್ಲಿ ನ್ಯಾ| ಕೆ. ಜಗನ್ನಾಥ ಶೆಟ್ಟಿ

ಮಂಗಳೂರು, ಜೂ. 4–ಭಾರತದ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಕೆ. ಜಗನ್ನಾಥಶೆಟ್ಟಿಯವರು ಇತ್ತೀಚೆಗೆ ನಗರದಬಾರ್ ಕೌನ್ಸಿಲ್‌ನಲ್ಲಿ ದಿ| ಯು. ರಮಾನಾಥ ಕಿಣಿಯವರ ಭಾವಚಿತ್ರವನ್ನು ಅನಾವರಣ ಮಾಡಿದರು.

ಈ ಸಂದರ್ಭದಲ್ಲಿ ಅವರು ರಮಾನಾಥ ಕಿಣಿಯವರ ಪ್ರಾಮಾಣಿಕತೆ ಮತ್ತು ತತ್ವನಿಷ್ಠೆಯ ಬಗ್ಗೆ ಮಾತನಾಡಿ ನ್ಯಾಯವಾದಿಗಳು ಬಡ ಜನರ ಬಡತನದ್ದಕ್ಕೆ ಸ್ಪಂದಿಸಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ನ್ಯಾಯವಾದಿ ಡಿ. ಮೋಹನರಾವ್ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನ್ಯಾಯವಾದಿ ಬಿ.ವಿ. ಆಚಾರ್ಯ ಅವರು ಆಗಮಿಸಿದ್ದರು.



ಪುತ್ತೂರು ತಾಲೂಕಿನ ಕೋಡಿಂಬಾಡಿ ಮಂಡಲ ಪಂಚಾಯತ್ ಪ್ರಧಾನರಾಗಿ ಆಯ್ಕೆಗೊಂಡ ಕೆ. ಬಾಲಕೃಷ್ಣ ಬೋರ್ಕರ್.

ಬಡಜನರಿಗೆ ವಸ್ತ್ರ ವಿತರಣೆ

ಮಂಜೇಶ್ವರ, ಜೂ. 4– ಆಲ್ಟ್ರುಯಿಸ್ಟ್ ಇಸ್ಲಾಂ ರಿಲೀಫ್ ಕಮಿಟಿ ವತಿಯಿಂದ ಪವಿತ್ರ ರಮ್ಜಾನ್ ಸಲುವಾಗಿ 150 ಬಡ ಜನರಿಗೆ ವಸ್ತ್ರವಿತರಣೆ ಕಾರ್ಯಕ್ರಮವನ್ನು ಎಂ. ಐ. ಮದ್ರಸದಲ್ಲಿ ಮೌಲಾನಾ ಬಿ. ಕೆ. ಮಹಮೂದ್ ಮೌಲವಿಯವರು ನೆರವೇರಿಸಿದರು.

ಕುಂಞ ಅಹ್ಮದ್ ಮೌಲವಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವಾರಸುದಾರರಿಲ್ಲದ ಸ್ಕೂಟರ್ ಪತ್ತೆ

ಮೂಲ್ಕಿ, ಜೂ. 4. ಮೂಲ್ಕಿ ಪುನರೂರು ಸರ್ವಿಸ್ ಸ್ಟೇಶನ್‌ನ ಬಳಿ ಸುಮಾರು 3 ತಿಂಗಳಿನಿಂದ ವಾರಿಸುದಾರರಿಲ್ಲದ ಸ್ಕೂಟರ್ (ಶ್ರೀ ಸುಬ್ರಹ್ಮಣ್ಯ. ಎಂ. ಇ. ಜಿ. 9839) ಪತ್ತೆಯಾಗಿದೆ.

ವಾರಿಸುದಾರರು ಸ್ಕೂಟರಿನ ಸರಿಯಾದ ಮಾಹಿತಿ ನೀಡಿ ಪಡೆದುಕೊಳ್ಳಬಹುದು ಎಂದು ಪುನರೂರು ಸರ್ವಿಸ್ ಸ್ಟೇಶನ್‌ನ ಮಾಲೀಕ ಹರಿಕೃಷ್ಣ ಪುನರೂರು ಪತ್ರಿಕಾಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

ಭಜನಾ ಮಂಗಲೋತ್ಸವ

ಕಾಸರಗೋಡು, ಜೂ 4– ಈ ತಾಲೂಕಿನ ನೆಕ್ರಾಜೆ ಗ್ರಾಮದ ಮಾವಿನಕಟ್ಟೆಯ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಸಮಿತಿಯ ಆಶ್ರಯದಲ್ಲಿ ಪೆರಡಾಲ ಭಜನಾ ಸಂಕೀರ್ಣದ ನಾಲ್ಕನೆಯ ವಿಶಾಷ ಭಜನೆ ಇತ್ತೀಚೆಗೆ ನೆರವೇರಿತು.

ಸಂಕೀರ್ಣದ ಅಧ್ಯಕ್ಷ ಪಿ.ಎಸ್.ಶಾಸ್ತ್ರಿ ಅವರಿಂದ ದೀಪ ಪ್ರತಿಷ್ಠೆ ಜರಗಿತು. ವೈ. ಸೀತಾರಾಮ ಭಟ್ಟರು ಪ್ರಾರ್ಥನೆ ನಡೆಸಿದರು. ವಿವಿಧ ಭಜನಾ ಸಂಘಗಳ ಸದಸ್ಯರಿಂದ ಭಜನೆ ನಡೆಯಿತು.

ಭಜನಾ ಮಂದಿರ ಉದ್ಘಾಟನೆ

ಉಪ್ಪಳ, ಜೂ. 4- ಇಲ್ಲಿನ ರೈಲ್ವೇ ನಿಲ್ದಾಣದ ಬಳಿ ಮೂರು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾದ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರವನ್ನು ಪೇಜಾವರ ಮಠಾಧೀಶ ವಿಶ್ವೇಶ ತೀರ್ಥ ಸ್ವಾಮೀಜಿಯವರು ಇತ್ತೀಚೆಗೆ ಉದ್ಘಾಟಿಸಿದರು.

ಕಟೀಲು ಗೋಪಾಲಕೃಷ್ಣ ಅಸ್ರಣ್ಣ, ಬೈಂದೂರು ಶ್ರೀರಾಮಚಂದ್ರ ಆಶ್ರಮದ ವಿರಗಾನಂದ ಸ್ವಾಮಿ, ಶೇಣಿ ಗೋಪಾಲಕೃಷ್ಣ ಭಟ್ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದು ಮಾತನಾಡಿದರು. ರಾಮಚಂದ್ರ ಕಡಮಣ್ಣಾಯ ಅವರು ಅಧ್ಯಕ್ಷತೆ ವಹಿಸಿದರು.

ಭಜನಾ ಮಂದಿರ ನಿರ್ಮಾಣ ಸಮಿತಿ ಅಧ್ಯಕ್ಷ ಕೆ. ನಾರಾಯಣ ಶೆಟ್ಟಿ ಸ್ವಾಗತಿಸಿ, ಸೇವಾ ಸಮಿತಿ ಕಾರ್ಯದರ್ಶಿ ಕುಟ್ಟಿ ಕೃಷ್ಣನ್ ವಂದಿಸಿದರು.

ಕೊನೆಯಲ್ಲಿ ಉಳ್ಳಾಲ ಮೋಹನ ಕುಮಾರ್ ಬಳಗದವರಿಂದ ಭರತನಾಟ್ಯ ಹಾಗೂ ಪ್ರಸಿದ್ಧ ಕಲಾವಿದರ ಕೂಡುವಿಕೆಯಲ್ಲಿ 'ಶಬರಿ ಮಲೆ ಕ್ಷೇತ್ರ ಮಹಾತ್ಮೆ' ಎಂಬ ಬಯಲಾಟ ಜರಗಿತು.

(ಚಿತ್ರದಲ್ಲಿ ಮಂದಿರವನ್ನು ಉದ್ಘಾಟಿಸಿದ ಪೇಜಾವರ ಮಠಾಧೀಶರು, ಶೇಣಿ ಗೋಪಾಲಕೃಷ್ಣ ಭಟ್ ಮೊದಲಾದವರನ್ನು ಕಾಣಬಹುದು).

9,000ರೂ.ಮೌಲ್ಯದ ಚಿನ್ನಾಭರಣ ಕಳವು

ಮಂಗಳೂರು, ಜೂ. 4– ಧರ್ಮಸ್ಥಳ ಸ... ಪದ ಕನ್ನಾಡಿಯಲ್ಲಿ ಮೇ 31ರ ರಾತ್ರಿ ಮನೆಗೆ ನುಗ್ಗಿದ ಕಳ್ಳರಗುಂಪೊಂದು 9,000 ರೂ. ಮೌಲ್ಯದ ಚಿನ್ನಾಭರಣಗಳನ್ನು ಅಪಹರಿಸಿಕೊಂಡು ಹೋಗಿತ್ತು.

ಮಧುರ ಪೂಜಾರಿ ಎಂಬವರು ಬೆಳ್ತಂಗಡಿ ಪೊಲೀಸರಿಗೆ ಈ ಬಗ್ಗೆ ದೂರು ಸಲ್ಲಿಸಿದ್ದಾರೆ.

ಕರ್ಕುಂಜೆ ವಯಸ್ಕರ ಶಿಕ್ಷಣ ಕೇಂದ್ರದ ಸಮಾರೋಪ

ಕುಂದಾಪುರ, ಜೂ. 4– ಕರ್ನಾಟಕ ಸರಕಾರದ ಅಕ್ಷರ ಸೇನೆ ಯೋಜನೆಯಡಿ ಇಲ್ಲಿಗೆ ಸಮೀಪದ ಕರ್ಕುಂಜೆಯಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಕೇಂದ್ರದ ಸಮಾರೋಪ ಸಮಾರಂಭವು ಕರ್ಕುಂಜೆ ಗ್ರಾಮಾಭಿವೃದ್ಧಿ ಸಹಾಯಕ ಉಮೇಶ ಹೆಗ್ಡೆ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಮುಖ್ಯ ಅತಿಥಿಗಳಾಗಿ ಕರ್ಕುಂಜೆ ಅರಣ್ಯಪಾಲಕ ನಾಗಪ್ಪ ಶೆಟ್ಟಿ, ವಂಡ್ಸೆ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಮಂಜಯ್ಯ ಶೆಟ್ಟಿ, ಮುದೂರು ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕ ಎನ್. ಶೆಟ್ಟಿ, ಕರ್ಕುಂಜೆ ದೂರವಾಣಿ ಕೇಂದ್ರದ ಕೆ. ಪಿ. ಕಣ್ಣನ್, ಸಾಕ್ಷರತಾ ಶಿಕ್ಷಕಿ ಗುಲಾಬಿ ಹಾಗೂ ಡಾ| ಸದಾಶಿವ ಹೆಗ್ಡೆ ಉಪಸ್ಥಿತ...

ಮದರಾಸಿನಲ್ಲಿ ಕನ್ನಡ ಕಲಿಕೆ ಯೋಜನೆ

ಮದರಾಸು, ಜೂ. 4– ಇಲ್ಲಿನ ತ್ಯಾಗರಾಯ ನಗರದ ಕರ್ನಾಟಕ ಸಂಘವು ಮದರಾಸು ನಗರದಲ್ಲಿ ನೆಲಸಿರುವ ಕನ್ನಡ ಬಂಧುಗಳಿಗೆ, ಅವರ ಮಕ್ಕಳಿಗೆ ಕನ್ನಡ ಕಲಿಸುವ ಯೋಜನೆಯೊಂದನ್ನು ಆರಂಭಿಸಲಿದೆ.

ಸಂಘವು ನಡೆಸುತ್ತಿರುವ ಹಾಯರ್ ಸೆಕೆಂಡರಿ ಶಾಲೆಯಲ್ಲಿ ಈ ಕನ್ನಡ ತರಗತಿಗಳು ಉಚಿತವಾಗಿ ನಡೆಯಲಿವೆ. ತರಗತಿಗಳು ಜೂನ್ 15 ರಿಂದ ಪ್ರಾರಂಭವಾಗುವವು.

ನಾನಾ ಕಾರಣಗಳಿಂದ ಮದರಾಸು ನಗರದಲ್ಲಿ ನೆಲಸಿರುವ ಕನ್ನಡಿಗರಿಗೆ, ಇಂಗ್ಲಿಷ್ ಮಾಧ್ಯಮಶಾಲೆಗಳಲ್ಲಿ ವ್ಯಾಸಂಗ ಪಡೆಯುತ್ತಿರುವ ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಯುವ ಅವಕಾಶ ಕಲ್ಪಿಸಿಕೊಡುವುದು ಈ ಯೋಜನೆಯ ಉದ್ದೇಶವಾಗಿದೆ.

ಕರ್ನಾಟಕ ಸಂಘದ ಅಧ್ಯಕ್ಷ ಕೆ. ಎಸ್. ವಿಠಲರಾವ್ ಅವರು ಮೇಲಿನ ವಿಚಾರವನ್ನು ಇತ್ತೀಚೆಗೆ ಪ್ರಕಟಿಸಿದರು.

ಇದರ ಜತೆಯಲ್ಲಿ ಸಂಘವು ವಿವಿಧ ಆಸಕ್ತಿದಾಯಕ ವಿಷಯಗಳಮೇಲೆ ಚರ್ಚಾಕೂಟಗಳನ್ನು ಜರಗಿಸುವ ನಿರ್ಧಾರವನ್ನೂ ಕೈಗೊಂಡಿದ್ದು ಸಂಘದ ಜತೆ ಕಾರ್ಯದರ್ಶಿ ಕೆ. ಶ್ರೀಕರ ಭಟ್ ಅವರನ್ನು ಚರ್ಚಾಗೋಷ್ಠಿಗಳ ನಿಯೋಜಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ.

ಕನ್ನಡ ತರಗತಿಗಳಲ್ಲದೆ ಅಭಿರುಚಿ ಇರುವವರಿಗಾಗಿ ಶಾಸ್ತ್ರೀಯ ಸಂಗೀತ, ನೃತ್ಯ, ಹೊಲಿಗೆ ಇತ್ಯಾದಿ ತರಗತಿಗಳೂ ಇರುವವು. ಆಸಕ್ತಿ ಹೊಂದಿರುವವರು ಕರ್ನಾಟಕ ಸಂಘ, 36, ಹಬೀಬುಲ್ಲಾ ರಸ್ತೆ, ಟಿ. ನಗರ, ಮದರಾಸು-600017 ಈ ವಿಳಾಸಕ್ಕೆ ಸಂಪರ್ಕಿಸಬೇಕೆಂದು ಕಾರ್ಯದರ್ಶಿ ಬಿ. ರಾಮಮೂರ್ತಿ ಅವರು ಕೋರಿದ್ದಾರೆ.

ಕಾರ್ಕಳ ನ್ಯಾಯಾಲಯದ ಸರಕಾರಿ ವಕೀಲರಾಗಿ ಶಂಕರ್ ಭಟ್

ಕಾರ್ಕಳ, ಜೂ. 4- ಕಾರ್ಕಳ ನ್ಯಾಯಾಲಯದ ಸಹಾಯಕ ಸರಕಾರಿ ವಕೀಲರಾಗಿ ಶಂಕರ ಭಟ್ ಅಧಿಕಾರ ಸ್ವೀಕಾರ ಮಾಡಿರುತ್ತಾರೆಂದು ತಿಳಿದು ಬಂದಿದೆ.

ಪುಸ್ತಕ ಬಿಡುಗಡೆ

ಕಿನ್ನಿಗೋಳಿ, ಜೂ. 4–ಇಲ್ಲಿನ ಯುಗಪುರುಷ ಪ್ರಕಟಣಾಲಯದ ಎರಡು ನೂತನ ಪುಸ್ತಕಗಳ ಬಿಡುಗಡೆ ಸಮಾರಂಭ ಇತ್ತೀಚೆಗೆ ಇಲ್ಲಿ ನಡೆಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಬನ್ನಂಜೆ ಗೋವಿಂದಾಚಾರ್ಯ ಅವರು ವಹಿಸಿದ್ದರು.

ಶಿಬರೂರು ಹಯಗ್ರೀವ ತಂತ್ರಿ ಹಾಗೂ ಬಳಗದವರ ನೇತೃತ್ವದಲ್ಲಿ ಸಾರ್ವಜನಿಕ ಸತ್ಯ ನಾರಾಯಣ ಪೂಜಾ ಮಹೋತ್ಸವ ಇದೇ ಸಂದರ್ಭದಲ್ಲಿ ನಡೆಯಿತು.

ಚೇತನಾ ಪ್ರಾರ್ಥಿಸಿದರು. ಕಾರ್ಯಕ್ರಮದ ನಿರ್ದೇಶಕ ಕೊಡೆತ್ತೂರು ಅನಂತ ಪದ್ಮನಾಭ ಉಡುಪ ಅವರು ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ವಿದ್ಯುತ್ ದರ ಏರಿಕೆ ಸಮರ್ಥನೆಗೆ ಬಿಜೆಪಿ ಟೀಕೆ

ಮಂಗಳೂರು, ಜೂ. 4- ವಿದ್ಯುತ್ ದರ ಏರಿಕೆಯನ್ನು ವಿರೋಧಿಸಿ ಧರಣಿ ನಡೆಸಲು ಬಿ.ಜೆ.ಪಿ. ಹಾಗೂ ಕಾಂಗ್ರೆಸ್‌ಗೆ ಯಾವುದೇ ನೈತಿಕ ಹಕ್ಕು ಇಲ್ಲ ಎಂದ ದ. ಕ. ಜಿಲ್ಲಾ ಯುವ ಜನತಾ ಪ್ರಧಾನ ಕಾರ್ಯದರ್ಶಿ ಐವನ್ ಡಿ'ಸೋಜ ಅವರು ಇತ್ತೀಚೆಗೆ ನೀಡಿದ ಹೇಳಿಕೆ ತಿಳುವಳಿಕೆಯಿಲ್ಲದ್ದು...

ಶಿವಮೊಗ್ಗ ಜಿಲ್ಲಾ ರೈತ ಅಧ್ಯಯನ ಶಿಬಿರ — 3

'ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದವರಿಗೆ ಪದಾಧಿಕಾರ...'

June 7/1987

'ದಕ್ಷಿಣದ ಚಿರಾಪುಂಜಿ' ಎಂದೇ ಹೆಸರು ವಾಸಿಯಾದ ಆಗುಂಬೆ ಕೂಡಾ ಮಳೆಯ ನಿರೀಕ್ಷೆಯಲ್ಲಿತ್ತು. ರಾತ್ರಿ ಸಣ್ಣಗೆ ಹರಿಯುತ್ತಿದ್ದ ಮಳೆ ಮುಂಜಾನೆಯ ಎಳೆಬಿಸಿಲು ಗರಿಕಟ್ಟುತ್ತಿದ್ದಂತೆ ಮಾಯವಾಗಿ ಬಿಡುತ್ತಿತ್ತು. ಆದರೆ ವಾತಾವರಣ ದಿನವಿಡೀ ತಂಪಾಗಿ ಆಹ್ಲಾದಕರವಾಗಿ ಉಳಿಯುತ್ತಿತ್ತು.

ಮೂರನೇ ದಿನ ಶಿಬಿರ ಬೆಳಗ್ಗೆ 9 ಗಂಟೆಗೆ ಸಮಾವೇಶ ಸರ್ವೋದಯ ಮುಖಂಡ ಸತ್ಯವ್ರತ 'ಕೈಗಾರಿಕಾ ನೀತಿ' ಬಗ್ಗೆ ಪ್ರಬಂಧ ಮಂಡಿಸಲು ಭಾರೀ ತಯಾರಿಯೊಂದಿಗೆ ಬಂದಿದ್ದರು.

ಎಂದಿನಂತೆ ಕಂಚಿನ ಕಂಠದ ಮೈಲಾರಪ್ಪ ಅವರ ಸ್ವರಚಿತ ರೈತ ಹಾಡಿನಿಂದ ದಿನದ ಆರಂಭ.

ಸ್ವಾತಂತ್ರ್ಯ ಪೂರ್ವದಲ್ಲಿ ಗಾಂಧಿ ಮತ್ತು ನೆಹರೂ ಅವರ ನಡುವಿನ ಸಂಬಂಧ ನಂತರ ಅದು ಸಾಗಿ ಬಂದ ಹಾದಿ, ಇತ್ಯಾದಿ ವಿಶ್ಲೇಷಣೆಗೆ ಇಳಿದ ಸತ್ಯವ್ರತ, ನೆಹರೂ ಅವರ ಕೈಗಾರಿಕಾ ನೀತಿಯೇ ಈ ದೇಶದ ಇಂದಿನ ದುರಂತಕ್ಕೆ ಕಾರಣ ಎಂಬ ತೀರ್ಪು ನೀಡಿಯೇ ಬಿಟ್ಟರು. ಎಲ್ಲರೂ ಒಪ್ಪಿಕೊಂಡ ಈ ವಿಚಾರಕ್ಕೆ ಯಾವ ವಿರೋಧವೂ ಇರಲಿಲ್ಲ.

ಸತ್ಯವ್ರತ ಅವರು ತಮ್ಮ ಪ್ರಬಂಧ ರಚನೆಗೆ ಸಾಕಷ್ಟು ಶ್ರಮಪಟ್ಟಿದ್ದರು. ಅಗಾಧ ಅಂಕಿ ಅಂಶಗಳ ಹೊರೆಯನ್ನೇ ಹೊತ್ತುಕೊಂಡು ಬಂದಿದ್ದರು. ಅಂಕಿ-ಅಂಶಗಳ ಕೊರತೆವನ್ನು ರೈತರು ಸಹಿಸಲಿಕ್ಕಿಲ್ಲ ಎಂದು ಮೊದಲೇ ತಿಳಿದಿದ್ದ ಅವರು ಮುಂಚಿತವಾಗಿಯೇ ಕ್ಷಮೆ ಕೋರಿ ಎಲ್ಲರನ್ನೂ ಔದಾರ್ಯದ ಉರುಳಲ್ಲಿ ಕಟ್ಟಿಹಾಕಿ ಕುಳ್ಳಿರಿಸಿದ್ದರು.

ಬ್ರಿಟಿಷರ 150 ವರ್ಷಗಳ ಆಳ್ವಿಕೆಗಿಂತ ಹೆಚ್ಚಾಗಿ ಸ್ವತಂತ್ರ ಭಾರತದ 39 ವರ್ಷಗಳಲ್ಲಿ ಇಲ್ಲಿನ ಗ್ರಾಮ ಕೈಗಾರಿಕೆಗಳು ನಾಶವಾಗಿದೆ. ಪ್ರಧಾನಿ ರಾಜೀವ್ ಗಾಂಧಿಯವರ ಆರ್ಥಿಕ ನೀತಿ ನೆಹರೂ ಹಾದಿಯಲ್ಲಿ ಮುಂದುವರಿಯುತ್ತಿದೆ. ಖಾಸಗಿ ರಂಗಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ ಎಂದು ಸತ್ಯವ್ರತ ಎಚ್ಚರಿಸಿದರು.

ಕೈಗಾರೀಕರಣದ ಆವೇಶದಲ್ಲಿ ದೇಶ ಅವನತಿಯತ್ತ ಹೆಜ್ಜೆ ಹಾಕುತ್ತಿದೆ. ಭಾರತದಂತಹ ಬಡ ದೇಶದಲ್ಲಿ ಭಾರೀ ಪ್ರಮಾಣದ ಬಂಡವಾಳವನ್ನು ಹೂಡಿ ಹಾಕುವುದೇ ಪ್ರಮುಖ ಸಮಸ್ಯೆ. ಅದಕ್ಕಾಗಿ ಬೆಲೆ ಏರಿಸಲಾಗುತ್ತಿದೆ. ವಿದೇಶಗಳಿಂದ ಹೆಚ್ಚಿನ ಬಡ್ಡಿ ದರದಲ್ಲಿ ಸಾಲ ಎತ್ತಲಾಗುತ್ತಿದೆ. ಜಗತ್ತಿನಲ್ಲಿಯೇ ಪ್ರಥಮವಾಗಿ ಸಾರ್ವಜನಿಕ ಕ್ಷೇತ್ರದಿಂದ ಕಡಿಮೆ ಬಡ್ಡಿ ದರದಲ್ಲಿ ಖಾಸಗಿಯವರಿಗೆ ಸಾಲ ನೀಡಲಾಗುತ್ತಿದೆ. ಈ ಎಲ್ಲ ಕಾರಣಗಳಿಂದ ದೇಶದ ಆರ್ಥಿಕ ನಡೆಯು ಹಳಿತಪ್ಪಿದೆ ಎಂದು ಸತ್ಯವ್ರತ ವಿಶ್ಲೇಷಿಸಿದರು.

ಭಾರೀ ಕೈಗಾರಿಕೆಗಳೇ ಸತ್ಯವ್ರತ ಅವರ ದಾಳಿಯ ಗುರಿಯಾಗಿತ್ತು. ದೇಶದಲ್ಲಿ ಅತ್ಯಧಿಕ ತಲಾವಾರು ಆದಾಯವಿರುವ ಪಂಜಾಬಿನಲ್ಲಿ ಭಾರೀ ಕೈಗಾರಿಕೆಗಳಿಲ್ಲ. ಆದರೆ ಕಡಿಮೆ ತಲಾವಾರು ಆದಾಯವಿರುವ ಬಿಹಾರ್ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯ ದೊಡ್ಡ ಕೈಗಾರಿಕೆಗಳಿವೆ. ದೇಶದಲ್ಲಿನ ದೊಡ್ಡ ಕೈಗಾರಿಕೆಗಳು ಶೇಕಡ 10 ರಷ್ಟು ಜನರಿಗೂ ಉದ್ಯೋಗ ನೀಡಿಲ್ಲ ಎಂದು ಸತ್ಯವ್ರತ ತಿಳಿಸಿದರು.

ನಮ್ಮ ಬೇಡಿಕೆಗಳ ಮೇಲೆ ಮಿತಿ ಹೇರಬೇಕು ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂಬ ಪರ್ಯಾಯ ಸೂಚಿಸಿದ ಸತ್ಯವ್ರತ ಕೊನೆಗೂ ತಮ್ಮ ದೀರ್ಘ ಪ್ರಬಂಧ ವಾಚನವನ್ನು ಕೊನೆಗೊಳಿಸಿದರು.

ಸತ್ಯವ್ರತ ಅವರ ಪ್ರಬಂಧ ಮಂಡನೆಯ ನಂತರ ಚರ್ಚೆಗೆ ಅವಕಾಶ ನೀಡಿದರೂ ಯಾರೂ ಆಸಕ್ತಿ ತೋರಲಿಲ್ಲ. ಕೊನೆಯಲ್ಲಿ ಎನ್. ಡಿ. ಸುಂದರೇಶ್ ಅವರೇ ತಿಳಿಸಿದಂತೆ "ಸತ್ಯವ್ರತ ಅವರ ವಿಚಾರ ಹೆಚ್ಚಿನವರಿಗೆ ಅಜೀರ್ಣವಾಗಿತ್ತು."

ಶಿಬಿರದ ಕೊನೆಯ ದಿನ ಎಲ್ಲರ ನಿರೀಕ್ಷೆಯ ಪ್ರೊ. ನಂಜುಂಡ ಸ್ವಾಮಿ ಬಂದರು.

"ಶಿಸ್ತು, ಸಂಘಟನೆ, ಮತ್ತು ನೀತಿ ಸಂಹಿತೆ ಬಗ್ಗೆ ಮಾತನಾಡಬೇಕೆಂದು ಕೇಳಿಕೊಂಡಿದ್ದೀರಿ. ಅಂದರೆ, ಅವುಗಳು ಈಗ ನಿಮ್ಮಲ್ಲಿ ಇಲ್ಲವೆಂದರ್ಥವೇ ? " ಈ ನೇರ ಪ್ರಶ್ನೆಯೊಡನೆ ನಂಜುಂಡ ಸ್ವಾಮಿ ತಮ್ಮ ಮಾತು ಆರಂಭಿಸಿದರು.

ಅವರು ತುಂಬಾ ಅಸಮಾಧಾನದಲ್ಲಿದ್ದಂತೆ ಕಂಡುಬಂದಿತ್ತು. 'ರೈತ ಸಂಘದ ಪದಾಧಿಕಾರಿಗಳ ಆಯ್ಕೆಯಲ್ಲಿ ನಾವೇ ಅತಿ ಸ್ನೇಹದಿಂದ ವರ್ತಿಸಿದ್ದೇವೆ. ಕೆಟ್ಟ ನಕ್ಷತ್ರದಲ್ಲಿ ಹುಟ್ಟಿದವರಿಗೆಲ್ಲ ಪದಾಧಿಕಾರ ಕೊಟ್ಟು ರೈತರಿಗೆ ಮೋಸ ಮಾಡಿದ್ದೇವೆ..."ಅವರ ಮಾತಿನಲ್ಲಿ ಅಸಹನೆ ಇಣುಕಿತ್ತು.

ರೈತ ಸಂಘದ ಮೂವರು ಪ್ರಧಾನ ಕಾರ್ಯದರ್ಶಿಗಳಾದ ಮಂಜುನಾಥ ದತ್ತ ಕೆ. ಟಿ. ಗಂಗಾಧರ್ ಹಾಗೂ ಪ್ರಕಾಶ್ ರಾಜೇಶ್ವರ್ ಅವರ ಗೈರುಹಾಜರಿಯನ್ನು ಮುಖ್ಯವಾಗಿ ಉಲ್ಲೇಖಿಸಿದ ನಂಜುಂಡ ಸ್ವಾಮಿ ಅವರನ್ನು ಸಂಘಟನೆಯಿಂದ ಹೊರಗಿಡಬೇಕು ಎಂದು ಅಭಿಪ್ರಾಯ ಪಟ್ಟರು. ಈ ಅಭಿಪ್ರಾಯ ವೈಯಕ್ತಿಕವಾದುದೆಂದು ಹೇಳಲು ಅವರು ಮರೆಯಲಿಲ್ಲ. ನಂಜುಂಡ ಸ್ವಾಮಿಯವರ ಈ ಮಾತಿನ ಬಗ್ಗೆ ಸಣ್ಣ ಪ್ರತಿಭಟನೆ ಮತ್ತು ಚಪ್ಪಾಳೆ ಎರಡೂ ವ್ಯಕ್ತವಾಗಿತ್ತು. ಕೊನೆಗೂ ಆ ವಿಚಾರ ರಾಜ್ಯ ಸಮಿತಿಯ ತೀರ್ಮಾನಕ್ಕೆ ಬಿಡುವ ನಿರ್ಧಾರ ಕೈಗೊಳ್ಳಲಾಯಿತು.

"ರೈತ ಸಂಘವನ್ನು ತಮ್ಮ ವೈಯಕ್ತಿಕ ಹಿತಸಾಧನೆಗೆ ದಾರಿ ಮಾಡಿಕೊಳ್ಳುವ ಉದ್ದೇಶವಿರುವ ಕಾರ್ಯಕರ್ತರು ಬೇಕಿಲ್ಲ. 1968 ರಲ್ಲಿ ನಾವು ಐದಾರು ಮಂದಿ ಇದ್ದೆವು. ನಮ್ಮೊಡನೆ 10-12 ಮಂದಿಯಿದ್ದರು. ಶ್ರದ್ಧೆ, ಪ್ರಾಮಾಣಿಕತೆಯಿರುವ ಅಷ್ಟೇ ಮಂದಿ ಸಾಕು" ನಂಜುಂಡಸ್ವಾಮಿ ಆವೇಶಭರಿತರಾಗಿದ್ದರು.

'ರೈತ ಸಂಘಕ್ಕೆ ಸಂವಿಧಾನ ರಚನೆಯಾಗಬೇಕು' ರೈತರೊಬ್ಬರು ಬೇಡಿಕೆ ಮುಂದಿಟ್ಟರು. ಈಗಾಗಲೇ ಅದಕ್ಕೊಂದು ಸಮಿತಿ ನೇಮಕವಾಗಿದೆ. ಆ ಕೆಲಸ ಸಮಿತಿ ಮಾಡುತ್ತಿದೆ. ಅಷ್ಟೇ ಸರಳ ಉತ್ತರ ನಂಜುಂಡ ಸ್ವಾಮಿಯವರಿಂದ.

ಶಿಬಿರದ ಮುಕ್ತಾಯ ಸಮಾರಂಭದಲ್ಲಿ "ಕರ್ನಾಟಕಕ್ಕೆ ಪ್ರಾದೇಶಿಕ ಪರ್ಯಾಯ" ಎಂಬ ವಿಷಯದ ಮೇಲೆ ಎಂ. ಚಿದಾನಂದ ಮೂರ್ತಿಯವರು ಪ್ರಬಂಧ ಮಂಡಿಸಿದರು.

ಹುಲಿಮರಿ, ಕುರಿಮಂದೆ ಜತೆಸೇರಿ ಕುರಿಯೇ ಆಗಿ ಹೋದ ಕತೆಯೊಡನೆ ಮಾತನ್ನಾರಂಭಿಸಿದ ಚಿದಾನಂದ ಮೂರ್ತಿ ಕನ್ನಡಿಗರ ಸ್ಥಿತಿ ಕುರಿಮರಿಯಂತೆಯೇ ಆಗಿದೆ ಎಂದು ವ್ಯಥೆ ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿನ ಕೈಗಾರಿಕೆ, ಉದ್ಯೋಗ ನಿವೇಶನ ಎಲ್ಲವನ್ನು ಪರಭಾಷೆಯ ಜನರು ಆಕ್ರಮಿಸಿಕೊಂಡಿದ್ದಾರೆ. ಅಲ್ಲಿನ ಕನ್ನಡಿಗರೇ ಅಲ್ಪಸಂಖ್ಯಾತರಾಗುತ್ತಿದ್ದಾರೆ... ಹೀಗೆ ಚಿದಾನಂದ ಮೂರ್ತಿಯವರು ರಾಜಧಾನಿಯ ಕನ್ನಡಿಗರ ಸ್ಥಿತಿಗತಿಯ ವಿವರ ನೀಡುವುದಕ್ಕಾಗಿಯೇ ಹೆಚ್ಚು ಕಾಲ ವ್ಯಯಿಸಿದಂತೆ ಕಂಡುಬಂತು.

ಚಿದಾನಂದ ಮೂರ್ತಿ

"ಕನ್ನಡಿಗರ ಅತಿ ಔದಾರ್ಯದಿಂದಾಗಿ ಕಾಸರಗೋಡು, ಗೋವೆ, ಅನಂತಪುರ, ನಾಂದೇಡ್, ಹೊಸೂರು ಎಲ್ಲವನ್ನು ಕಳೆದುಕೊಂಡಾಗಿದೆ. ಇವುಗಳನ್ನು ಕಳೆದುಕೊಂಡ ನೋವು ನಮ್ಮಲ್ಲಿಲ್ಲದಿದ್ದರೆ ಮುಂದೆಯೂ ಕಳೆದುಕೊಳ್ಳಲು ನಾವು ಹಿಂಜರಿಯಲಾರೆವು" ಚಿದಾನಂದ ಮೂರ್ತಿ ಎಚ್ಚರಿಸಿದರು.

"ಭಾಷಾ ಚಳವಳಿ ನಡೆದ ಸಂದರ್ಭದಲ್ಲಿ ರಾಜ್‌ಕುಮಾರ್ ನೇತೃತ್ವದಲ್ಲಿ ಪ್ರಾದೇಶಿಕ ಪಕ್ಷವೊಂದು ರೂಪುಗೊಳ್ಳುತ್ತದೆ ಎಂಬ ನಿರೀಕ್ಷೆಯಿತ್ತು. ಅದು ಕಾರ್ಯರೂಪಕ್ಕೆ ಬರಲಿಲ್ಲ. ಇದೀಗ ರೈತ ಸಂಘದವರ ನೇತೃತ್ವದಲ್ಲಿ ಪ್ರಾದೇಶಿಕ ಪಕ್ಷ ಸ್ಥಾಪನೆಯಾಗುವುದಿದ್ದರೆ ಸ್ವಾಗತಾರ್ಹ; ಹೆಸರು ಯಾವುದೇ ಇರಲಿ ಅದು ಮುಖ್ಯ ಅಲ್ಲ" ಚಿದಾನಂದ ಮೂರ್ತಿ ಭಾವುಕರಾಗಿ ಮಾತನಾಡುತ್ತಿದ್ದರು.

ಅತಿಭಾವುಕತೆ, ಕನ್ನಡ ಪ್ರೇಮವನ್ನು ವ್ಯಕ್ತಪಡಿಸುವ ಆವೇಶ ಮತ್ತು ಅನಗತ್ಯ ಇತಿಹಾಸ ಪಾರಾಯಣದಿಂದಾಗಿ ರೈತರೆಲ್ಲ ಚಿದಾನಂದ ಮೂರ್ತಿಯವರ ಮಾತಿನಿಂದ ಕಿರಿಕಿರಿಪಟ್ಟಂತಿತ್ತು. ಮಾತಿನ ಮಧ್ಯೆ ಒಬ್ಬರು ಅದನ್ನು ವ್ಯಕ್ತಪಡಿಸಿಯೂಬಿಟ್ಟರು ಚಿಮೂ ಅವರ ಕನ್ನಡ ಪ್ರೇಮ ಪ್ರಶಂಸನೀಯವಾದರೂ, ಮಾತುಗಳು ಕೇವಲ 'ಸ್ಲೋಗನ್ಸ್' ಆಗದೆ ನಮ್ಮನ್ನು ತಣ್ಣಗೆ ಯೋಚಿಸುವಂತೆ ಮಾಡಬೇಕಲ್ಲವೇ ?

ಕರ್ನಾಟಕಕ್ಕೆ ಪ್ರಾದೇಶಿಕ ಪರ್ಯಾಯ ಬೇಕು ಎನ್ನುವುದು ಈ ದಿನದ ಹೊಸ ಕೂಗು ಅಲ್ಲ. ಕಳೆದ ಕೆಲವು ವರ್ಷಗಳಿಂದ ಬಿಡಿ ಬಿಡಿಯಾಗಿ ಅಲ್ಲಲ್ಲಿ ಅಭಿಪ್ರಾಯ ವ್ಯಕ್ತವಾಗಿದೆ. ಆ ಪರ್ಯಾಯ ಉಳಿದ ವ್ಯಕ್ತಿ ರಾಜಕಾರಣಿಗಳ ಪಕ್ಷಗಳಿಗಿಂತ ಯಾವ ರೀತಿಯಲ್ಲಿ ಭಿನ್ನವಾಗಿರಬೇಕು. ಅದರ ಉದ್ದೇಶ, ಸ್ವರೂಪಗಳೇನು ? ಆ ಬಗ್ಗೆ ಚಿಮೂ ವಿವರ ನೀಡಲಿಲ್ಲ. ಭಾಷಾ ಚಳುವಳಿಕಾರರು ಮತ್ತು ರೈತ ಚಳವಳಿಗಾರರ ಕನಸಿನ ಪ್ರಾದೇಶಿಕ ಪಕ್ಷ ಒಂದೇ ಆಗಿದೆಯೆ ? ಆ ಬಗ್ಗೆ ಯಾರಿಗೂ ನಿರ್ದಿಷ್ಟ ಕಲ್ಪನೆಯಿದ್ದಂತೆ ಕಂಡು ಬರಲಿಲ್ಲ.

ಕೊನೆಯಲ್ಲಿ ನಡೆದ ಅವಸರದ ಚರ್ಚೆಯಲ್ಲಿಯೂ ಈ ವಿಚಾರ ವ್ಯಕ್ತವಾಗಲಿಲ್ಲ. ಇದೇ ಸಂದರ್ಭದಲ್ಲಿ ಕನ್ನಡ ಕಾವಲು ಸಮಿತಿಯ ಬಗ್ಗೆ ರೈತರೊಬ್ಬರು ಪ್ರಶ್ನಿಸಿದರು.

"ಕನ್ನಡ ಕಾವಲು ಸಮಿತಿಯ ಶಿಫಾರಸುಗಳನ್ನು ಸರಕಾರ ಅನುಷ್ಠಾನಕ್ಕೆ ತರುತ್ತಿಲ್ಲ. ಇದನ್ನು ವಿರೋಧಿಸಿ ಸಮಿತಿಯ ಸದಸ್ಯತ್ವಕ್ಕೆ ನಾನು ರಾಜೀನಾಮೆ ನೀಡಿದ್ದೆ" ಎಂಬ ಉತ್ತರ ನೀಡಿದ ಚಿದಾನಂದಮೂರ್ತಿ ಕಾವಲುಸಮಿತಿಯ ಅಧ್ಯಕ್ಷರಾದ ಪಾಟೀಲ ಪುಟ್ಟಪ್ಪ ಅವರ ಕ್ಷಮತೆ, ಅಸಹಾಯಕತೆಗಳ ಬಗ್ಗೆಯೂ ವಿವರ ನೀಡಿ ಅವರ ಬಗ್ಗೆ ತನ್ನ ಮೃದು ಧೋರಣೆ ವ್ಯಕ್ತಪಡಿಸಿದರು.

ಮೈಲಾರಪ್ಪ ಹಾಡಿದರೆಂದರೆ.......

ಎದೆಸೆಟೆಸಿ, ಕೈಎತ್ತಿ ಅವರು ಹಾಡುತ್ತಿದ್ದರೆ ರೈತರೆಲ್ಲ ಮಂತ್ರಮುಗ್ಧರಾಗಿಬಿಡುತ್ತಿದ್ದರು. ಅವರ ಕಂಚಿನ ಕಂಠದಲ್ಲಿ ಅಂತಹ ಮೋಡಿಯಿತ್ತು.

ಕೇವಲ ಏಳನೇ ತರಗತಿ ವರೆಗೆ ಕಲಿತ ಬಡ ಕುಟುಂಬದಿಂದ ಬಂದ ಸುಮಾರು 40ರ ಹರೆಯದ ಮೈಲಾರಪ್ಪ. ಅಪ್ಪಟ ಮಣ್ಣಿನ ಪ್ರತಿಭೆ. ಅವರು ಹಾಡುತ್ತಿದ್ದ ಎಲ್ಲ ಹಾಡುಗಳು ಅವರದ್ದೇ ಸ್ವಂತ ರಚನೆಗಳಾಗಿತ್ತು.

ಗುಲ್ಬರ್ಗ ಜಿಲ್ಲೆಯ ಶಹಪುರ ತಾಲೂಕಿನ ಸಗರ ಗ್ರಾಮದ ಮೈಲಾರಪ್ಪಗೆ ಚಿಕ್ಕಂದಿನಿಂದಲೂ ಹಾಡುವ ಹುಚ್ಚು. ಆಗಲೇ ಮಣ್ಣಿನ ಸ್ನೇಹ ಬೆಳೆಸಿದ್ದ ಅವರ ಕೊರಳಿಂದ ಹೊರಬಂದ ಆನಂದಹಕಾಶೆ ನಿಟ್ಟುಸಿರುಗಳೆಲ್ಲ ರೈತರ ಹಾಡುಗಳಾಗುತ್ತಿತ್ತು.

ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಮೈಲಾರಪ್ಪರ ಕಂಠಕ್ಕೆ ಮನಸೋತ ನಟ ರಾಜ್‌ಕುಮಾರ್ ತನ್ನೊಡನೆ ಬೆಂಗಳೂರಿಗೆ ಕರೆದೊಯ್ಯುವ ಚಳವಳಿಯುದ್ದಕ್ಕೂ ಇವರಿಂದ ಹಾಡು ಹೇಳಿಸಿದ್ದರಂತೆ. ಆದರೆ ಇವರು ನಗರದ ಜನರ ಡಾಂಭಿಕತೆ ಒಗ್ಗದೆ ಮತ್ತೆ ಹುಟ್ಟೂರಿಗೆ ಹಿಂತಿರುಗಿದ್ದರು.

ಈ ವರೆಗೆ ಸುಮಾರು 100 ರೈತ ಹಾಡುಗಳನ್ನು ರಚಿಸಿ, ರಾಗ ಸಂಯೋಜಿಸಿ ಹಾಡಿರುವ ಮೈಲಾರಪ್ಪ. ಹಳ್ಳಿಗಾಡಿನಲ್ಲಿ ದಂತಕತೆಯಾಗಿ ಮಾಸಿಹೋಗುವ ಮತ್ತೊಂದು ಪ್ರತಿಭೆಯಾಗಬಾರದಲ್ಲವೇ?

ದಿನೇಶ್ ಅಮಿನ್ ಮಟ್ಟು

ಕೊನೆಯಲ್ಲಿ ಪ್ರೊ। ಎಂ. ಡಿ. ನಂಜುಂಡ ಸ್ವಾಮಿ ರೈತ ಸಂಘದ ಮುಂದಿನ ಹೋರಾಟ ಮತ್ತು ರಾಜಕೀಯ ಪರ್ಯಾಯ ಎಂಬ ವಿಷಯದಮೇಲೆ ಮಾತನಾಡಿದರು.

ಮುಂದಿನ ಹೋರಾಟ ಏನು? ಎಂದರೆ ಹಿಂದಿನ ಹೋರಾಟ ಮುಗಿದಿದೆ ಎಂಬ ಅರ್ಥವೇ ? ತನ್ನ ಎಂದಿನ ಚುಚ್ಚು ಪ್ರಶ್ನೆಯಿಂದಲೇ ಅವರು ಮಾತಿಗಿಳಿದರು.

"ಈ ದೇಶದ ಯಾವ ರಾಜಕೀಯ ಪಕ್ಷಗಳೂ ಪ್ರಾಮಾಣಿಕವಾಗಿ ರೈತರ ಹಿತ ಚಿಂತನೆ ಮಾಡುವುದಿಲ್ಲ. ನಮ್ಮ ಸರಕಾರ ಈಗ ಅನಿವಾರ್ಯವಾಗಿದೆ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲು ಈ ಕ್ಷಣದಿಂದಲೇ ತಯಾರಿ ನಡೆಸಬೇಕಾಗಿದೆ. ಹಾಗಾದಾಗ ಮಾತ್ರ ನಾವು ವಿಧಾನಸೌಧ ತಲುಪಬಹುದು" ನಂಜುಂಡಸ್ವಾಮಿ ರೈತ ಸಂಘದ ರಾಜಕೀಯ ಒಲವನ್ನು ಸ್ಪಷ್ಟವಾಗಿ ಸಾರಿದರು.

ಮಂಡ್ಯದಲ್ಲಿ ಈಗಾಗಲೇ ಜಿಲ್ಲಾ ಪರಿಷತ್ ಚುನಾವಣೆಗೆ ನಿಂತು ಗೆದ್ದಿದ್ದೇವೆ. ಇದೊಂದು ಪ್ರಾಯೋಗಿಕ ಹೆಜ್ಜೆ. ಮುಂದಿನ ಗುರಿಯ ಆರಂಭ ಮಾತ್ರ. ಹಳ್ಳಿಗಳಲ್ಲಿ ಸಂಘಟನೆ ಬಲಗೊಳ್ಳಬೇಕು. ನಾವು ಹೋರಾಟಕ್ಕೆ ಅಣಿಯಾಗಬೇಕು... ಆವೇಶತುಂಬಿಕೊಂಡ ನಂಜುಂಡಸ್ವಾಮಿಯ ಮಾತುಗಳು ರಾಜಕಾರಣಿಯ ಭಾಷಣದ ಜಾಡಿನಲ್ಲಿ ಸಾಗಿತ್ತು. ಬಹುಷಃ ರೈತಸಂಘದ ಮುಂದಿನ ದಾರಿ ಕೂಡಾ ಅದೇ ಆಗಿರಬಹುದು.

ಆಗಲೇ ಸುತ್ತಲೂ ಕತ್ತಲು ಆವರಿಸಿತ್ತು. ಮೂರು ದಿನಗಳ ಶಿಬಿರ ಮುಕ್ತಾಯಗೊಳ್ಳುತ್ತಿದ್ದಂತೆ ಹಸಿರು ರುಮಾಲುಗಳು ನಿಧಾನವಾಗಿ ಕರಗ ತೊಡಗಿದುವು.

ಶಿವಮೊಗ್ಗ ಜಿಲ್ಲಾ ರೈತ ಅಧ್ಯಯನ ಶಿಬಿರ – 5

ಸಂಕ್ರಮಣ ಘಟ್ಟದಲ್ಲಿ ರಾಜ್ಯ ರೈತ ಸಂಘ

Jan 10/1987

ಆಗುಂಬೆಯಲ್ಲಿ ಮೂರು ದಿನಗಳ ಕಾಲ ನಡೆದ ರೈತ ಅಧ್ಯಯನ ಶಿಬಿರದಲ್ಲಿ ಹೊಡೆದು ಕಂಡ ಅಂಶವೆಂದರೆ ರೈತರ ಉತ್ಸಾಹದ ಪಾಲುದಾರಿಕೆಯ ಕೊರತೆ.

1982, ಅಕ್ಟೋಬರ್ 2. ಬೆಂಗಳೂರು ನಗರವನ್ನಿಡೀ ಅಂದು ಹಸಿರು ರುಮಾಲು ಆವರಿಸಿತ್ತು. ಸಮುದ್ರದಂತೆ ನಗರಕ್ಕೆ ನುಗ್ಗಿ ಬಂದ ಮಣ್ಣಿನ ಮಕ್ಕಳ ಹಸಿರಿನ ಸತ್ವಪ್ರದರ್ಶನ ಅಧಿಕಾರ ರೂಢ ರಾಜಕಾರಣಿಗಳಿಂದ ಹಿಡಿದು ಬಿಳಿಕಾಲರಿನ ನಾಗರಿಕರವರೆಗೆ ಎಲ್ಲರ ಎದೆಯಲ್ಲಿ ತಲ್ಲಣ ಹುಟ್ಟಿಸಿತ್ತು.

ಶಿಬಿರದಲ್ಲಿ ಭಾಗವಹಿಸಲು ಬಂದ ರೈತರೊಬ್ಬರು ಇಂತಹ ಗತ ವೈಭವದ ತುಣುಕುಗಳನ್ನು ಮೆಲುಕು ಹಾಕುತ್ತ ನಿಟ್ಟುಸಿರು ಬಿಡುತ್ತಿದ್ದರು. ಅಂದಿನ ದಿನಗಳಲ್ಲಿ ಒಂದು ಅಧ್ಯಯನ ಶಿಬಿರವನ್ನು ಶಿವಮೊಗ್ಗೆಯ ಯಾವುದೇ ಕೊಂಪೆಯಲ್ಲಿ ಮಾಡಿದ್ದರೂ ಕನಿಷ್ಠ ಸಾವಿರ ಜನರಾದರೂ ಧಾವಿಸಿ ಬರುತ್ತಿದ್ದರು.

ಯಾಕೆ ಹೀಗಾಯಿತು ? ಸ್ಪಷ್ಟ ಉತ್ತರ ಯಾರಲ್ಲಿಯೂ ಇರಲಿಲ್ಲ. ಮೂರನೇ ದಿನ ಬಿರುಗಾಳಿಯಂತೆ ಬಂದು ಅಬ್ಬರಿಸಿ ಹೋದ ಪ್ರೊ. ಎಂ. ಡಿ. ನಂಜುಂಡ ಸ್ವಾಮಿಯವರು ಸ್ವಲ್ಪ ಸುಳಿವು ನೀಡಿದ್ದರು.

ಅವರ ಅಸಮಾಧಾನದ ಮಾತುಗಳು ವಸ್ತುನಿಷ್ಠವಾಗದೆ ವ್ಯಕ್ತಿನಿಷ್ಠವಾಗಿಯೇ ಮುಂದುವರಿದಿತ್ತು. ಶಿಬಿರಕ್ಕೆ ಬಂದೆ ತಪ್ಪಿಸಿಕೊಂಡ ದತ್ತ, ಗಂಗಾಧರ್ ಮತ್ತು ರಾಜೇಶ್ವರ್ ಅವರ ಮೇಲೆ ಸಂಘ ಬಹಿಷ್ಕಾರ ಹೇರಬೇಕು ಎನ್ನುವಷ್ಟರ ಮಟ್ಟಿಗೆ ಅವರ ಮಾತು ಮುಂದುವರಿದಿತ್ತು.

ತಲಾಂತರದ ಘರ್ಷಣೆ

ರೈತ ಸಂಘದಲ್ಲಿಯೂ 'ತಲಾಂತರ' ದ ಘರ್ಷಣೆ ಹುಟ್ಟಿಕೊಂಡಿದೆ. ವಯಸ್ಸಾದ ನಾಯಕರು ಹಳಬರಾಗುತ್ತಿದ್ದಂತೆ ಎರಡನೇ ಸಾಲಿನ ನಾಯಕರು ತಲೆ ಎತ್ತಿದ್ದಾರೆ. "ಈ ವಯೋವೃದ್ಧರನ್ನು ವನಕ್ಕೆ ಕಳುಹಿಸಿದ ರೈತಸಂಘ ಮತ್ತೆ ಜೀವ ಪಡೆಯಲಾರದು" ಯುವ ರೈತ ನಾಯಕ ನೊಬ್ಬ ಗೊಣಗುತ್ತಿದ್ದ.

'ತಲಾಂತರ'ದ ಘರ್ಷಣೆಯ ಜತೆಗೆ ನಿಧಾನವಾಗಿ ಜಾತಿ ಕೂಡಾ ಇಲ್ಲಿ ಮೂಗು ತೂರಿಸಿದೆ. ರಾಜ್ಯದ ರಾಜಕೀಯವನ್ನು ಆಳುತ್ತಿರುವ ಪ್ರಬಲ ಕೋಮುಗಳಾದ ಒಕ್ಕಲಿಗ ಮತ್ತು ಲಿಂಗಾಯತರೇ ರೈತ ಸಂಘದ ಮುಂಚೂಣಿಯಲ್ಲಿದ್ದಾರೆ. ಒಕ್ಕಲಿಗರೇ ಇತ್ತೀಚೆಗೆ ರೈತ ಸಂಘದಲ್ಲಿ ಪ್ರಬಲರಾಗುತ್ತಿದ್ದಾರೆ, ಒಂದು ಸುಂದರ ಮುಂಜಾನೆ ಇಂದು ಗುಡುಗುತ್ತಿರುವ ಪ್ರೊ. ಎಂ. ಡಿ. ನಂಜುಂಡ ಸ್ವಾಮಿಯವರ ಬುಡಕ್ಕೆ ನೀರು ಬಂದರೆ ಆಶ್ಚರ್ಯಪಡಬೇಕಿಲ್ಲ.

ಈ ದೃಷ್ಟಿಯಿಂದ ರೈತಸಂಘದ ರಾಜ್ಯ ಸಮಿತಿಯ ಮುಂದಿನ ಸಭೆ ಚಳವಳಿಯ ಹಣೆಬರಹವನ್ನು ಬರೆಯುವ ಸಾಧ್ಯತೆಯಿದೆ.

ರಾಜಕೀಯ ಒಲವು

ರೈತನಾಯಕರ ರಾಜಕೀಯ ಒಲವು ಕೂಡಾ ಸಾಮಾನ್ಯ ರೈತ ಕಾರ್ಯಕರ್ತರಲ್ಲಿ ಅಸಮಾಧಾನ ಹುಟ್ಟಿಸಿದೆ. 1984ರಲ್ಲಿ 'ಮತದಾರ ಅಭ್ಯರ್ಥಿ' ಎಂಬ ಮುಸುಕು ಹಾಕಿಕೊಂಡು ಹಿತ್ತಲ ಬಾಗಿಲಿನಿಂದ ರಾಜಕೀಯ ಪ್ರವೇಶ ಮಾಡಿದ ರೈತ ಸಂಘದ ನಿರ್ಧಾರ ಕೂಡಾ ಕೆಲವರದ್ದೇ ಆಗಿತ್ತಂತೆ. ಸಂಘದ ಈಗಿನ ಪ್ರಧಾನ ಕಾರ್ಯದರ್ಶಿ ಬಾಬಗೌಡ ಪಾಟೀಲರೇ ಮುದ್ದಾಗಿ ಅದನ್ನು ವಿರೋಧಿಸಿದ್ದರೆಂಬುದು ಗಮನಾರ್ಹ.

ಚುನಾವಣೆಗೆ ಇಳಿಯುವುದಿಲ್ಲ ಎಂದು ರೈತ ಕಾರ್ಯಕರ್ತರಿಂದ ಆಣೆ-ಪ್ರಮಾಣ ಮಾಡಿಸಿದ ರೈತ ಸಂಘ ಇದೀಗ 1990 ರಲ್ಲಿ ವಿಧಾನ ಸೌಧ ಚಿತ್ರಲು ಚಾಲೀಮು ನಡೆಸುವುದು 'ಗ್ರಾಸ್‌ರೂಟ್' ಮಟ್ಟದ ಕಾರ್ಯಕರ್ತರಿಗೆ ಕಿರಿಕಿರಿ ಉಂಟು ಮಾಡಿದೆ. ... ಸ್ಯವಾಗಿ ಇಂತಹ ನಿರ್ಧಾರಗಳು ... ರೈತರ ಗಮನಕ್ಕೂ ಬರುವುದಿ...

ಎಲ್ಲ ಅಧಿಕಾರ ಕೇಂದ್ರಗಳನ್ನು ಅನುಮಾನದಿಂದ, ಎಚ್ಚರದಿಂದ ನೋಡುವ, ತಪ್ಪಿದಾಗ ತಿದ್ದುವ, ಮಣಿಯಲಾಗದ ಬೀದಿಗಿಳಿಯುವ ಆರೋಗ್ಯಪೂರ್ಣ ಸಂಘಟನೆಯಾಗಿಯೇ ರೈತಸಂಘ ಉಳಿಯಬೇಕು ಎನ್ನುವ ಅಭಿಪ್ರಾಯವೇ ಅವರಲ್ಲಿ ಕಂಡು ಬರುತ್ತಿದೆ.

ಕೃಷಿ ಕಾರ್ಮಿಕರ ಸಮಸ್ಯೆ

ರೈತಸಂಘದ ಮುನ್ನಡೆಗೆ ಮುಖ್ಯ ತೊಡಕಾಗಿರುವ ವಿಚಾರ ಕೃಷಿ ಕಾರ್ಮಿಕರದ್ದು. ದಿನದ ಕೊನೆಯಲ್ಲಿ ನಡೆಯುತ್ತಿದ್ದ ಅನೌಪಚಾರಿಕ ಚರ್ಚೆಯಲ್ಲಿ ಈ ವಿಚಾರ ಕಾಣಿಸಿಕೊಂಡರೂ ಮೂರು ದಿನಗಳ ಶಿಬಿರದುದ್ದಕ್ಕೂ ಆ ಬಗ್ಗೆ ಗಂಭೀರ ಚರ್ಚೆ ನಡೆದಿಂಲೇ ಇಲ್ಲ. ಆ ವಿಷಯ ಪ್ರಸ್ತಾಪಗೊಂಡಾಗೆಲ್ಲ ಅದನ್ನು ಕೊಡವಿಕೊಳ್ಳಲಾಗುತ್ತಿತ್ತು.

ನಿರ್ಣಾಯಕ ಸಂಖ್ಯೆಯಲ್ಲಿರುವ ಕೃಷಿ ಕಾರ್ಮಿಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ರೈತ ಸಂಘದ ಬಲವರ್ಧನೆಯಾಗಲಾರದು ಎಂಬುದು ಮಣ್ಣಿನಷ್ಟೇ ಸತ್ಯ. ರೈತ ಸಂಘದಲ್ಲಿ ಜಮೀನ್ದಾರ ವರ್ಗ ಕಡಿಮೆ ಇದ್ದರೂ ಶ್ರೀಮಂತ ರೈತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಭೂಮಿತಿ 100ರಿಂದ 50 ಎಕರೆಗಿಳಿದು ನಿಗದಿಯಾಗಿದ್ದರೂ ವಿವಿಧ ಮಾರ್ಗೋಪಾಯಗಳಿಂದ

ಪ್ರಾಯಪಟ್ಟರು. ಕೃಷಿ ಕಾರ್ಮಿಕರ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಮಾತ್ರ ಅವರನ್ನು ತಮ್ಮೊಡನೆ ಇರಿಸಿಕೊಳ್ಳುವುದು ಸಾಧ್ಯ ಎಂಬುದು ರೈತನಾಯಕರಿಗೆ ನಿಧಾನವಾಗಿಯಾದರೂ ಅರಿವಾಗುತ್ತಿರುವುದು ಸ್ವಾಗತಾರ್ಹ.

"ಮೊದಲು, ನಮ್ಮ ಹಕ್ಕುಗಳಿಗಾಗಿ ಹೋರಾಟ ನಂತರ ಕೃಷಿಕಾರ್ಮಿಕರ ಬಗ್ಗೆ ಚಿಂತಿಸೋಣ"– ಶಿಬಿರದಲ್ಲಿ ವ್ಯಕ್ತವಾದ ಕೆಲವು ರೈತರ ಈ ನೇರ ನುಡಿ ರೈತ ಸಮುದಾಯಕ್ಕೆ ಕೃಷಿಕಾರ್ಮಿಕರ ಬಗ್ಗೆ ಇರುವ ನಿರ್ಲಕ್ಷ್ಯವನ್ನು ಮೇಲ್ನೋಟಕ್ಕೆ ಬಿಂಬಿಸಿದರೂ ಅದು ನಿಜವಾದ ಚಿತ್ರಣ ಅಲ್ಲ.

ಈ ರೀತಿ ಪೋಳಿಯಾಗಿ ಹುಂಬನಂತೆ ಮಾತಾಡುವ ರೈತರು, ತಮ್ಮ ಹಕ್ಕುಗಳ ಈಡೇರಿಕೆಯಲ್ಲಿಯೇ ಕೃಷಿ ಕಾರ್ಮಿಕರ ಸಮಸ್ಯೆಗಳ ಪರಿಹಾರವೂ ಅಡಗಿದೆ ಎಂದು ತಿಳಿದುಕೊಳ್ಳಲಾರದಷ್ಟು ದಡ್ಡರಾಗಿದ್ದಾರೆ.

ಸೋಗಲಾಡಿ ಆರ್ಥಿಕ ನೀತಿ

ಇಂದು ರೈತರು ಮತ್ತು ಕೃಷಿಕೂಲಿ ಕಾರ್ಮಿಕರ ನಡುವೆ ತೊಡರಾಗಿ ನಿಂತಿರುವ ಕೃಷಿಕೂಲಿ ಪ್ರಶ್ನೆಯ ಮೂಲ ನಮ್ಮ ದೇಶದ ಸೋಗಲಾಡಿ ಆರ್ಥಿಕ ನೀತಿಯಲ್ಲಿದೆ ಎಂಬುದನ್ನು ನಾವು ಗಮನಿಸಬೇಕು.

ಗಿರಿ ಮರದ ವಿರುದ್ಧ ವ್ಯಾಪಕವಾಗಿ ಆಂದೋಲನವನ್ನೇ ನಡೆಸುತ್ತಿದೆ. ಇದರಿಂದ ಕಂಗಲಾದ ಪ್ಲೈವುಡ್ ಕಾರ್ಖಾನೆ ಮಾಲೀಕರು ಕೃಷಿಕ ಮತ್ತು ಕೃಷಿಕಾರ್ಮಿಕರ ನಡುವೆ ವ್ಯಾವಹಾರಿಕ ಜಾಣ್ಮೆಯಿಂದ ಬಿರುಕು ಹುಟ್ಟಿಸುತ್ತಿದ್ದಾರೆ. ಈ ಪ್ಲೈವುಡ್ ಕಾರ್ಖಾನೆ ಮಾಲೀಕರು ದಿನಕ್ಕೆ 20–30 ರೂಪಾಯಿ ಸಂಬಳ ಕೊಟ್ಟು ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಿದ್ದಾರೆ.

ನೀಲಗಿರಿ ವಿರುದ್ಧದ ಹೋರಾಟದ ಅಂಗವಾಗಿ ಪ್ಲೈವುಡ್ ಕಾರ್ಖಾನೆಗಳ ಕೆಲಸವನ್ನು ಬಹಿಷ್ಕರಿಸಿ ಎಂದು ರೈತಸಂಘ ಕರೆ ನೀಡಿದೆ. ತಮ್ಮ ಹೊಲದಲ್ಲಿ ಕೆಲಸ ಮಾಡಲು ಬರದೆ ಪ್ಲೈವುಡ್ ಕಾರ್ಖಾನೆಗಳಲ್ಲಿ ಕಾರ್ಮಿಕರು ದುಡಿಯಲು ಹೋಗುತ್ತಿದ್ದಾರೆ ಎಂಬ ಮತ್ಸರದಿಂದ ನೀಲಗಿರಿ ವಿರುದ್ಧ ಹೋರಾಟ ನಡೆಸುತ್ತಿದ್ದಾರೆ ಎಂದು ಕೃಷಿ ಕಾರ್ಮಿಕರ ಕಿವಿ ಚುಚ್ಚುತ್ತಿದ್ದಾರೆ. ಕೆಲವು ಹುಂಬ ಕೃಷಿ ಕಾರ್ಮಿಕರು ಅದನ್ನು ನಂಬಿದ್ದಾರೆ ಕೂಡಾ ಇದೊಂದು ಸಣ್ಣ ಉದಾಹರಣೆ ಅಷ್ಟೆ.

ಇಂತಹ ಪರಿಸ್ಥಿತಿಯಲ್ಲಿ ಸಂಘಟನೆಯನ್ನು ಉಳಿಸಿಕೊಳ್ಳುವುದೇ ದೊಡ್ಡ ಸಾಹಸವಾಗಿದೆ. ಕೃಷಿಕರ ಮತ್ತು ಕೃಷಿ ಕಾರ್ಮಿಕರ ನಡುವಿನ ಸಂಬಂಧದಲ್ಲಿನ ಕಗ್ಗಂಟನ್ನು ಬಿಡಿಸುತ್ತ ಹೋದರೆ "ಬೆಳೆದ ಬೆಳೆಗಳಿಗೆ ಲಾಭದಾಯಕ ಬೆಲೆಯಿರಬೇಕು" ಎನ್ನುವ ರೈತ ಸಂಘದ ಮುಖ್ಯ ಒತ್ತಾಯದಲ್ಲಿಯೇ ಅದು ಕೊನೆಗೊಳ್ಳುತ್ತದೆ.

ಮೋಸದ ಬೆಲೆ ನೀತಿ

ಆಹಾರ ಧಾನ್ಯದ ಬೆಲೆಗಳಲ್ಲಿ ಎಂದೂ ಏರಿಕೆಯಾಗದಂತೆ ಎಚ್ಚರ ವಹಿಸುತ್ತಿರುವ ಸರಕಾರ ಅವುಗಳಿಗೆ ವೈಜ್ಞಾನಿಕವಾಗಿ ಬೆಲೆ ನಿಗದಿ ಮಾಡಿಲ್ಲ. ಆದರೆ ಕೃಷಿ ಕ್ಷೇತ್ರವನ್ನು ಹೊರತು ಪಡಿಸಿ ಉಳಿದೆಲ್ಲ ಕ್ಷೇತ್ರಗಳಲ್ಲಿ ತಯಾರಿಸಿದ ವಸ್ತುಗಳಿಗೆ ಅವರಿಚ್ಛೆಯ ಪ್ರಕಾರ ಬೆಲೆಗಳನ್ನು ನಿಗದಿ ಪಡಿಸುವ ಪರಮಾಧಿಕಾರವಿದೆ. ಅವುಗಳ ಬೆಲೆಯನ್ನು ನಿಯಂತ್ರಿಸಲು ಯಾವ ಕಾನೂನನ್ನೂ ಮಾಡದ ಸರಕಾರ ಸೋಗಲಾಡಿತನದ ಅಸಹಾಯಕತೆ ವ್ಯಕ್ತ ಪಡಿಸುತ್ತಿದೆ.

ಅದರೆ ಕೃಷಿ ಉತ್ಪನ್ನಗಳ ಬೆಲೆ ನಿಗದಿ ಪಡಿಸಲು ಕೃಷಿ ಬೆಲೆ ಮಂಡಳಿ ರಚಿಸಿದೆ. ಆ ಮಂಡಳಿ ಕೂಡಾ ಬೇಸಾಯದ ಖರ್ಚು ಮತ್ತು ಜೀವನ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಬೆಲೆ ನಿರ್ಧರಿಸುತ್ತಿಲ್ಲವೆಂಬುದು ಸ್ಪಷ್ಟ.

ಇದೇ ಸರಕಾರ ರೈತರಿಗೆ ಲೆವಿ ವಿಧಿಸಿದೆ ಲೆವಿ ಸಂಗ್ರಹಣೆ ಕಾನೂನಿನ ಪ್ರಕಾರ ರೈತರು ಬೆಳೆದ ಧಾನ್ಯಗಳನ್ನು ಮಾರುಕಟ್ಟೆ ಬೆಲೆಗಿಂತ ಕಡಿಮೆ ಬೆಲೆಯಲ್ಲಿ ಸರಕಾರಕ್ಕೆ ಕಡ್ಡಾಯವಾಗಿ ನೀಡಬೇಕಾಗಿದೆ. ಪ್ರಸ್ತುತ ರೈತರ ಮೇಲಿನ ನೇರ ಲೆವಿಯನ್ನು ರದ್ದುಪಡಿಸಲಾಗಿದ್ದರೂ ಅಕ್ಕಿಗಿರಣಿ ಮಾಲೀಕರಿಂದ ಅದನ್ನು ವಸೂಲಿ ಮಾಡುತ್ತಿದೆ. ಆದರೆ ಇದು ಕೂಡಾ ರೈತರ ಪರೋಕ್ಷ ಸುಲಿಗೆಯೇ ಆಗಿದೆ.

ರೈತರು ನಿಧಾನವಾಗಿ ಸರ್ಕಾರದ ಈ ಮೋಸದ ಆರ್ಥಿಕ ನೀತಿಯನ್ನು ತಿಳಿದುಕೊಳ್ಳುತ್ತಿದ್ದಾರೆ. ಬದಲಾವಣೆಗಾಗಿ ಟೊಂಕ ಕಟ್ಟಿದ್ದಾರೆ. ಸರಕಾರದ ಒಡೆದು ಆಳುವ ನೀತಿ ಅವರನ್ನು ಮತ್ತಷ್ಟು ಉದ್ರಿಕ್ತರನ್ನಾಗಿ ಮಾಡಿದೆ. ಈ ಕಾರಣದಿಂದಲೇ ರೈತರೆಲ್ಲ ಸಿಕ್ಕರಾಗಬೇಕು ಎನ್ನುವ ಹೋಲಿಕೆಯ ಕರೆ ಅವರಿಗೆ ಹೆಚ್ಚು ಹಿತವಾಗಿ ಕಾಣಿಸುತ್ತಿದೆ. ಈ ವರೆಗೆ ಕೇವಲ ಹಸಿರು ರುಮಾಲಿನೊಂದಿಗೆವಿಧಾನ ಸೌಧಕ್ಕೆ ದಾಳಿಯಿಟ್ಟ ರೈತರು ನೋಟದಲ್ಲಿ ಕುಡುಗೋಲು ಕಟ್ಟಿಕೊಂಡು ಬರುವ ಮುನ್ನ ... ಆಳುವ ವರ್ಗ ಎಚ್ಚೆತ್ತೀತೇ ?

× × ×

... ಹಸಿರುಹಾದಿಯ ಮಧಿ ... ಮೂರುದಿನಗಳ ಅಧ್ಯಯನ

ಶಿಬಿರ ಕೊನೆಗೊಂಡಾಗಲೂ ಇದರದ್ದು ಹಸಿರು ನೆನಪು ಮಾತ್ರ.

ಚರ್ಚೆಗೆ ತೊಡಗಿದಾಗ ಬೈದಾಡುತ್ತ, ಆ ಜನ್ಮ ಶತ್ರುಗಳಂತೆ ವರ್ತಿಸುವ ರೈತರು ದೇವಸ್ಥಾನದ ಜಗಲಿಯಲ್ಲಿಊಟದಎಲೆಯ ಮುಂದೆ ಕೂತಾಗಲನ್ನ ತಮ್ಮರಾಗುತ್ತಾರೆ. ಬಹುಶ ಈ ರೀತಿಯ ನಿರ್ಮಲ ಮನಸ್ಸಿನ ಮುಕ್ತ ಸಂಬಂಧವೇ ಅವರನ್ನು ಪರಸ್ಪರ ಬಂಧಿಸಿರುವ ಸ್ನೇಹತಂತ್ರವಾಗಿರಬೇಕು.

ಮೂರು ದಿನಗಳಲ್ಲಿಯೂ ನಾವೆಂದೂ ಬೀಡಿ ಸಿಗರೇಟ್ ಸೇದುತ್ತಿರುವ ರೈತರನ್ನು ಕಂಡಿಲ್ಲ. ಮಾರ್ಗದ ಬದಿಯಲ್ಲಿಯೇ ಹೆಂಡದ ಅಂಗಡಿಯಿದ್ದರೂ ಯಾವತ್ತು ಹಸಿರು ರುಮಾಲಿನ ವ್ಯಕ್ತಿ ಅದರ ಸನಿಹದಲ್ಲಿ ಸುಳಿದುದನ್ನು ಕಂಡಿಲ್ಲ ಸಂಧ್ಯಾಂಗಣ ಹೊರಗೆ ವಿರುದನಿಯಲ್ಲಿ ಬೈದಾಡಿ ಕೊಂಡದ್ದಾಗಲಿ ಜಗಳವಾಡಿಕೊಂಡದ್ದಾಗಲಿ ಗಮನಿಸಿಲ್ಲ. ಅಂದಮಾತ್ರಕ್ಕೆ ಅವರೆಲ್ಲ ಆ

ದಿನೇಶ್ ಅಮಿನ್ ಮಟ್ಟು

ದೌರ್ಬಲ್ಯದಿಂದ ಮುಕ್ತರಾದವರೆಂದು ಹೇಳಲಾಗದಿದ್ದರೂ ಸಾರ್ವಜನಿಕವಾಗಿ ಅವರ ವರ್ತನೆ ಗೌರವಪೂರ್ಣವಾಗಿತ್ತು.

ರೈತರು ಮತ್ತು ಶಿಸ್ತು ವಿರೋಧ ಶಬ್ದಗಳೇನೋ ಎನ್ನುವಷ್ಟರ ಮಟ್ಟಿಗೆ ಶಿಸ್ತುಬದ್ಧ ಜೀವನದಿಂದ ದೂರವಿರುವ ರೈತರು ಇಲ್ಲಿ ಶಿಸ್ತಿನಸಿಪಾಯಿಗಳಾಗಿದ್ದರು ಕಡ್ಡಾಯವಾಗಿ ಅವರ ಹಗಲು ಮೇಲೆ ಹಸಿರುಮಾಲು ಇರುತ್ತಿತ್ತು. ಭಾಷಣದ ಮಧ್ಯೆ ಅವರು ಒಣಹುಟ್ಟಿಯಲ್ಲಿ ತೊಡ ಗಿದ್ದನ್ನಾಗಲೀ, ನಿದ್ರೆಯಿಂದ ತೂಕಡಿಸುತ್ತಿದ್ದುದನ್ನಾಗಲಿ ನಾನು ಕಂಡಿಲ್ಲ.

ವಿರಾಮದ ಸಮಯದಲ್ಲಿಯೂಅವರು ನಡೆದ ಚರ್ಚೆಯ ವಿಶ್ಲೇಷಣೆ ಮತ್ತು ಪರಸ್ಪರ ಕಷ್ಟ–ಸುಖಗಳನ್ನು ಹಂಚಿಕೊಳ್ಳುವುದರಲ್ಲಿ ತಲ್ಲೀನರಾಗುತ್ತಿದ್ದರೇ ವಿನಹ ಕೆಲಸಕ್ಕೆ ಬಾರದ ಕಾಡುಹರಟೆಯಲ್ಲಿ ಸಮಯವನ್ನು ಕೊಲ್ಲುತ್ತಿರಲಿಲ್ಲ.

ರೈತಮುಖಂಡರಾದ ಎನ್.ಡಿ. ಸುಂದರೇಶ್, ರಾಜ್ಯ ರೈತ ಸಂಘದ ಉಪಾಧ್ಯಕ್ಷ ಬಸವರಾಜ ತಂಬಾಕೆ ಹಾಗೂ ಶಿವಮೊಗ್ಗ ಜಿಲ್ಲಾ ಶಾಖೆಯ ಅಧ್ಯಕ್ಷರಾದ ಎಚ್. ಆರ್. ಬಸವರಾಜಪ್ಪ ಈ ಮೂವರು ಮೂರು ದಿನವೂ ಶಿಬಿರದ ಮೇಲ್ವಿಚಾರಣೆ ನಡೆಸುತ್ತ ರೈತರೊಡನಿದ್ದರು.

ಯುವಕರೂ ಅಷ್ಟೇ ರೈತಚಳವಳಿಯವರಿಗೆ ಹೊತ್ತು ಕಳೆಯುವ ಹಾಬಿಯಾಗಲಿ ದಾದಾಗಿರಿ ತೋರಿಸುವ ವೇದಿಕೆಯಾಗಲಿ...... ಆಗಿರದೆ ಅದೇ ಜೀವನವಾಗಿತ್ತು ತಲೆಯಲ್ಲಿ ಪುರೋಗಾಮಿ ವಿಚಾರಗಳನ್ನು ಹೊತ್ತುಕೊಂಡ ಅವರಕಣ್ಣುಗಳು ಕನಸುಗಳನ್ನು ತುಂಬಿಕೊಂಡು ಮಿನುಗುತ್ತಿದ್ದವು. ಜೀವನೋತ್ಸಾಹದ ತುಂಬಿಕೊಂಡ ಅವರ ಮನಸ್ಸು ಲವಲವಿಕೆಯಿಂದ ಪುಟಿಯುತ್ತಿತ್ತು ರೈತ ಯುವಕರೆಲ್ಲ ಇದೇ ಬ್ರಾಂಡಿನವರೆಂದು ತೀರ್ಮಾನ ನೀಡಲಾಗದಿದ್ದರೂ ಶಿಬಿರದಲ್ಲಿ ಭಾಗವಹಿಸಿದವರು ಮಾತ್ರಫಲಸಮೂಡಿಸ ಬಲ್ಲವರಾಗಿದ್ದರು ಬಹುಶ ರೈತ ಸಂಘದ ತೋಳು ಇವರೇ ಆಗಿದ್ದಾರೆ.

ಅರಳು ಹುರಿದಂತೆ ಮಾತನಾಡುತ್ತ ಅಡಿಗೆ ಮನೆಯಿಂದ ಹಿಡಿದು ಬೀದಿಯವರೆಗೆ ಪಾದರಸದಂತೆ ಹರಿದಾಡುತ್ತಿದ್ದ ತೀರ್ಥಹಳ್ಳಿಯ ನಾಗೇಶ್, ಶಾಂತವಾ ಗಂಭೀರವಾಗಿ ಆದರೆ ಅಷ್ಟೇ ಖಚಿತತೆಯಿಂದ ಚರ್ಚೆಗಿಳಿಯುತ್ತಿದ್ದ ಕೂಡಲಿ ವೆಂಕಟೇಶ, ತೆರೆಮರೆಯಲ್ಲಿಯೇ ಗಂಭೀರವಾಗಿ ನಿಂತು ಮೇಲ್ವಿಚಾರಣೆ ನೋಡುತ್ತಾ ಕಣ್ಣಲ್ಲೇ ಆತ್ಮೀಯತೆ ಸೂಸುತ್ತ ಜತೆಗೆ ಫೋಟೋಕ್ಲಿಕ್ಕಿಸುತ್ತಿದ್ದ ಬಿಳಿ ಗಡ ... ಕೂದಲುಗಳ ಮೂಲಕ ... ಇಮೇಜ್ ಪಡೆದಿರುವ ಕಡಿ ... ಣ್ಣ ವ್ಯಕ್ತಿಯಲ್ಲಿ ರೈತ ... ಪ್ರವೃತ್ತಿ ಬೆಳೆಸಿಕೊಂ ... ತನ್ನನ್ನು ತೊಡಗಿಸಿಕೆ ... ಧ್ಯಾಪಕ ಸಿರಿಲ್ ಎ ... ಭಾಷ್ಯ ಅಂಗವಾಗಿದ್ದ ...

ಹೆಚ್ಚು ಭೂಮಿ ಹೊಂದಿರುವ ರೈತ ವರ್ಗವೇ ಚಳವಳಿಯ ಮುಂಚೂಣಿಯಲ್ಲಿದ್ದಾರೆ.

ರೈತ ಸಂಘದ ಬೇಡಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ಇಡೀ ರೈತಾಪಿ ವರ್ಗಕ್ಕೆ ಸಂಬಂಧಿಸಿರುವುದರಿಂದ ಎಲ್ಲ ವರ್ಗಗಳ ರೈತರು ಈ ವರೆಗೆ ಚಳವಳಿಯಲ್ಲಿ ಭಾಗವಹಿಸಿದ್ದರು. ಶ್ರೀಮಂತ ರೈತರ ಎರಡು ಲಕ್ಷ ರೂ. ಸಾಲಕ್ಕೆ ವಿನಾಯತಿ ದೊರೆತರೆ ಅದು ತಮ್ಮ ಎರಡು ಸಾವಿರ ಸಾಲಕ್ಕೂ ಅನ್ವಯಿಸುತ್ತದಲ್ಲ ಎನ್ನುವ ನಿರೀಕ್ಷೆಯಿಂದ ಬಡರೈತರೂ ಚಳವಳಿಯ ಕರೆಗೆ ಓಗೊಟ್ಟಿದ್ದರು.

ಆದರೆ ರೈತಸಂಘ ತನ್ನ ಪ್ರಾರಂಭದ ದಿನಗಳಲ್ಲಿ ಮುಂದಿಟ್ಟ ಒತ್ತಾಯಗಳಲ್ಲಿ ಕೆಳವರ್ಗದ ರೈತರು ಮತ್ತು ಭೂರಹಿತ ಕೃಷಿ ಕಾರ್ಮಿಕರಿಗೆ ಸಂಬಂಧಿಸಿದ ಯಾವ ಅಂಶವೂ ಇದ್ದಿಲ್ಲ ಎಂಬುದು ಗಮನಾರ್ಹ. ಕೃಷಿ ಕಾರ್ಮಿಕ ವರ್ಗ ನಿಧಾನವಾಗಿ ರೈತ ಸಂಘದಿಂದ ದೂರ ಸರಿಯುತ್ತಿದ್ದಂತೆ ರೈತ ನಾಯಕರು ಆ ಬಗ್ಗೆ ಮಾತನಾಡ ಹತ್ತಿದ್ದಾರೆ.

ಶಿಬಿರದ ವೇಳೆ ನಡೆದ ಅನೌಪಚಾರಿಕ ಚರ್ಚೆಯ ವೇಳೆ ರೈತ ಮುಖಂಡರಾದ ಕಡಿದಾಳ ಶಾಮಣ್ಣ, ಪಿಜ್. ಗಣಪತಿಯಪ್ಪ ಮೊದಲಾದವರು ಕೆಲವು ಸಲಹೆಗಳನ್ನು ಮುಂದಿಟ್ಟಿದ್ದರು. "ಕೃಷಿ ಕಾರ್ಮಿಕರಿಗೂ ರೈತರಿಗೂ ಇರುವ ಮುಖ್ಯ ವ್ಯತ್ಯಾಸ ಕೃಷಿ ಭೂಮಿಯದ್ದು. ಅರಣ್ಯ ಇಲಾಖೆಯಲ್ಲಿರುವ ಕೃಷಿಯೋಗ್ಯ ಭೂಮಿಯನ್ನು ಭೂರಹಿತ ರೈತರಿಗೆ ಹಂಚಬೇಕೆಂದು ಒತ್ತಾಯಿಸಿ ರೈತಸಂಘ ಹೋರಾಟ ನಡೆಸಬೇಕು–" ಎಂದು ಕಡಿದಾಳ ಶಾಮಣ್ಣ ಅವರ ಮಾತು ಚಾತ ... ವಾಹಕ.

... ಭವಿಷ್ಯ ಯೋಜನೆ ... ರ್ಮಿಕರ ಸಾಗುವಳಿ ಮಾಡಿದ ಜ... ಗಳಿಗೆ ಹಕ್ಕುಪತ್ರಗಳ ನೀಡುವಿಕೆ ... ರಾದ ಒತ್ತಾಯಗಳು ... ಕೈಗೆತ್ತಿಕೊಳ್ಳಬೇಕೆಂದು ... ತ...

ಇಂದು ಇರುವ ಪಳ್ಳಿ ನಿನ್ನೆಯದಲ್ಲ. ಕಾಲ ಬದಲಾಗುತ್ತಿದ್ದಂತೆ ಹಳ್ಳಿಗಳ ಜನಜೀವನ ಶೈಲಿಯೂ ಬದಲಾಗಿದೆ. ಬದಲಾವಣೆಯ ಗಾಳಿ ಕೃಷಿಕಾರ್ಮಿಕರ ಮೇಲೆಯೂ ಬೀಸಿದೆ. ಒಂದೆ ಗಂಜಿ ನೀರಿನಲ್ಲಿ ಮೃಷ್ಟಾನ್ನದ ತೇಗು ಬಿಡುತ್ತಿದ್ದ ಅವರಿಗೂ ಅನ್ನದ ರುಚಿ ಹತ್ತಿದೆ. ಮಾನ ಮುಚ್ಚಲು ತಕ್ಕಷ್ಟೆ ಬಟ್ಟೆ ಸುತ್ತಿಕೊಳ್ಳುತ್ತಿದ್ದ ಅವರು ಇಂದು ಅಂಗಿ, ಪಂಚೆ, ಪ್ಯಾಂಟ್, ನಿಕ್ಕರ್ ಧರಿಸ ಹತ್ತಿದ್ದಾರೆ. ದನ ಮೇಯಿಸಲು ಹೋಗಬೇಕಾದ ಮಕ್ಕಳು ಶಾಲೆಯ ಮೆಟ್ಟಿಲು ಹತ್ತುತ್ತಿವೆ.

ಜೀವನಮಟ್ಟದಲ್ಲಿ ಏರಿಕೆ ಆಗಿದೆ. ಅದಕ್ಕನುಗುಣವಾಗಿ ಜೀವನವೆಚ್ಚದಲ್ಲಿಯೂ ಏರಿಕೆಯಾಗಿದೆ. ಆದರೆ ಸಿಗುವ ಕೂಲಿಯಲ್ಲಿ ಏರಿಕೆ ಆಗಿಲ್ಲ. (ಬೊಬ್ಬೆ ಹಾಕಿದಾಗೆಲ್ಲ ತುಟ್ಟಿಭತ್ತೆ ಪಡೆಯ್ಯಗಲು ಅವರೇನು ಸರಕಾರಿ ನೌಕರರೇ?) ಕೂಲಿಯನ್ನು ಏರಿಸಬೇಕೆಂದು ಅವರು ರೈತರಲ್ಲಿ ಅಧಿಕಾರಯುತವಾಗಿ ಒತ್ತಾಯಿಸುವಂತಿಲ್ಲ. ಯಾಕೆಂದರೆ ಉಳಿದ ಸಾಮಗ್ರಿಗಳ ಬೆಲೆ ಏರಿಕೆಯಾದ ಗತಿಯಲ್ಲಿ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಏರಿಕೆಯಾಗಿಲ್ಲ. ಈ ಪರಿಸ್ಥಿತಿಯಲ್ಲಿ ರೈತರಾದರೂ ಹೇಗೆ ಕೂಲಿಯನ್ನು ಹೆಚ್ಚಿಸಿಯಾರು? ಇದು ಕೃಷಿ ಕಾರ್ಮಿಕರಿಗೂ ಗೊತ್ತು.

ವಿಷವರ್ತುಲ

ಇದೊಂದು ವಿಷಚಕ್ರ. ಇದರೊಳಗೆ ಕೃಷಿಕ ಮತ್ತು ಕೃಷಿ ಕಾರ್ಮಿಕನ ನಡುವಿನ ಸಂಬಂಧ ... ಹೊಡೆಯುತ್ತಿದೆ. ಕೃಷಿಕರು ಮತ್ತು ಕೃಷಿ ಕಾರ್ಮಿಕರ ನಡುವಿನ ಈ ಸಂಕೀರ್ಣ ಸಂಬಂಧ ಪರಸ್ಪರ ಅಪನಂಬಿಕೆಗಳ ... ಹುಟ್ಟಿಗೆ ಕಾರಣವಾಗಿದೆ. ರೈತ ... ಸಂಘದ ಒಗ್ಗಟ್ಟನ್ನು ಒಡೆಯು... ಪ್ರ... ಸುತ್ತಿರುವ ಸ್ವಾರ್ಥ ಹಿತಾಸಕ್ತಿ ... ಇದೊಂದು ವರದಾನವಾ... ಮಲೆನಾಡಿನ...

ಮಕ್ಕಳ ಪ್ರತಿಭೆಯನ್ನು ಬೆಳಗಿಸಿದ ರಜಾ ಶಿಬಿರ

ಮಕ್ಕಳು ರಜೆಯ ಸದುಪಯೋಗ ಮಾಡಬೇಕು. ಹೌದು ಅದಕ್ಕೆ ಹಿರಿಯರು ಅವಕಾಶ ಕಲ್ಪಿಸಿಕೊಡಬೇಕಲ್ಲ. ಸುಳ್ಯ ತಾಲೂಕಿನ ಜಾಲ್ಸೂರಿನ ನಾಟಕ ಸಂಸ್ಥೆ 'ವಿನ್ಯಾಸ' ಇತ್ತೀಚೆಗೆ ಬೇಸಗೆ ಶಿಬಿರದ ಮೂಲಕ ಇಂತಹ ಒಂದು ಅವಕಾಶವನ್ನು ಕಲ್ಪಿಸಿತ್ತು. ಆಸುಪಾಸಿನ ಸುಮಾರು ಅರುವತ್ತರಷ್ಟು ಮಕ್ಕಳು ಈ ಅವಕಾಶವನ್ನು ಬಳಸಿಕೊಂಡರು.

ಮಕ್ಕಳು ಪ್ರದರ್ಶಿಸಿದ ನಾಟಕದ ಒಂದು ದೃಶ್ಯ.

ಒತ್ತಾಯದಿಂದ ಹೇರಿದ್ದನ್ನು ಮಕ್ಕಳು ಕಲಿಯುವುದು ನಿಧಾನ ಆದರೆ ಮಕ್ಕಳೇ ಬಯಸಿ ಕಲಿಯುವುದಿದ್ದರೆ ಬೇಗನೇ ಕಲಿಯುತ್ತಾರೆ ಎನ್ನುವುದಕ್ಕೆ ಈ ಹತ್ತು ದಿನದ ಶಿಬಿರವೇ ಸಾಕ್ಷಿ. ಹತ್ತು ದಿನಗಳ ಕಾಲ ನಡೆದ ಶಿಬಿರದಲ್ಲಿ ಮಕ್ಕಳು ಕಲಿತ ವಿಷಯಗಳು ಒಂದೆರಡಲ್ಲ, ಹಲವಾರು! ಮಿಮಿಕ್ರಿ, ಕೋಲಾಟ, ಬೊಂಬೆ ತಯಾರಿ, ಮುಖವಾಡ ತಯಾರಿ, ಮೂಕಾಭಿನಯ, ಜಾನಪದ ನೃತ್ಯ, ಕೋಲಾಟ, ಹಾಡು, ಪೇಪರ್ ಕಟ್ಟಿಂಗ್, ನಾಟಕ ಇತ್ಯಾದಿ. ಮಕ್ಕಳ ಮೇಲೆ ಯಾವುದೇ ಒತ್ತಡ ಹೇರದೆ, ಇಂತಹದನ್ನೇ, ಹೀಗೇ ಮಾಡಿ ಎಂದು ಹೇಳದೆ, ಬದಲಾಗಿ ಏನೆಲ್ಲಾ ಮಾಡಬಹುದು, ಹೇಗೆ ಮಾಡಬಹುದು ಎಂಬುದಷ್ಟನ್ನು ಮಾತ್ರ ಹೇಳಿ ಉಳಿದದ್ದನ್ನು ಅವರವರ ಸ್ವಂತಿಕೆಗೆ ಬಿಟ್ಟದ್ದು ಈ ಶಿಬಿರದ ವೈಶಿಷ್ಟ್ಯ.

ಗೋಪಾಡ್ಕರ್, ಎಂ. ಜಿ. ಕಜೆ, ಮೋಹನ ಸೋನ, ಪಟ್ಟಾಭಿರಾಮ, ಎಂ. ಎಸ್. ಜಯಪ್ರಕಾಶ್, ಯಂ.ಎಸ್.ಗೀತ, ಕೃಷ್ಣಕುಮಾರ್ ವಿವಿಧ ವಿಷಯಗಳಲ್ಲಿ ಮಕ್ಕಳಿಗೆ ಪರಿಣಾಮಕಾರಿಯಾಗಿ ತರಬೇತಿ ನೀಡಿದ್ದಾರೆ.

ಹಳೆ ಪೇಪರ್‌ಗಳನ್ನು, ಕಾಗದ ಚೂರುಗಳನ್ನು ಉಪಯೋಗಿಸಿ ವಿವಿಧ ವಿನ್ಯಾಸದ, ವ್ಯಕ್ತಿತ್ವದ ಬೊಂಬೆಗಳನ್ನು, ಮುಖವಾಡಗಳನ್ನು ತಯಾರಿಸುವುದು ಮಕ್ಕಳಿಗೊಂದು ಮೋಜಾಗಿತ್ತಷ್ಟೇ ಅಲ್ಲ, ಅಚ್ಚರಿಯೂ ಆಗಿತ್ತು. ಬೇಡದ ಕಾಗದ ಚೂರುಗಳನ್ನು ಹೇಗೆ ಸದುಪಯೋಗಪಡಿಸಬಹುದೆಂದು ಮಕ್ಕಳಿಗೆ ಸೂಚ್ಯವಾಗಿ ತಿಳಿಸಲಾಯಿತು. ಬೊಂಬೆಗಳ, ಮುಖವಾಡಗಳ ತಯಾರಿಯಲ್ಲಿ ಒಬ್ಬೊಬ್ಬರದು ಒಂದೊಂದು ವಿನ್ಯಾಸ, ಭಾವ, ಗಾತ್ರ; ನೋಡುವವರಿಗೆ ಒಳ್ಳೆಯ ತಮಾಷೆ. ಮಕ್ಕಳ ಉದ್ವೇಗ, ಸಡಗರವೋ ... ನೋಡಿದವನೇ ಬಲ್ಲ. ಬಹುಶ ತರಗತಿಗಳಲ್ಲಿ ಯಾವುದೇ ಪಾಠವನ್ನು ಕಲಿಯುವುದರಲ್ಲಿ ಇಂತಹ ಸಡಗರ, ತಲ್ಲೀನತೆ ಮಕ್ಕಳಿಂದ ನಾವು ನಿರೀಕ್ಷಿಸಲಾರೆವು.

ಅಲಂಕರಿಸಿದ ಗೊಂಬೆಗಳು

ವರ್ಷ ವರ್ಷವೂ ವಾರ್ಷಿಕೋತ್ಸವಗಳಲ್ಲಿ ಮಾಡಿದ್ದನ್ನೇ ಮಾಡಿ, ನೋಡಿದ್ದನ್ನೇ ನೋಡಿ ಬೇಸತ್ತಿದ್ದ ಮಕ್ಕಳಿಗೆ ಕೋಲಾಟ, ಜಾನಪದ ನೃತ್ಯಗಳ ತರಬೇತಿಯಂತೂ ಸ್ವರ್ಗದ ಸೋಪಾನವಾಗಿತ್ತು. ಈ ನೃತ್ಯಗಳಲ್ಲಿ ಬಳಸುವ ತಾಳ, ಲಯ, ಹೆಜ್ಜೆಗಳ ಅರಿವು ಲಂಗು ಲಗಾಮಿಲ್ಲದೆ ಕುಣಿಯುತ್ತಿದ್ದ ಮಕ್ಕಳಿಗೆ ಕುಣಿಯುವುದಕ್ಕೂ ರೀತಿ ಇದೆ, ನೀತಿ ಇದೆ ಎಂಬುದು ಮನದಟ್ಟಾಗುವಂತೆ ಮಾಡಿದೆ.

ಮಿಮಿಕ್ರಿ, ಮೂಕಾಭಿನಯಗಳಲ್ಲಿ ಗುರುವನ್ನು ಮೀರಿಸಿದಶಿಷ್ಯರೆಂದಲ್ಲಿ ತಪ್ಪಿಲ್ಲ. ಇವತ್ತು ಕೆಲವನ್ನು ಕಲಿಸಿದರೆ, ನಾಳೆ ಅದನ್ನೂ ಅದರ ಜೊತೆಯಲ್ಲಿ ತಮ್ಮದೇ ಸ್ವಂತ ಆವಿಷ್ಕಾರಗಳನ್ನೂ ಮಾಡಿ ತೋರಿಸುತ್ತಿದ್ದರು ಈ ಪುಟಾಣಿಗಳು! ಈ ಹಿಂದೆ ಬಿಟ್ಟ ಕಣ್ಣು, ಬಾಯಿಗಳಿಂದ ಆಲಿಸುತ್ತಿದ್ದ ಮಿಮಿಕ್ರಿಗಳನ್ನು ತಾವೂ ಮಾಡಿದವೆಂದಾಗ ಮಕ್ಕಳ ಸಂತೋಷವೇನು, ಸಂಭ್ರಮಗಳೇನು!?

ಶಿಬಿರದಲ್ಲಿ ವ್ಯಾಯಾಮ, ಪೇಪರ್ ಕಟ್ಟಿಂಗ್, ಹಾಡು, ರಂಗ ತಂತ್ರಗಳು ಹಾಗೂ ಇನ್ನೂ ಅನೇಕ ವಿಷಯಗಳನ್ನು ಮಕ್ಕಳಿಗೆ ಪರಿಚಯಿಸಲಾಯಿತು. ಈ ಹತ್ತು ದಿನಗಳಲ್ಲಿ ಯಾರೊಬ್ಬರೂ ಯಾವುದೇ ವಿಷಯದಲ್ಲಿ ಪರಿಪೂರ್ಣತೆಯನ್ನು ಪಡೆದಿಲ್ಲ ನಿಜ; ಆದರೆ ವಾಕ್ಯ ರಚನೆಗೆ ಹೇಗೆ ಅಕ್ಷರಮಾಲೆಗಳ ಅಭ್ಯಾಸವೊ ಲಾಗುತ್ತದೋ ಅದೇ ರೀತಿ ಈ ಎಲ್ಲಾ ವಿಷಯಗಳ ಮೂಲವನ್ನು ಪರಿಚಯಿಸಲಾಗಿದೆ. ಇನ್ನು ಇದನ್ನು ಬೆಳೆಸುವುದು, ಪೋಷಿಸುವುದು ಮಕ್ಕಳ ಮತ್ತು ಮನೆಯವರ ಹಿರಿಯರಿಗೆ ಬಿಟ್ಟದ್ದು.

ಮಾಮೂಲಿನಂತೆ ಇಲ್ಲೂ ಕೊನೆಯಲ್ಲಿ ಶಿಬಿರಾರ್ಥಿಗಳಿಗೊಂದು ಪರೀಕ್ಷೆಯಿತ್ತು. ಪರೀಕ್ಷೆಯಲ್ಲೂ ಒಂದು ವೈಶಿಷ್ಟ್ಯ. ಮಕ್ಕಳೇ ಕೆಲವು ನಾಟಕಗಳನ್ನು ಯೋಚಿಸಿ, ಹೆಣೆದು ಅಭಿನಯಿಸಿತೋರಿಸಬೇಕು;ವಿಮರ್ಶಿಸಬೇಕು; ಇದರಲ್ಲಿ ಅಜ್ಜಿ ಕಥೆಗಳೂ, ಪಂಚ ತಂತ್ರದ ಕಥೆಗಳೂ, ಸ್ವಂತ ಕಲ್ಪನೆಗಳೂ ಇದ್ದವು. ಪ್ರದರ್ಶನದಲ್ಲಂತೂ ಹಿರಿಯರ ಯಾವ ಮಾರ್ಗದರ್ಶನಗಳಿಲ್ಲದೆಯೂ ತಾವು ಶಿಬಿರದಲ್ಲಿ ಕಲಿತ, ಮಾಡಿದ ಬೊಂಬೆಗಳನ್ನು, ಮುಖವಾಡಗಳನ್ನು, ಮಿಮಿಕ್ರಿಯನ್ನು, ಮೂಕಾಭಿನಯವನ್ನು ಮಕ್ಕಳು ಸಮರ್ಥವಾಗಿ ಬಳಸಿಕೊಂಡದ್ದು ಸೋಜಿಗ! ಒಂದು ಕಡೆಯಲ್ಲಿ ಡಾ। ಶಿವರಾಮ ಕಾರಂತರು, "ಮಕ್ಕಳಿಗೆ ಯಾವ ವಿಷಯದಲ್ಲಿ ಆಸಕ್ತಿಯಿದೆಯೋ ಅದನ್ನು ಕಲಿಸಿ, ಅದನ್ನು ಅವರು ತೀವ್ರವಾಗಿ ಕಲಿಯುತ್ತಾರೆ" ಎಂದು ಹೇಳಿದ್ದರು. ಈ ಶಿಬಿರವನ್ನು ವೀಕ್ಷಿಸಿದವರಂತೂ ಈ ಮಾತನ್ನು ಅಲ್ಲಗಳೆಯಲು ಸಾಧ್ಯವೇ ಇಲ್ಲ!

ಇಲ್ಲಿ ಕಲಿಸಲಾದ ಹೆಚ್ಚಿನ ಎಲ್ಲಾ ವಿಷಯಗಳು ರಂಗಕ್ಕೆ ಸಂಬಂಧಿಸಿದಂತ ಹವ್ಯಗಳು ಅಥವಾ ಇವುಗಳನ್ನು ರಂಗದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು. ಇನ್ನು ಈ ಶಿಬಿರಗಳಲ್ಲಿ ಬಳಸಿರದ ಪ್ರಬಂಧ ರಚನೆ, ಚಿತ್ರಕಲೆ, ಭಾಷಣ, ಪ್ರಥಮ ಚಿಕಿತ್ಸೆ ವೃತ್ತಿ ಮಾರ್ಗದರ್ಶನಗಳು, ಇತ್ಯಾದಿ ಹಲವಾರು ವಿಷಯಗಳ ಬಗ್ಗೆ ಮಕ್ಕಳ ಆಸಕ್ತಿ ಚಿಗುರುವಂತೆ ಮಾಡಬಹುದು. ಆದರೆ ಇದು ನಮ್ಮ ಇಂದಿನ ಹಳಸಲು ಶಿಕ್ಷಣ ಕ್ರಮದಿಂದ ಸಾಧ್ಯವಿಲ್ಲ. ಬದಲಾಗಿ ಇಂತಹ ಶಿಬಿರಗಳೇ ಈ ಕಾರ್ಯಗಳಿಗೆ ಸೂಕ್ತ. ರಜಾದಿನಗಳನ್ನು ಉಪಯೋಗಿಸಿಕೊಂಡು ವಿವಿಧ ರೀತಿಗಳಲ್ಲಿ, ವಿಷಯಗಳಲ್ಲಿ ಇಂತಹ ಶಿಬಿರಗಳು ಎಲ್ಲೆಡೆ ನಡೆದರೆ ನಮ್ಮ ಪ್ರಸಕ್ತ ಶಿಕ್ಷಣಕ್ರಮದ ಜಳ್ಳು ಬಯಲಾಗುತ್ತದೆ. ಮಕ್ಕಳ ಭವಿಷ್ಯ ಸುಗಮವಾಗುತ್ತದೆ. ದೇಶವು ಅಭಿವೃದ್ಧಿ ಹೊಂದುತ್ತದೆ.

ವರದಿ: ಆರ್. ಕೆ. ಸುಳ್ಯ

ಚಿತ್ರ: ಎಂ. ಜಿ. ಕಜೆ

'ಆದಾಯ ಮೂಲವೇ ... ಪುರಸಭೆಗಳ ಜೀವಾಳ'

ಹಾಸನ, ಜೂ. 9- ಪುರಸಭೆಗಳು ವ್ಯವಸ್ಥಿತವಾಗಿ ಕಾರ್ಯ ನಿರ್ವಹಿಸಬೇಕಾದರೆ ಅವುಗಳಿಗೆ ವ್ಯವಸ್ಥಿತವಾದ ಆದಾಯ ಮೂಲವಿರಬೇಕು. ಆಗ ಮಾತ್ರ ಸ್ಥಳೀಯ ಸಂಸ್ಥೆಗಳು ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲವು ಎಂದು ಲೋಕೋಪಯೋಗಿ ಸಚಿವ ಎಚ್. ಡಿ. ದೇವೇಗೌಡ ತಿಳಿಸಿದರು.

ಅವರು ಇತ್ತೀಚೆಗೆ ಹೊಳೆನರಸೀಪುರದಲ್ಲಿ ಪುರಸಭೆ ವತಿಯಿಂದ ನಿರ್ಮಿಸಲಾದ ನೂತನ ಮಳಿಗೆಗಳ ಉದ್ಘಾಟನೆ ನೆರವೇರಿಸಿ ಮಾತನಾಡುತ್ತಿದ್ದರು.

ಹೊಳೆನರಸೀಪುರವನ್ನೂ ಒಂದು ಸುಂದರ ನಗರವನ್ನಾಗಿ ಮಾಡಲು, ಇಲ್ಲಿಯ ಜನತೆಗೆ ಕನಿಷ್ಠ ನಾಗರಿಕ ಸೌಲಭ್ಯ ಸಿಗುವಂತೆ ಮಾಡಲು, ಎಲ್ಲಾ ಪ್ರಯತ್ನ ಮಾಡಲಾಗುವುದು. ಅಲ್ಲದೆ ಇಲ್ಲಿ 40 ಲಕ್ಷ ರೂ. ವೆಚ್ಚದಲ್ಲಿ ಒಂದು ಪುರಸಭೆ ಸಂಕೀರ್ಣವನ್ನು ನಿರ್ಮಿಸಲಾಗುವುದು ಹಾಗೂ ನಗರದ ಕುಡಿಯುವ ನೀರಿನ ಅಭಿವೃದ್ಧಿಗೆ ಪ್ರಸಕ್ತ ವರ್ಷ 18 ಲಕ್ಷ ರೂ. ನೀಡಲಾಗುವುದು ಎಂದು ಸಚಿವರು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಎ. ಮಧು ವಹಿಸಿದ್ದರು.

ಕಾರಂತರಯ... ತಂಡ ರಷ್ಯಾಕ್...

ಉಡುಪಿ, ಜೂ. 9- ಉಡುಪಿ ಎಂ. ಜಿ. ಎಂ. ಕಾಲೇಜಿನ ಅಧೀನದಲ್ಲಿರುವ ಯಕ್ಷಗಾನ ಕೇಂದ್ರದ ವ್ಯವಸಾಯೀಮೇಳ ಯಕ್ಷರಂಗ ಜುಲೈಯಿಂದ ಸೆಪ್ಟೆಂಬರದ ವರೆಗೆ ಸೋವಿಯತ್ ಯೂನಿಯನಿನ ವಿವಿಧ ಸ್ಥಳಗಳಲ್ಲಿ ನಡೆಯುವ ಭಾರತ ಉತ್ಸವದಲ್ಲಿ ಪಾಲ್ಗೊಳ್ಳಲು ಇದೀಗ ಅಣಿಯಾಗಿದೆ.

ಯಕ್ಷರಂಗವು ಡಾ। ಶಿವರಾಮ ಕಾರಂತರಿಂದ ಪರಿಷ್ಕರಿಸಲ್ಪಟ್ಟ ಯಕ್ಷಗಾನ ನೃತ್ಯನಾಟಕವನ್ನು ಪ್ರತಿನಿಧಿಸುತ್ತದೆ ಸಾಂಪ್ರದಾಯಿಕ ಯಕ್ಷಗಾನದ ಕಲಾತ್ಮಕ ಅಂಶಗಳನ್ನು ಕ್ರೋಢೀಕರಿಸಿ ನೃತ್ಯಸಂಗೀತ ಅಭಿನಯಗಳ ಸಮನ್ವಯವನ್ನು ಸಾಧಿಸುವ ನಿಟ್ಟಿನಲ್ಲಿ ಡಾ। ಕಾರಂತರು ವಿಶೇಷ ಯಶಸ್ಸನ್ನು ಗಳಿಸಿದ್ದಾರೆ.

ರಷ್ಯಾ ಪ್ರವಾಸ ಕೈಗೊಳ್ಳುವ ಪೂರ್ವಭಾವಿಯಾಗಿ ತಂಡದ ಗೌರವಾರ್ಥ ಏರ್ಪಡಿಸಿದ ಭೋಜನ ಕೂಟವೊಂದರಲ್ಲಿ ಕಾಲೇಜಿನ ಧರ್ಮದರ್ಶಿ ಮಂಡಳಿಯ ಅಧ್ಯಕ್ಷ ಕೆ. ಕೆ. ಪೈಯವರು ಡಾ। ಕಾರಂತರು ಯಕ್ಷಗಾನದ ಪುನರುಜ್ಜೀವನಕ್ಕಾಗಿ ಮಾಡಿದ ಪ್ರಯತ್ನಗಳನ್ನು ಪ್ರಸ್ತಾಪಿಸಿ ರಷ್ಯಾದ ಪ್ರವಾಸವು ಯಶಸ್ವಿಯಾಗಲೆಂದು ಹಾರೈಸಿದರು. ಡಾ। ಕಾರಂತ ಅವರು ಮಾಡಿದ ವಿದೇಶ ಪ್ರವಾಸದ ಬಳಿಕ ಅವರ ಲೇಖನಗಳ ಮೂಲಕ ಉಳಿದವರ ಅನುಭವವೂ ವಿಸ್ತಾರವಾಗುವುದೆಂದು ಪೈ ಹೇಳಿದರು.

ಡಾ। ಕಾರಂತರು ಉತ್ತರಿಸುತ್ತ ಯಕ್ಷಗಾನವನ್ನು ದಿಗ್ವಿಜಯಕ್ಕಾಗಿ ಕೊಂಡೊಯ್ಯುತ್ತಿಲ್ಲವೆಂದೂ ವಿವಿಧ ದೇಶಗಳಲ್ಲಿ ಉನ್ನತ ಕಲೆಗಳೂ, ಪೂರ್ತಿ ಜೀವನವನ್ನೇ ಕಲಾಭ್ಯಾಸಕ್ಕೆ ಮುಡುಪಾಗಿಟ್ಟ ಕಲಾಗಾರರೂ ಇದ್ದಾರೆಂದು ಹೇಳಿದರಲ್ಲದೆ ಅಪರಿಚಿತ ಯಕ್ಷಗಾನವನ್ನು ಕಲೆಯಾಗಿ ವಿದೇಶಗಳಲ್ಲಿ ಮೆಚ್ಚುವುದು ಸಾಧ್ಯ ಎಂದರು.

ಈ ಮೊದಲು ಕಾಲೇಜಿನ ಪ್ರಿನ್ಸಿಪಾಲ

ಕೆರೆಗೆ ಬಿದ್ದು ಯುವಕನ ಸಾವು

ಕೋಟ, ಜೂ. 9-ಕೋಟದವರ್ಲಿನ ವರುಣ ತೀರ್ಥ ಕೆರೆಯಲ್ಲಿ ಇತ್ತೀಚೆಗೆ ನಾರಾಯಣ (23 ವರ್ಷ) ಎಂಬವರು ಬಿದ್ದು ಮರಣ ಹೊಂದಿದ ಬಗ್ಗೆ ವರದಿಯಾಗಿದೆ.

ತೀವ್ರ ಫಿಡ್ಸ್ ಕಾಯಿಲೆಯಿಂದಬಳಲುತ್ತಿದ್ದ ನಾರಾಯಣಕೆರೆಯಲ್ಲಿಸ್ನಾನ ಮಾಡುವಾಗ ಫಿಡ್ಸ್ ಬಂದಿದುದರಿಂದ ಮುಳುಗಿ ಮರಣ ಹೊಂದಿರಬೇಕೆಂದುಶಂಕಿಸಲಾಗಿದೆ.

ಸಾಮಾಜಿಕ ಕಾರ್ಯಕರ್ತ ನಾರಾಯಣ ಅವರ ನಿಧನದ ಬಗ್ಗೆ ಕೋಟದ ನಾಗರಿಕರ ಪರವಾಗಿ ಅನಂತ ಪದ್ಮನಾಭಐತಾಳ್ ...ೋಟ ಕಾಂಗ್ರೆಸ್ ನಾಯಕ ಕೆ. ಪ್ರಭಾಕರ, ...ಟ ಯುವಕ ಮಂಡಲದ ಜಿ. ಎಸ್. ...ಶಯ್ಯ ಮುಂತಾದವರು ತೀವ್ರ ...ಖ ವ್ಯಕ್ತಪಡಿಸಿದ್ದಾರೆ.

...ವರ ನಿಧನದ ಸುದ್ದಿ ... ಬಂದ ಕೋಟ ...ರ್ ಕೃಷ್ಣಪ್ಪ ...ಎಸ್. ಹೊಳ್ಳ ...ಜರು ನಡೆಸಿ

ಸರ್ಕಾರದ ಆಜ್ಞೆಗೆ ಜಿ. ಪ. ಸ್ಥಾಯಿ ಸಮಿತಿ ವಿರೋಧ

ಮಂಗಳೂರು, ಜೂ. 9-ಜಿಲ್ಲಾ ಖಜಾನೆಯಲ್ಲಿ ಜಿಲ್ಲಾ ಪರಿಷತ್ತಿನ ಖಾತೆಯಲ್ಲಿರುವ ಹಣವನ್ನು ತಡೆಹಿಡಿಯುವಂತೆ ಕರ್ನಾಟಕ ಸರಕಾರ ಆಜ್ಞೆ ಹೊರಡಿಸಿರುವುದನ್ನು ದಕ್ಷಿಣಕನ್ನಡ ಜಿಲ್ಲಾ ಪರಿಷತ್‌ನ ಸ್ಥಾಯೀ ಸಮಿತಿಯ ಸಭಾಪತಿಗಳ ಸಮನ್ವಯ ಸಮಿತಿ ತೀವ್ರವಾಗಿ ಪ್ರತಿಭಟಿಸಿದೆ.

ಜಿಲ್ಲಾಪರಿಷತ್‌ನ ಸ್ಥಾಯೀಸಮಿತಿಯ ಸಭಾಪತಿಗಳ ಸಮನ್ವಯ ಸಮಿತಿಯ ಸಭೆ ನಿನ್ನೆ ಜರುಗಿತು. ಜಿಲ್ಲಾ ಖಜಾನೆಯಲ್ಲಿ ಜಿಲ್ಲಾ ಪರಿಷತ್ತಿನ ಖಾತೆಯಲ್ಲಿರುವ ಹಣವನ್ನು ತಡೆ ಹಿಡಿಯುವ ಸರಕಾರದ ಆಜ್ಞೆಯನ್ನು ಸಭೆಯಲ್ಲಿ ಖಂಡಿಸಲಾಯಿತು.

ದಕ್ಷಿಣಕನ್ನಡ ಜಿಲ್ಲೆಯಲ್ಲಿ ಈವರೆಗೆ ನಡೆದ ಕಾಮಗಾರಿಗಳ ಬಾಬ್ತು ಸಲ್ಲಿಸಲಿ... ಬಾಕಿ ಇರುವ ಬಿಲ್ಲುಗಳನ್ನು ತ... ದಿರುವುದರಿಂದ ಉಂಟಾಗಬಹ... ಕಷ್ಟನಷ್ಟಗಳಿಗೆ ಸರ್ಕಾರವೇ ಸಂಪ... ಜವಾಬ್ದಾರಿಯೆಂದು ಸಮಿತಿ ತೀವ... ಸಿದೆ.

ನಂತರ ಖಜಾನೆಯಲ್ಲಿರುವ ಜಿಲ್ಲಾ ಪರಿಷತ್ತಿನ ಬಾಬ್ತು ಹಣವನ್ನು ತಡೆಹಿಡಿಯಲು ಸರ್ಕಾರಕ್ಕೆ ಏನೊಂದೂ ಹಕ್ಕು ಇರುವುದಿಲ್ಲ. ಆದುದರಿಂದ ಕಾನೂನು ಬಾಹಿರವಾದ ಈ ಆಜ್ಞೆಯನ್ನು ಕೂಡಲೇ ಹಿಂತೆಗೆದುಕೊಂಡು ಜಿಲ್ಲಾ ಪರಿಷತ್ತಿನ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ಜರಗಿಸುವಂತೆ ಸಹಕರಿಸಬೇಕಾಗಿ ಸರಕಾರವನ್ನು ಸಮಿತಿ ಕೇಳಿಕೊಂಡಿದೆ.

ಪೆರಮನ್ನೂರು ಮಂಡಲ ಪ್ರಥಮ ಸಭೆ

... ಜೂ. 9- ಪೆರಮ... ...ು ಮಂಡಲ ಪಂಚಾಯತ್ ಪ್ರಥಮ ...ು ಇತ್ತೀಚೆಗೆ ಮಂಡಲ ಪ್ರಧಾನ ...ಬಲ ಶೆಟ್ಟಿಯ ಅಧ್ಯಕ್ಷತೆಯಲ್ಲಿ ನಡೆ... ...ು. ... ...ದಸ್,

ದರ ಏರಿಕೆಗೆ ಲೀಗ್ ಖಂಡನೆ

ಜೋಕಟ್ಟೆ, ಜೂ. 9-ರಾಜ್ಯ ಸರಕಾರ ಇತ್ತೀಚೆಗೆ ವಿದ್ಯುತ್ ದರ, ಹಾಲಿನ ದರ ಮುಂತಾದವುಗಳನ ಏರಿಸಿರುವುದನ್ನು ಜೋಕಟ್ಟೆ ಮುಸ್ಲಿಂ ಯೂತ್ ಲೀಗ್ ತೀವ್ರವಾಗಿ ಖಂಡಿಸಿದೆ.

ಜನ ಸಾಮಾನ್ಯರ ಆಶಯಾಲಿಗೆ ಸ್ಪಂದಿಸಬೇಕಾಗಿದ್ದ ಜನತಾ ಸರಕಾರ ತನ್ನ ಮೌಲ್ಯಾಧಾರಿತ ತತ್ವವನ್ನು ಮರೆತು ಭ್ರಷ್ಟಾಚಾರ, ಲಂಚಗುಳಿತನದಲ್ಲಿ ಕಾಂಗ್ರೆಸ್‌ಗಿಂತ ಕಡಿಮೆಯಿಲ್ಲ ಎಂದು ಪ್ರಾದರ್ಶಿಸ ಹೊರಟಂತಿವೆ ಎಂದು ಲೀಗ್ ತನ್ನ ಹೇಳಿಕೆಯಲ್ಲಿ ಟೀಕಿಸಿದೆ.



‘ಅಲ್ಲಾ ನೀಡಿದ ವಿಚಿತ್ರ ಪವಾಡ’ - ನಜೀರ್ ಸಾಬ್

"1984ರ ಜನವರಿಯಲ್ಲಿ ನಾನು ಕೇರಳ ಕೇಳಲು ಸಾಬ್ ಅವರ ಮನೆಗೆ ಹೋಗಿದ್ದಾಗ, ಇನ್ನೊಬ್ಬ ಪತ್ರಕರ್ತ ಮಿತ್ರನೊಂದಿಗೆ ಅವರು ಆತ್ಮೀಯ ಸಂಭಾಷಣೆಯಲ್ಲಿ ತೊಡಗಿದ್ದರು. ನಾನು ಮಂಗಳೂರಿನಲ್ಲಿ 'ಮುಂಗಾರು' ಆರಂಭಕ್ಕೆ ಸಿದ್ಧತೆ ನಡೆಸಿದ್ದು ಅವರಿಗೆ ಗೊತ್ತಿತ್ತು. 'ಏನು ಶೆಟ್ಟರೇ, ನೀವು ಬೆಂಗಳೂರು ಬಿಟ್ಟು ಮಂಗಳೂರಿಗೆ ಹೋಗ್ತಿದ್ದೀರಲ್ಲ' ಎಂದು ಬೇಸರದ ದನಿಯಲ್ಲಿ ಪ್ರಶ್ನಿಸಿದರು. ಉತ್ತರವಾಗಿ ನನ್ನ ಯೋಜನೆಯ ವಿವರ ನೀಡಿದಾಗ ಮುಗುಳ್ನಕ್ಕರು. ಓದುಗರ ಒಡೆತನದ ಪತ್ರಿಕೆಯಲ್ಲಿ ಪಾಲ್ಗೊಳ್ಳುವ ಆಸೆ ತೋರಿಸಿದರು. ಆದರೆ ಆಸಾಮಿ ಪತ್ರಿಕೆ ನನ್ನ ಕಂಪೆನಿಯ ಒಂದು ಸಾವಿರ ರೂಪಾಯಿ ಮೌಲ್ಯದ ಒಂದು ಷೇರು ಪಡೆಯಲು ಹಣವಿರಲಿಲ್ಲ. ಒಂದು ತಿಂಗಳ ಮುಂದಿನ ತಾರೀಕಿನ ಚೆಕ್ ಬರೆದುಕೊಟ್ಟು ಒಂದು ಶೇರು ಪಡೆದರು."

ಮುಂಗಾರುವಿನ ಆರಂಭದ ದಿನಗಳಲ್ಲಿ ನಮ್ಮ ಸಂಪಾದಕರು ತಮ್ಮ 'ನಮ್ಮವರು' ಅಂಕಣದಲ್ಲಿ ನಜೀರ್ ಸಾಬ್ ಅವರ ವ್ಯಕ್ತಿ ಚಿತ್ರ ಬಿಡಿಸುತ್ತ ಈ ಘಟನೆಯನ್ನು ಉಲ್ಲೇಖಿಸಿದ್ದರು.

ಜನರ ನಿಲುವಿನ ಪತ್ರಿಕೆಯೊಂದರ 'ಒಡೆಯ'ನಾಗುವ ಬಯಕೆ ಮತ್ತು ಸಚಿವನಾಗಿದ್ದರೂ ತನ್ನ ಬಳಿ ಒಂದು ಸಾವಿರ ರೂಪಾಯಿ ಹೊಂದಿಸಿಕೊಳ್ಳಲಾಗದ 'ದರಿದ್ರ'-ಸಾಮಾನ್ಯ ರಾಜಕಾರಣಿಗೆ ವ್ಯತಿರಿಕ್ತವಾದ ಈ ಲಕ್ಷಣಗಳು ನಜೀರ್ ಸಾಬ್ ಅವರನ್ನು ನಾನು ತಿರುಗಿ



ತಮ್ಮ ವೈಯಕ್ತಿಕ ವೈಚಾರಿಕ ಸಿದ್ಧಾಂತವನ್ನು ತಾನಿದ್ದ ಪಕ್ಷದೊಂದಿಗೆ ಥಳಕು ಹಾಕಿದವರು ನಜೀರ್ ಸಾಬ್ ಅವರಲ್ಲ. ವೈಚಾರಿಕ ಭಿನ್ನಾಭಿಪ್ರಾಯಗಳನ್ನು ಮರೆತು ಅವರು ಸ್ನೇಹದ ಹಸ್ತಚಾಚುತ್ತಿದ್ದರು. ಸಮಾಜವಾದಿಗಳಲ್ಲಿ ತುಂಬಾ ಅಪರೂಪದ ಈ ಗುಣವೇ ಅವರನ್ನು ಸರ್ವಜನಪ್ರಿಯರನ್ನಾಗಿಸಿತ್ತು.

ನೋಡುವಂತೆ ಮಾಡಿತ್ತು.

ಆಗಲೇ ನಜೀರ್ ಸಾಬ್ ಸುದ್ದಿಯಲ್ಲಿದ್ದರು.

ಅಂದು 38ನೇ ಸ್ವಾತಂತ್ರ್ಯೋತ್ಸವದ ದಿನ. ಮಹಾತ್ಮ ಗಾಂಧೀಜಿ ಎಲ್ಲರ ಮಾತಿನಲ್ಲಿ ಜೀವಂತವಾದ ದಿನ. ಗಾಂಧೀ ವಿಚಾರಧಾರೆ, ದೇಶದ ಮೂಲೆ ಮೂಲೆಗಳಲ್ಲಿ ಬೀಸಾಬಿಟ್ಟು ಹರಿಯುತ್ತಿದ್ದ ದಿನ. ಈ ರಂಜನೆಯನ್ನು ವಿಷಾದದಿಂದ ವೀಕ್ಷಿಸುತ್ತಿದ್ದ ವಿಚಾರಶೀಲ ಭಾರತೀಯರಲ್ಲಿ ಅಂದು ಮೂಡಿರಬಹುದಾದ ಪ್ರಶ್ನೆ- 'ಗಾಂಧಿ ಕನಸಿನ ಗ್ರಾಮರಾಜ್ಯ ಈ ನೆಲದಲ್ಲಿ ಎಂದಾದರೂ ನನಸಾಗಲು ಸಾಧ್ಯವೇ?' ಎಂಬುದು.

ಅದೇ ದಿನ ಮಂಗಳೂರಿನ ಸರ್ಕಿಟ್ ಹೌಸಿನಲ್ಲಿ ಕುಳಿತಿದ್ದ ವ್ಯಕ್ತಿಯೊಬ್ಬರು ತುಳುಕುವ ಆತ್ಮವಿಶ್ವಾಸದೊಂದಿಗೆ ತಮ್ಮಗೆ ಉತ್ತರಿಸಿದ್ದರು- 'ಖಂಡಿತ ಸಾಧ್ಯ, ಕನಿಷ್ಠ ಕರ್ನಾಟಕ ಮಟ್ಟದಲ್ಲಿಯಾದರೂ'

ಈ ಭವಿಷ್ಯವನ್ನು ನಂಬಲೇಬೇಕಿತ್ತು. ಯಾಕೆಂದರೆ ಹಾಗೆಂದು ನುಡಿದ ವ್ಯಕ್ತಿ ಅಬ್ದುಲ್ ನಜೀರ್ ಸಾಬ್. ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವ.

ಅಂದು ಸಚಿವ ನಜೀರ್ ಸಾಬ್ ಅವರನ್ನು ಭೇಟಿಯಾಗಿದ್ದೆ. ನಿಜ ಅರ್ಥದಲ್ಲಿಯೇ ಸಂದರ್ಶನಕ್ಕೆ "ಪಡಿ" ಅಂದು ಅಭ್ಯಾಸ ಮಾಡಿದ ಅವರಲ್ಲಿ ರಾಜಕಾರಣಿಗಳ ಕಠಿಣ ಧೋರಣೆ ಇರಲಿಲ್ಲ. ಮಣ್ಣಿನ ಮಗನ "ಬಂಗಾರದ" ನಡವಳಿಕೆ ಇತ್ತು.

ನಿಜಕ್ಕೂ ನನಗೆ ಮೋಜೆನಿಸಿತ್ತು. ಜಿಲ್ಲಾ ಪರಿಷತ್ ವಿಧೇಯಕದ ಬಗ್ಗೆ ಅವರು ವ್ಯಕ್ತಪಡಿಸುತ್ತಿದ್ದ ಮಮತೆ ಅಂತಹದು. ಅದರ ವಿಶ್ಲೇಷಣೆಯಲ್ಲಿ ಭಾವುಕರಾಗುತ್ತಿದ್ದ ಸಾಬರು, ಅದರ ಬಗ್ಗೆ ಸಣ್ಣ ಟೀಕೆಗಳಿಗೆ ಹುಬ್ಬುಗಂಟಿಕ್ಕಿ ಉರಿದು ಬೀಳುತ್ತಿದ್ದರು. ಜಿಲ್ಲಾ ಪರಿಷತ್ ವ್ಯವಸ್ಥೆಯ ಅನುಷ್ಠಾನಕ್ಕಾಗಿಯೇ ಅವರು ಹುಟ್ಟಿ ಬಂದವರಂತೆ ನನಗೆ ಕಂಡಿದ್ದರು.

ಕೊನೆಗೆ ನನ್ನ ಅನಿಸಿಕೆಯೇ ನಿಜವಾಯಿತು. ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳು ಅನುಷ್ಠಾನಕ್ಕೆ ಬಂದ ನಂತರ ತಮ್ಮ ಕೆಲಸ ಮುಗಿಯಿತೆಂದು ಕೊಂಡು ನಿಧಾನವಾಗಿ ಮರೆಯಾಗ ತೊಡಗಿದ ನಜೀರ್ ಸಾಬ್ ಕೊನೆಗೂ ನಮ್ಮನ್ನಗಲಿ ಶಾಶ್ವತವಾಗಿ ಮರೆಯಾದರು.

ನಾನು ಅವರನ್ನು ಭೇಟಿಯಾದ ದಿನ ಸುಮಾರು ಒಂದು ಗಂಟೆ ಕಾಲ ಅವರ ಜತೆ ಕಳೆದೆ. ಆ ದಿನ ಟಿಪ್ಪಣಿಗಳನ್ನು ಬಿಚ್ಚಿದಾಗ ನಜೀರ್ ಸಾಬ್ ಮತ್ತೆ ತನ್ನ ಪೂರ್ಣ ಸ್ವರೂಪದೊಂದಿಗೆ ಕಣ್ಣೆದುರು ಅನಾವರಣಗೊಳ್ಳುತ್ತಾರೆ.

ಆತ್ಮೀಕ ನೋಡ ಬೇಕಾದ ಎತ್ತರದ ನಿಲುವು. ಮಂದ್ರ ಮುಗ್ಧಗೊಳಿಸಬಲ್ಲ ಕಂಚಿನ ಕಂಠ, ಹೊಳೆಯುವ ಕಣ್ಣುಗಳು ದಟಬಟ್ಟೆ, ಬಲಗೈಯಲ್ಲಿ ಕುಣಿಯುವ ಸಿಗರೇಟ್, ಮಾತಿನಲ್ಲಿ ಆರೋಹ-ಅವರೋಹ. ಎಲ್ಲಿ ಸಾಫ್-ಸೀದಾ ಭೇಟಿಯಾದವರ ಮನದಲ್ಲಿ ಶಾಶ್ವತವಾಗಿ ಅಂಟಿ ನಿಲ್ಲುವ ಭಾವ.

ನಜೀರ್ ಸಾಬ್ ಅವರದು ತೀರಾ ಸಂಕೀರ್ಣ ವ್ಯಕ್ತಿತ್ವ. ಅವರ ಆಳವಾದ ಅಧ್ಯಯನ, ವ್ಯಾಪಕ ಅನುಭವ, ಹಳ್ಳಿ ಬದುಕಿನ ಬಗ್ಗೆಗಿನ ವಿವರವಾದ ತಿಳುವಳಿಕೆ ನನ್ನನ್ನು ಬೆರಗುಗೊಳಿಸಿದರೆ, ಅವರ ಹಲವಾರು ವಿರೋಧಿ ಭಾಸಗಳ ನಡವಳಿಕೆ ರಾಜೀಮನೋಭಾವ. ಸ್ನೇಹ-ಸಿಟ್ಟಿಗೆ ಕೆರಳುವ ನಡೆ ಹುಟ್ಟಿಸುವಂತೆ ಮಾಡುತ್ತಿತ್ತು. ಆದರೂ ಅವರ ವ್ಯವಹಾರಿಕ ಸ್ವಭಾವಿಕವಾಗಿತ್ತು.

ತಮ್ಮ ವೈಯಕ್ತಿಕ ವೈಚಾರಿಕ ಸಿದ್ಧಾಂತವನ್ನು ತಾನಿದ್ದ ಪಕ್ಷದೊಂದಿಗೆ ಥಳಕು ಹಾಕಿದವರು ನಜೀರ್ ಸಾಬ್ ಅವರಲ್ಲ, ವೈಚಾರಿಕ ಭಿನ್ನಾಭಿಪ್ರಾಯವನ್ನು ಮರೆತು ಅವರು ಸ್ನೇಹದ ಹಸ್ತ ಚಾಚುತ್ತಿದ್ದರು. ಸಮಾಜವಾದಿಗಳಲ್ಲಿ ತುಂಬಾ ಅಪರೂಪವಾದ ಈ ಸ್ವಭಾವವೇ ಅವರನ್ನು ಸರ್ವಜನಪ್ರಿಯರನ್ನಾಗಿಸಿತು. ಜತೆಗೆ ಕೇವಲ ತಾನು ಕನಸುಗಾರನಾಗಿಯೇ ಉಳಿಯದೆ ಕನಸನ್ನು ನನಸು ಮಾಡಲು ಅವರಿಗೆ ಸಾಧ್ಯವಾಯಿತು.

1983ರಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬರುವವರೆಗೆ ಅಜ್ಞಾತರಾಗಿಯೇ ಉಳಿದಿದ್ದ ನಜೀರ್ ಸಾಬ್ ಆ ನಂತರದ ದಿನಗಳಲ್ಲಿ ಪ್ರಚಾರದ ಬೆಳಕಿಗೆ ಬಂದವರು. ಅವರ ಸಮಗ್ರ ವ್ಯಕ್ತಿತ್ವದ ವಿಶ್ಲೇಷಣೆಯು ಮೊದಲು ಅವರು ಬದುಕಿನ ಅಜ್ಞಾತದಿನಗಳ ಮೇಲೆ ಕಣ್ಣು ಹಾಯಿಸುವುದು ಅರ್ಥಪೂರ್ಣವೆನಿಸಬಹುದು.

ತಮಿಳುನಾಡಿನ ಕೊಯಮುತ್ತೂರಿನಲ್ಲಿ ಹುಟ್ಟಿ ಕಮ್ಯೂನಿಸ್ಟ್ ಸಿದ್ಧಾಂತದ ಬಗ್ಗೆ ಒಲವನ್ನಿಟ್ಟುಕೊಂಡು ಬೆಳೆದ ನಜೀರ್ ಕ್ರಮೇಣ ಮಹಾತ್ಮ ಗಾಂಧೀಜಿಯವರ ಆರ್ಥಿಕ ಸೂತ್ರಕ್ಕೆ ಮಾರುಹೋದವರು.

ಆಗಲೇ ಅವರು ಮೈಸೂರು ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ಮಣ್ಣಿನ ಮಗನಾಗಿ ಬೇರು ಬಿಡತೊಡಗಿದ್ದರು. ಅದೇ ದಿನಗಳಲ್ಲಿ ಡಾ। ರಾಮ ಮನೋಹರ ಲೋಹಿಯಾ ಅವರ ಸಮಾಜವಾದಿ ಚಿಂತನೆಯಿಂದ ಪ್ರಭಾವಿತರಾದ ಯುವಕ ರೈತ ನಜೀರ್ ಸಾಬ್ ಕೃಷಿಯೊಂದಿಗೆ ಮೈಸೂರು ಜಿಲ್ಲೆಯಲ್ಲಿ ಸಮಾಜವಾದಿ ಚಳವಳಿಯ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು.

ಗುಂಡ್ಲುಪೇಟೆಯಲ್ಲಿ ಕೆ.ಎಸ್. ನಾಗರತ್ನಮ್ಮನವರ ನೆರಳು ಬಿಡಿಸಿಕೊಂಡೇ ರಾಜಕೀಯ ಜೀವನ ಪ್ರಾರಂಭಿಸಿದ ಸಮಾಜವಾದಿ ಯುವಕ ನಜೀರ್ ಸಾಬ್ 1969ರಲ್ಲಿ ಕಾಂಗ್ರೆಸ್ ಪಕ್ಷವನ್ನು ಸೇರಿ ಹಲವರ ಅಚ್ಚರಿಗೆ ಕಾರಣರಾದರು.

"ಹೇಳಿ ಸಮಾಜವಾದ ಎಲ್ಲಿದೆ ? ನಿಮಗೆ ಗೊತ್ತು ಸಮಾಜವಾದಿಗಳು ಹಾಕಿಕೊಂಡಿದ್ದ 14 ಅಂಶದ ಕಾರ್ಯಕ್ರಮವನ್ನು ಜಾರಿಗೆ ತಂದವರು ಕಾಂಗ್ರೆಸಿನವರು. ಬ್ಯಾಂಕ್ ರಾಷ್ಟ್ರೀಕರಣ, ವಿಮಾನಗಳ ರಾಷ್ಟ್ರೀಕರಣ, ಭೂಸುಧಾರಣೆ... ಮೊದಲಾದ ಕಾರ್ಯಕ್ರಮಗಳನ್ನು ಜಾರಿಗೆ ತಂದವರು ಯಾರು ?" ನಜೀರ್ ಕೆಲವು ಕಾಲದ ನಂತರ ತಮ್ಮ ಅಂದಿನ ನಿಲುವನ್ನು ಸಮರ್ಥಿಸಿಕೊಂಡಿದ್ದರು.

1972ರಲ್ಲಿ ಕರ್ನಾಟಕದಲ್ಲಿ ದೇವರಾಜ ಅರಸು ಅಧಿಕಾರಕ್ಕೆ ಬಂದಾಗ ನಜೀರ್ ಸಾಬ್ ತಮ್ಮನ್ನು ಪೂರ್ಣವಾಗಿ ಕಾಂಗ್ರೆಸಿಗೆ ಅರ್ಪಿಸಿಕೊಂಡರು. ಅರಸು ಇವರನ್ನು ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆ ಮಾಡಿದರು. ತನ್ನ ತರ್ಕಬದ್ಧ ಪಾಂಡಿತ್ಯ ವೈಚಾರಿಕ ಚಿಂತನೆಗಳಿಂದ ಸದನದಲ್ಲಿ ಎಲ್ಲರ ಗಮನಸೆಳೆದ ನಜೀರ್ ಅವರಿಗೆ ಆ ದಿನಗಳಲ್ಲಿ ಸವಾಲೆಸೆಯ ಬಲ್ಲ ಜವಾಬ್ದಾರಿ ಒದಗಿಬರಲಿಲ್ಲ. ತುರ್ತುಪರಿಸ್ಥಿತಿಯ ದಿನಗಳಲ್ಲಿ ನಜೀರ್ ತೆಪ್ಪಗೆ ಕಾಂಗ್ರೆಸ್ಸನ್ನು ಸಮರ್ಥಿಸಿಕೊಂಡದ್ದು ಅವರ ನಡವಳಿಕೆಯ ಮತ್ತೊಂದು ವಿರೋಧಾಭಾಸ.

1979ರಲ್ಲಿ ಅರಸು-ಇಂದಿರಾ ಭಿನ್ನ ಸ್ಫೋಟವಾದಾಗ ನಜೀರ್ ಸಾಬ್ ಇಂದಿರಾ ಪಾಳಯದ ಚಿಮ್ಮುಹಕ್ಕಿ ಪುತ್ರೊಪ್ಪ ದಲಿತರ ಸಂಶಯದ ದೃಷ್ಟಿಗೆ ಈಡಾದವರು. 1980ರಲ್ಲಿ ಗುಂಡೂರಾಯರು ಅಧ್ಯಕ್ಷರಾಗಿ ಬಂದಾಗ ಬಂಗಾರಪ್ಪನವರಿಗೆ ನಿಷ್ಠನಾದ ನಜೀರ್ ಸಾಬ್ ಆ ತಪ್ಪಿಗಾಗಿಯೇ ವಿಧಾನ ಪರಿಷತ್ ಚುನಾವಣೆಯಲ್ಲಿ ಟಿಕೆಟ್ ಕಳೆದುಕೊಳ್ಳಬೇಕಾಯಿತು.

ಮೇಲ್ಮನೆಯಿಂದ ನಿವೃತ್ತರಾಗುವ ದಿನ ನಜೀರ್ ಸಾಬ್ ಸದನದಲ್ಲಿ "ಸಾಧಾರಣವಾಗಿ ಒಂದು ಸಾಧಾರಣವಾಗಿಯೇ ಈ ಸದನದಿಂದ ನಿವೃತ್ತಿ ಹೊಂದುತ್ತಿರುವುದೆಂದು ನನ್ನ ಆತ್ಮಸಾಕ್ಷಿಗೆ ಅತ್ಯಂತ ತೃಪ್ತಿ ಕೊಡುವ ವಿಚಾರ. ಅದರೆ ಸಭಾಧ್ಯಕ್ಷರೇ, ನನ್ನ ಸದಸ್ಯತ್ವ ತೀರುವ ವೇಳೆಗೆ ಈ ಸದನ ನನ್ನ ಬಿಂದಿಟ್ಟು ದೇಶದಾಂದವರ ಮುಖವಾಣಿಯಾಗುತ್ತದೆ ಎಂದು ಕನಸಿದ್ದ ಹಾಗಾಗಲಿಲ್ಲವೆಂದು ವಿಷಾದದಿಂದ ನಿರ್ಗಮಿಸಬೇಕಾಗಿದೆ ..." ಎಂದು ಹೇಳಿ ಸದನವನ್ನು ಚಕಿತಗೊಳಿಸಿದ್ದರು.

ನಿವೃತ್ತಿಯಾದ ದಿನ ಊರಿಗೆ ವಾಪಾಸಾಗಲು ಜೇಬಲ್ಲಿ ಬರೀ 48 ರೂಪಾಯಿ ಇದ್ದರೂ, ಪುಸ್ತಕದ ಅಂಗಡಿಗೆ ಹೋಗಿ ಪಾಬ್ಲೊ ನೆರೂಡನ 'ಸ್ಮೃತಿಗಳು' ಎಂಬ ಹೊಸ ಪುಸ್ತಕ ಖರೀದಿಸಿ ಓದುತ್ತಾ ಕುಳಿತಿದ್ದರಂತೆ.

ಕಾಂಗ್ರೆಸ್ಸಿನಲ್ಲಿ ನೆಲೆ ತಪ್ಪಿದಾಗ ಕೈಕಟ್ಟಿ ಕೂಡದೆಯೊಪ್ಪದ ನಜೀರ್ ಸಾಬ್ ಮತ್ತೆ ತಮ್ಮ ಹಳೆಯ ನಾಯಕರಾದ ದೇವರಾಜ ಅರಸು ಅವರ ಬಳಿಹೋಗಿ ಕ್ರಾಂತಿರಂಗ ಸೇರಿದರು. ಮುಂದೆ ಬಂಗಾರಪ್ಪ ನಜೀರ್ ಅವರ ಪ್ರಶ್ನಾತೀತ ನಾಯಕರಾಗಿದರು.

1983ರಲ್ಲಿ ಜನತಾ ಸರಕಾರ ಅಧಿಕಾರಕ್ಕೆ ಬಂದಾಗ ಉದ್ಭವಿಸಿದ ನಾಯಕತ್ವದ ವಿವಾದದ ಸಂದರ್ಭದಲ್ಲಿ ನಜೀರ್ ಹೆಗಡೆ ಪರ ನಿಂತರು, ಮಂತ್ರಿ ಮಂಡಲ ರಚನೆ ಸಂದರ್ಭದಲ್ಲಿ ಅಧಿಕಾರಕ್ಕಾಗಿ ನಡೆಯುತ್ತಿದ್ದ ಕಚ್ಚಾಟದಿಂದ ಜಿಗುಪ್ಸೆಗೊಂಡು ಗುಂಡ್ಲುಪೇಟೆಗೆ ಹಿಂದಿರುಗುವ ನಿರ್ಣಯ ಮಾಡಿದ್ದ ನಜೀರ್ ಸಾಬ್, ಕೊನೆಗೆ ಯಾರಿಗೂ ಬೇಡವಾದ ಗ್ರಾಮೀಣಾಭಿವೃದ್ಧಿ ಖಾತೆಯನ್ನು ಕೇಳಿ ಪಡೆದರು. ಇದನ್ನು ಕೆಲವು ಹಲವಾರು ಮಂದಿ ಸಾಬರ ಹುಚ್ಚುತನಕ್ಕೆ ಗೇಲಿ ಮಾಡಿದ್ದರು.

ಭ್ರಷ್ಟಾಚಾರ ಸ್ವಜನ ಪಕ್ಷಪಾತ ಜಾತೀಯತೆ ಗುಂಪುಗಾರಿಕೆಗಳಿಂದಾಗಿ ಜನತಾ ಪಕ್ಷದ ಮಾನ ಹರಾಜಾಗುತ್ತಿದ್ದಾಗ ನಜೀರ್ ಕೊಳವೆ ಬಾವಿ, ಒಣಭೂಮಿ ಬೇಸಾಯ ಭೂಸೇನೆ ಅಧಿಕಾರ ವಿಕೇಂದ್ರೀಕರಣ ಕಾರ್ಯಕ್ರಮಗಳ ಮೂಲಕ ಪಕ್ಷದ ಮಾನ ಕಾಪಾಡಲು ಹೋರಾಡುತ್ತಿದ್ದರು. ಈಗ ಮಾನ ರಕ್ಷಕ ಮರೆಯಾಗಿದ್ದಾರೆ. ಮುಂದೇನು?

ಅಧಿಕಾರದ ಬೆನ್ನು ಹತ್ತಿದವರೆಲ್ಲ ದ್ವೇಷಿಸುವ ಈ ಬರಡು ಖಾತೆಗೆ ನಜೀರ್ ಸಾಬ್ ಮಾನ ತಂದುಕೊಟ್ಟರು. ಇದೆ ಖಾತೆ ಮೊದಲು ಕಾಂಗ್ರೆಸ್ ಆಳ್ವಿಕೆಯ ಕಾಲದಲ್ಲಿ ಮಲ್ಲಿಕಾರ್ಜುನ ಖರ್ಗೆ, ಬೇಗಾನೆ ರಾಮಯ್ಯ ಮುಂತಾದವರು ರಾಜ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾಗಿದ್ದರು. ಆ ಖಾತೆಗಳನ್ನು ಕೀಳರಿಮೆಯಿಂದಲೇ ತೆಗೆದುಕೊಂಡಿದ್ದ ಅವರೆಲ್ಲ ಗ್ರಾಮಗಳತ್ತ ತಿರುಗಿ ನೋಡದೆ ಅಧಿಕಾರಾವಧಿ ಮುಗಿಸಿದ್ದರು.

ಆದರೆ ನಜೀರ್ ಸಾಬ್ ಅವರ ಸಂಕಲ್ಪ ದೃಢವಾಗಿತ್ತು. ಅವರ ಕಣ್ಣುಗಳಲ್ಲಿ ಗಾಂಧಿ ಕನಸಿನ ಗ್ರಾಮ ರಾಜ್ಯದ ಕನಸಿತ್ತು. ಅಂದಿನಿಂದಲೇ ಆ ಕನಸನ್ನು ನನಸು ಮಾಡುವ ತಯಾರಿಗೆ ತೊಡಗಿದರು.

ಹಳ್ಳಿ ಬದುಕಿನ ನೇರ ಅನುಭವವಿದ್ದ ನಜೀರ್ ಸಾಬ್, ಹಳ್ಳಿಗಳ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಮೊದಲ ಆದ್ಯತೆ ನೀಡಿದರು. ಅಂದಿನಿಂದಲೇ ಸಮರೋಪಾದಿಯಲ್ಲಿ ಯೋಜನೆಯ ಅನುಷ್ಠಾನ ಪ್ರಾರಂಭವಾಯಿತು.

ರಾಜ್ಯದ ಹಳ್ಳಿ ಹಳ್ಳಿಗಳಿಗೆ ನೀರುಣಿಸುತ್ತೇನೆ ಎಂದು ಸದನದಲ್ಲಿ ಘೋಷಿಸಿದ ನಜೀರ್ ಸಾಬ್ ಕೇವಲ ಆರು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ ಹದಿನಾರು ಸಾವಿರ ಕುಡಿಯುವ ನೀರಿನ ಕೊಳವೆ ಬಾವಿಗಳ ನಿರ್ಮಾಣ ಮಾಡಿ ದಾಖಲೆ ನಿರ್ಮಿಸಿದರು. ಇದನ್ನು ಕೇಂದ್ರ ಗೃಹ ಮಂತ್ರಿ ಬೂಟಾ ಸಿಂಗ್ ಅವರೇ ಒಪ್ಪಿಕೊಂಡು ನಜೀರ್ ಸಾಬ್ ಅವರ ಸಾಧನೆಯನ್ನು ಪ್ರಶಂಸಿಸಿದ್ದರು.

ಈ ಪವಾಡ ಸದೃಶ ಕೆಲಸಕ್ಕೆ ನಜೀರ್ ಸಾಬ್ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಿಸಲಿಲ್ಲ. ಭ್ರಷ್ಟಾಚಾರ ಮತ್ತು ಸೋಮಾರಿತನದಲ್ಲಿ ಮುಳುಗಿದ್ದ ಲೋಕೋಪಯೋಗಿ ಇಲಾಖೆಯ ನೌಕರರಿಂದಲೇ ಆ ಕೆಲಸ ಮಾಡಿಸಿದ್ದರು. ಇಂದು ದೇಶದ ಅರ್ಧ ಒಂದು ಭಾಗದಷ್ಟು ಕೊಳವೆ ಬಾವಿಗಳು ನಮ್ಮ ರಾಜ್ಯದಲ್ಲಿವೆ ಎಂದ ಮೇಲೆ ನಜೀರ್ ಸಾಬ್ ಅವರ ಕೆಲಸದ ಅಗಾಧತೆ ಅರಿವಾಗಬಹುದು.

ಈ ಭಗೀರಥ ಪ್ರಯತ್ನಕ್ಕಾಗಿಯೇ ರಾಜ್ಯದ ಜನ ನಜೀರ್ ಸಾಬ್ ಅವರನ್ನು 'ನೀರುಸಾಬ'ರೆಂದೇ ಆತ್ಮೀಯತೆಯಿಂದ ಕರೆಯತೊಡಗಿದರು.

ಹಳ್ಳಿಗಳ ಜನರ ನೀರಿನ ಬವಣೆ ಮತ್ತು ಕುಡಿಯುವ ನೀರಿನ ಪ್ರಾಮುಖ್ಯತೆ ಇವುಗಳ ಬಗ್ಗೆ 'ನೀರು ಸಾಬ'ರಿಗೆ ಸ್ಪಷ್ಟವಾದ ತಿಳುವಳಿಕೆಯಿತ್ತು. ಅವರು ಜಿಲ್ಲೆಗೆ ಬಂದಿದ್ದಾಗ ಸಮಾರಂಭವೊಂದರಲ್ಲಿ ಭಾಷಣ ಮಾಡುತ್ತಾ

"ಶುದ್ಧವಾದ ನೀರು ಸಿಗದ ದೇಶದಲ್ಲಿ ಎರಡು ಲಕ್ಷ ಹಳ್ಳಿಗಳಿಗೆ ನೀರಿಲ್ಲ. ಜನ ಯಾವುದೋ ಹಳ್ಳ, ಹೊಂಡ, ಕೊಳ್ಳಗಳ ನೀರು ಕುಡಿಯುತ್ತಾರೆ. ಇಂಥ ನೀರಿನಿಂದ 167 ರೋಗಗಳು ಬರುತ್ತವೆ. ಇದರಿಂದಾಗಿ ಎಷ್ಟೆಂತ ಅಶುದ್ಧ ನೀರಿನಿಂದ ಬರುವ ರೋಗದಿಂದಲೇ ಸಾಯುವವರೇ ಹೆಚ್ಚಾಗಿದ್ದಾರೆ. ಆದರೂ ಇಂದಿರಾ ಗಾಂಧಿಯವರು ಕೇವಲ ನೂರು ಕೋಟಿ ಮಾತ್ರ ಇದಕ್ಕಾಗಿ ತೆಗೆದಿರಿಸಿದ್ದಾರೆ. ನಿಜವಾಗಿಯೂ ಈ ಕೆಲಸಕ್ಕೆ ಎಂಟು ನೂರು ಕೋಟಿ ಬೇಕಾಗುತ್ತದೆ. ಅವರ ಪ್ರಕಾರ ನೀರಿಗೆ ಹಣವಿಲ್ಲ. ಆದರೆ ಏಷ್ಯಾಡ್ ಆಟಗಳಿಗೆ ಹದಿನಾರು ನೂರು ಕೋಟಿ ಖರ್ಚು ಮಾಡಿ ಪ್ರತಿಷ್ಠೆ ಹೆಚ್ಚಿಸಿಕೊಳ್ಳಲು ಹಣ ಇದೆ--" ಎಂದು ಕೇಂದ್ರ ಸರಕಾರದ ಎಡವಟ್ಟನ್ನು ಬಯಲುಗೊಳಿಸಿದ್ದರು.

ಜಿಲ್ಲಾ ಪರಿಷತ್ ನಜೀರ್ ಸಾಬ್ ಅವರ ಕನಸಿನ ಕೂಸಾಗಿತ್ತು. ಅದನ್ನು ಸ್ವಾಭಾವಿಕವಾಗಿ ಅರೆದು ಕುಡಿದ ಸಾಬ್ ಅದನ್ನು ಎಳೆಎಳೆಯಾಗಿ ಬಿಚ್ಚಿಡುತ್ತಿದ್ದರು. ಈ ಜಿಲ್ಲಾ ಪರಿಷತ್ ಮಸೂದೆಗೆ ಉಭಯ ಸದನಗಳ ಅಂಗೀಕಾರ ಪಡೆಯಲು ಅವರು ನಡೆಸಿದ ಹೋರಾಟ ಮತ್ತೊಂದು ದೀರ್ಘ ಕಥನ.

ಅಧಿಕಾರ ವಿಕೇಂದ್ರೀಕರಣ ತಮ್ಮ ಸಾಧನೆಯೆಂದು ಬೊಬ್ಬಿಡುತ್ತಾ ಕೂಗಾಡುತ್ತಿರುವ ಈ ಜನತಾ ಶಾಸಕರಲ್ಲಿ ಕೇವಲ 36 ಸದಸ್ಯರು ಮಾತ್ರ ಜಿಲ್ಲಾ ಪರಿಷತ್ ವಿಧೇಯಕ ವಿಧಾನಸಭೆಯಲ್ಲಿ ಪಾಸಾದಾಗ ಅದರ ಪರ ಮತ ಚಲಾಯಿಸಲು ಹಾಜರಿದ್ದರು. ವಿರೋಧ ಪಕ್ಷವಾದ ಕಾಂಗ್ರೆಸ್ಸಿನ 34 ಮಂದಿ ಮಾತ್ರ ಸದನದಲ್ಲಿ ಹಾಜರಿದ್ದ ಕಾರಣ ವಿಧೇಯಕ ಪಾಸಾಯಿತು. ಆಗ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಕೂಡಾ ದಿಲ್ಲಿಯಲ್ಲಿದ್ದರು.

ಜನತಾ ಸರಕಾರ ಅಧಿಕಾರಕ್ಕೆ ಬಂದ ಮೊದಲ ದಿನಗಳಲ್ಲಿ ಇತರರು ವಿಜಯೋತ್ಸವದ ಗುಂಗಿನಲ್ಲಿದ್ದರೆ, ನಜೀರ್ ಸಾಬ್ ಜಿಲ್ಲಾ ಪರಿಷತ್ ವಿಧೇಯಕವನ್ನು ಸಿದ್ಧಪಡಿಸುವ ತರಾತುರಿಯಲ್ಲಿದ್ದರು. ಕೇವಲ 39ದಿನಗಳಲ್ಲಿ ಅದನ್ನು ಸಿದ್ಧಪಡಿಸಿ ವಿಧಾನ ಸಭೆಯಲ್ಲಿ ಮಂಡಿಸಿದ್ದರು. ಅಲ್ಲಿ ವಿರೋಧ ವ್ಯಕ್ತವಾದಾಗ ಅದನ್ನು ಸದನದ ಸಂಯುಕ್ತ ಆಯ್ಕೆ ಸಮಿತಿಯ ಪರಿಶೀಲನೆಗೆ ಒಪ್ಪಿಸಿತು.

ಜಿಲ್ಲಾ ಪರಿಷತ್ ವಿಧೇಯಕದ ಬಗ್ಗೆ ಅವರು ವ್ಯಕ್ತಪಡಿಸುತ್ತಿದ್ದ ಮಮತೆ ಅಂತಹದ್ದು. ಅದರ ವಿಶ್ಲೇಷಣೆಯಲ್ಲಿ ಭಾವುಕರಾಗುತ್ತಿದ್ದ ಸಾಬರು, ಅದರ ಬಗ್ಗೆ ಸಣ್ಣ ಟೀಕೆಗಳಿಗೆ ಹುಬ್ಬುಗಂಟಿಕ್ಕಿ ಉರಿದುಬೀಳುತ್ತಿದ್ದರು. ಜಿಲ್ಲಾ ಪರಿಷತ್ ಅನುಷ್ಠಾನಕ್ಕಾಗಿಯೇ ಅವರು ಹುಟ್ಟಿಬಂದವರಂತೆ ನನಗೆ ಕಂಡಿದ್ದರು.

ಆದರೆ ಅವರು ಪ್ರತಿನಿಧಿಸುತ್ತಿದ್ದ ಜನತಾ ಸರಕಾರ ತಾಳಿಭಾಗ್ಯ ವಿಧವಾ ವೇತನ ಮೊದಲಾದ ಅಗ್ಗದ ಜನಪ್ರಿಯ ಕಾರ್ಯಕ್ರಮಗಳ ಬೆನ್ನು ಹತ್ತಿದ್ದಾಗ ಆ ಬಗ್ಗೆ ತುಟಿಪಿಟಿಕ್ಕೆನ್ನದೆ ಮೌನವಾಗಿ ತಮ್ಮ ಕೆಲಸದಲ್ಲಿ ತೊಡಗಿದ್ದರು. ಬಹುಶಃ ನಜೀರ್ ಸಾಬ್ ಅವರ ಯಶಸ್ಸಿನ ಒಂದು ಗುಟ್ಟು ಇದು. ವಿವಾದಗಳು ಎದುರಾದಾಗಲೆಲ್ಲ ವಿಷಯಾಂತರ ಮಾಡಿ

ದಿನೇಶ್ ಅಮಿನ್ ಮಟ್ಟು

ಜಾರಿಕೊಳ್ಳುತ್ತಿದ್ದ ನಜೀರ್ ಕೇವಲ ತಮ್ಮ ಖಾತೆಯ ಕೆಲಸಗಳಿಗಷ್ಟೆ ತಮ್ಮ ಗಮನ ಕೇಂದ್ರೀಕರಿಸಿದ್ದರು.

ತಮ್ಮ ಕಾರ್ಯಕ್ರಮಗಳನ್ನು ಜನತಾ ವಿಶಾಲ ದೃಷ್ಟಿಯಿಂದ ಅವರು ಅನುಷ್ಠಾನಕ್ಕೆ ತಂದವರಲ್ಲ. ಬಹುಶಃ ಅಂತಹ ಪ್ರತಿಫಲವನ್ನೂ ಅವರು ನಿರೀಕ್ಷಿಸಿರಲಾರರು. ಈ ಕಾರಣದಿಂದಲೇ 1985ರ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಿಂದ ಸ್ಪರ್ಧಿಸಿದ ನಜೀರ್ ಸಾಬ್ ಕಾಂಗ್ರೆಸ್ಸಿನ ಅಜೀಜ್ ಸೇಠ್ ಅವರಂತಹ ಸಾಧಾರಣ ಅಭ್ಯರ್ಥಿ ಎದುರು ಸೋಲು ಅನುಭವಿಸಿದರು. ಇದು 'ನೀರುಸಾಬ'ರ ಋಣವನ್ನು ಜನ ತೀರಿಸಿದ ರೀತಿ!

ಆ ಸಂದರ್ಭದಲ್ಲಿ ನಿಮ್ಮ ಸೋಲಿಗೆ ಕಾರಣ ವಿವರಿಸಬಹುದೆ ಎಂಬ ಪತ್ರಿಕಾ ಪ್ರತಿನಿಧಿಯೊಬ್ಬರ ಪ್ರಶ್ನೆಗೆ ನಜೀರ್-

"ಆಳುವ ವರ್ಗ ಕಾಲಕಾಲಕ್ಕೆ ತನ್ನಂತೆ ಜಾತಿ ಸಂಮಿಶ್ರಣ ಮಾಡುತ್ತ ರಾಜಕೀಯ ಪಾತಾಳದಲ್ಲಿ ಸಮಾಜದ ಕೆಳ ವರ್ಗದ ಜನರನ್ನು ಹೇಗೆ ತನ್ನ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತದೆ" ಎಂದು ಲೋಹಿಯಾ ಅವರ ಮಾತನ್ನು ಉಲ್ಲೇಖಿಸಿದ್ದರು.

"ಮತದಾರ ಅವಿಶ್ವಾಸದ ಬಗ್ಗೆ ಅಸಹನೆಗೊಳ್ಳುವ ಬದಲು ಅವರಲ್ಲಿ ಜಾಗೃತಿ ಉಂಟುಮಾಡುವ ಕೆಲಸ ನಡೆಯಬೇಕಾಗಿದೆ." ಎಂದಿದ್ದರು.

ಸೋಲಿನ ಸುದ್ದಿ ತಿಳಿದ ತಕ್ಷಣ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಜೀರ್ ಸಾಬ್ ಸರಕಾರದ ಕಾರನ್ನು ಹಿಂದಕ್ಕೆ ಕಳುಹಿಸಿ, ಸಚಿವರ ಸೇವೆಗಿದ್ದ ಆಳುಕಾಳುಗಳನ್ನೆಲ್ಲ ವಾಪಾಸ್ ಕಳುಹಿಸಿದ್ದರು.

"ಸದ್ಯವೇ ಸರಕಾರಿ ಮನೆಯನ್ನು ಖಾಲಿಮಾಡಿ ಬಾಡಿಗೆ ಮನೆ ಹಿಡಿಯುತ್ತೇನೆ. ಕನಿಷ್ಠ ಪಕ್ಷ ಜೀವನ ನಿರ್ವಹಣೆಗೆ ವ್ಯವಸ್ಥೆ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ಒಂದೆರಡು ಹಸು ಕಟ್ಟಿ ಹಾಲು ಮಾರುವುದರಿಂದ ಜೀವನ ನಡೆಸುತ್ತೇನೆ" ಎಂದು ಸಹಜವಾಗಿ ತಮ್ಮ ತೀರ್ಮಾನ ನೀಡಿದ್ದರು.

ಅಧಿಕಾರದ ಬಗ್ಗೆ ವಿಶೇಷ ವ್ಯಾಮೋಹವನ್ನಿರಿಸಿಕೊಂಡಿರದ ನಜೀರ್ ಸಾಬ್ ಆ ಕಾರಣದಿಂದಾಗಿಯೇ ಗುಂಪುಗಾರಿಕೆ, ಪಿತೂರಿ ಜಾತೀಯತೆಯಿಂದ ದೂರ ಉಳಿದು ಬಾಳುವುದೇ ಅತಿ ಅಭದ್ರತೆಯ ಭಯವಿಲ್ಲದೆ ನಿಶ್ಚಿಂತೆಯಿಂದ ಓಡಾಡುತ್ತಿದ್ದರು.

ಲೋಕಸಭೆಯ ಸೋಲು ಅವರ ಉತ್ಸಾಹವನ್ನು ಒಂದಿನಿತು ಕುಗ್ಗಿಸಲಿಲ್ಲ. ಅವರು ಮತ್ತಷ್ಟು ಶ್ರದ್ಧೆ-ಉತ್ಸಾಹಗಳಿಂದ ಜಿಲ್ಲಾ ಪರಿಷತ್ ವಿಧೇಯಕದ ಅನುಷ್ಠಾನದಲ್ಲಿ ತೊಡಗಿದರು.

ಸಮಿತಿಯ ಸದಸ್ಯರನ್ನೆಲ್ಲ ಅಖಿಲ ಭಾರತ ಅಧ್ಯಯನ ಪ್ರವಾಸಕ್ಕೆ ಕರೆದೊಯ್ದ ನಜೀರ್ ಸಾಬ್, ಸಮಿತಿ ವರದಿಯನ್ನು ವಿಧಾನಸಭೆಯ ಅಧ್ಯಕ್ಷರಿಗೆ ಸಲ್ಲಿಸಿದರು.

ಈ ವಿಧೇಯಕದ ಬಗ್ಗೆ ಶಾಸನಸಭೆಯಲ್ಲಿ ಬಿರುಸಿನ ಚರ್ಚೆ ನಡೆದಾಗ ನ್ಯಾಯ ಪಂಚಾಯಿತಿಯ ಅನುಷ್ಠಾನಕ್ಕೆ ತೀವ್ರ ವಿರೋಧ ವ್ಯಕ್ತವಾಯಿತು. ಕೊನೆಗೂ ನ್ಯಾಯ ಪಂಚಾಯಿತಿ ವ್ಯವಸ್ಥೆಯ ಅನುಷ್ಠಾನವನ್ನು ಐದು ವರ್ಷಗಳ ಕಾಲ ಮುಂದೂಡಲಾಯಿತು.

ಈ ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಕಿತ ಪಡೆಯಲು ವಿಳಂಬವಾದಾಗ ಸಿಡಿದ ನಜೀರ್ ಸಾಬ್ ರಾಷ್ಟ್ರಪತಿ ಭವನದ ಎದುರು ಉಪವಾಸ ಸತ್ಯಾಗ್ರಹ ಮಾಡುತ್ತೇನೆಂದು ಬೆದರಿಕೆ ಹಾಕಿದ್ದರು. ಅಂತೂ ಆರು ತಿಂಗಳ ನಂತರ ವಿಧೇಯಕಕ್ಕೆ ರಾಷ್ಟ್ರಪತಿಗಳ ಅಂಕಿತ ಬಿತ್ತು.

ಆದರೂ ಗ್ರಾಮ ಸ್ವರಾಜ್ಯದ ಮೂಲರೇ ಆಗಿರುವ ನ್ಯಾಯ ಪಂಚಾಯಿತಿ ವ್ಯವಸ್ಥೆಯ ಅನುಷ್ಠಾನವನ್ನು ಮುಂದೂಡಿದ್ದು ಬಗ್ಗೆ ನಜೀರ್ ಸಾಬ್ ಅವರಿಗೆ ಕೊನೆಯವರೆಗೂ ಅಸಮಾಧಾನವಿತ್ತು.

"ನ್ಯಾಯ ಪಂಚಾಯತಿ ಬಗ್ಗೆ ನಮ್ಮ ದಲಿತರಿಗೆ ಅಲ್ಪಸಂಖ್ಯಾತರಿಗೆ ಭಯವಿತ್ತು ದಿಗಿಲಿದೆ. ಒಮ್ಮೆ ಪಂಚಾಯತ್ ರಾಜ್ ಅಸ್ತಿತ್ವಕ್ಕೆ ಬಂದರೆ ಬಹುಶಃ ಅವರಿಗೆ ನ್ಯಾಯ ಪಂಚಾಯ್ತಿಯು ಅವಶ್ಯಕ ಅಂದಾದೀತು. ನನಗಂತೂ ನ್ಯಾಯ ಪಂಚಾಯತ್‌ನ ಪೊಲೀಸ್ ವ್ಯವಸ್ಥೆಯನ್ನು ಅಧೀನಗೊಳಿಸಿ ಬರೆ ವಿಧಿಸಲು ಪೊಲೀಸ್ ಪಡೆಯನ್ನು ಮಾತ್ರ ರಾಜ್ಯ ಸರಕಾರದ ಹತೋಟಿಯಲ್ಲಿರಿಸಲು ಶಿಫಾರಸ್ ಮಾಡುವವನೇ" ಎಂದು ನಜೀರ್ ಸಾಬ್ ಹೇಳಿದ್ದರು.

ತಮ್ಮ ವಾದಕ್ಕೆ ಬೆಂಬಲವಾಗಿ, ಬಿಹಾರದಲ್ಲಿ ನಡೆಸಿದ ನ್ಯಾಯಪಂಚಾಯಿತಿ ಹೇಗೆ ಸಫಲವಾಯಿತೆಂಬುದನ್ನು ಉದಾಹರಿಸುತ್ತಿದ್ದರು.

ಕಾನೂನು-ನಿಯಮಾವಳಿಗಳ ಬಗ್ಗೆ ತೀರಾ ಅಜ್ಞಾನದೊಂದಿರುವ ನಮ್ಮ ಅವಿದ್ಯಾವಂತ- ಅರೆವಿದ್ಯಾವಂತ ಜನರಿರುವ ಹಳ್ಳಿಗಳಲ್ಲಿ ನ್ಯಾಯಪಂಚಾಯಿತಿ ಅನುಷ್ಠಾನಕ್ಕೆ ತಂದರೆ ಅದು ಪಾಳೇಗಾರಿಕೆ ತೀರ್ಪುಗಳ ಮತ್ತೊಂದು ಅಸ್ತ್ರ ಕೊಟ್ಟ ತಾಗುವುದಿಲ್ಲವೇ? ಎಂಬ ಪ್ರಶ್ನೆಗೆ ಅವರ ಉತ್ತರ ಸಿದ್ಧವಿತ್ತು.

"ನ್ಯಾಯಾಲಯಗಳ ಹಳೆಯ ತೀರ್ಪುಗಳನ್ನೆಲ್ಲಾ ಅಧ್ಯಯನ ಮಾಡಿ, ಕಾನೂನುಗಳನ್ನೆಲ್ಲ ಪರಿಶೀಲಿಸಿ ನ್ಯಾಯ ತೀರ್ಮಾನ ಕೊಡುವಷ್ಟು ನಮ್ಮ ಹಳ್ಳಿಗಾಡಿನ ಜನರು ಪರಿಣತರಲ್ಲದಿದ್ದರೂ ಅವರಲ್ಲಿರುವ ಹೃದಯವಂತಿಕೆ, ಮಾನವೀಯತೆ, ನ್ಯಾಯನಿಷ್ಠುರತೆ, ಅವರನ್ನು ಉತ್ತಮ ನ್ಯಾಯಾಧೀಶರನ್ನಾಗಿ ಮಾಡಬಲ್ಲದು" ಎಂದು ಹೇಳುತ್ತಿದ್ದರು. ಹಳ್ಳಿಯ ಮುಗ್ಧ ಜನರ ಬಗ್ಗೆ ನಜೀರ್ ಸಾಬ್ ವಿಶ್ವಾಸ ಆ ತೆರನದ್ದು.

ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ವ್ಯವಸ್ಥೆ ಕೇವಲ ಬದಲಾವಣೆಯ ಸ್ಪಷ್ಟ ಅರಿವು ಅವರಿಗಿತ್ತು. ಇಂದು ಈ ವ್ಯವಸ್ಥೆಯಿಂದ ಬದಲಾವಣೆಯ ಬಗ್ಗೆ ನಜೀರ್ ಸಾಬ್ ಹಿಂದೆಯೇ ಭವಿಷ್ಯ ನುಡಿದಿದ್ದರು.

ಒಂದು ಉದಾಹರಣೆ: ಅಧಿಕಾರ ಚಲಾಯಿಸುವ ಜನರ ಮನೋಧರ್ಮ ಬದಲಾಗದೆ ಯಾವುದೇ ಹೊಸ ಆಡಳಿತ ವ್ಯವಸ್ಥೆಯಿಂದ ಸಾಮಾಜಿಕ ಬದಲಾವಣೆ ಸಾಧ್ಯ

(ಐದನೆ ಪುಟಕ್ಕೆ)

ಚಿಂತನೆ

"ಕ್ರೋಧವು ಮೂರ್ಖತನದಲ್ಲಿ ಹುಟ್ಟಿ ಪಶ್ಚಾತ್ತಾಪದಲ್ಲಿ ಕೊನೆಗೊಳ್ಳುತ್ತದೆ"

—ಪೈಥಾಗೋರಸ್

ಗ್ರಾಮೀಣ ಮಂದಿಗೆ ಹೊಸ ವಿಚಾರ ತುಂಬಿ

ಯುವಕ ಮಂಡಲಗಳಿಗೆ ಕುಂದರ್ ಕರೆ

ಚಿತ್ರಾಪುರ, ಅ. 28–"ಯುವಕ ಮಂಡಲಗಳು ವಾರ್ಷಿಕೋತ್ಸವಗಳಿಗಷ್ಟೇ ಸೀಮಿತವಾಗದೆ ಕೃಷಿಗೋಷ್ಠಿ, ಸ್ವಉದ್ಯೋಗ ಯೋಜನೆ ಮುಂತಾದವುಗಳನ್ನು ಕೈಗೆತ್ತಿಕೊಳ್ಳಬೇಕು" ಎಂದು ದ. ಕ. ಜಿಲ್ಲಾ ಪರಿಷತ್ ಅಧ್ಯಕ್ಷ ಕೆ. ಸಿ. ಕುಂದರ್ ಅವರು ಹೇಳಿದರು.

ಅವರು ಇತ್ತೀಚೆಗೆ ಚಿತ್ರಾಪುರದ ತಣ್ಣೀರುಬಾವಿ ಯುವಕ ಮಂಡಲದ ಬೆಳ್ಳಿ ಹಬ್ಬ ವರ್ಷದ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಹೊಸ ಹೊಸ ವಿಚಾರಗಳನ್ನು ಅರಿತು ನಗರದ ಮಂದಿ ಮುಂದುವರಿಯುತ್ತಿರುವ ಇಂದಿನ ದಿನಗಳಲ್ಲಿ ಗ್ರಾಮೀಣ ಜನರು ಹಿಂದೆ ಬೀಳುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವ ಯುವಕ ಮಂಡಲಗಳು ಅವರಿಗೆ ಹೊಸ ವಿಚಾರ ತುಂಬುವಂಥ ಕಾರ್ಯಕ್ರಮ ಹಮ್ಮಿಕೊಳ್ಳಬೇಕೆಂದು ಅವರು ಕರೆ ಕೊಟ್ಟರು.

ಸ್ಥಳೀಯ ಮಂಡಲ ಪ್ರಧಾನ ನಾರಾಯಣ ಅಮೀನ್ ಬೆಳ್ಳಿ ಹಬ್ಬ ವರ್ಷದ ಕಾರ್ಯಕ್ರಮಗಳನ್ನು ಉದ್ಘಾಟಿಸಿ ಯುವಕ ಮಂಡಲಗಳ ಪಾತ್ರವನ್ನು ವಿವರಿಸಿದರು.

ದೇವಣ್ಣ ಶೆಟ್ಟಿ ಹಾಗೂ ಯಶವಂತ ಬೋಳೂರು ಮುಖ್ಯ ಅತಿಥಿಗಳಾಗಿದ್ದರು. ದಾಮೋದರ ಶ್ರೀಯಾನ್ ಸುಂದರ ಅಮೀನ್ ಲಕ್ಷ್ಮಣ ಪುತ್ರನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಯಶಪಾಲ್ ವರದಿ ಓದಿದರು. ಕೃಷ್ಣಮೂರ್ತಿ ಸ್ವಾಗತಿಸಿದರು. ಸತೀಶ್ ವಂದಿಸಿದರು. ಕೊನೆಯಲ್ಲಿ ಯುವಕ ಮಂಡಲ ಮತ್ತು ಮಹಿಳಾ ಮಂಡಲದ ಸದಸ್ಯರಿಂದ ಮನೋರಂಜನಾ ಕಾರ್ಯಕ್ರಮ ನಡೆಯಿತು.

ಪುತ್ತೂರು ನಗರ ಬಿ. ಜೆ. ಪಿ ಕಾರ್ಯಕರ್ತರ ಸಭೆ

ಪುತ್ತೂರು, ಅ. 28–ಪುತ್ತೂರು ನಗರದ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರ ಸಮಾವೇಶವು ಪುರಸಭಾಧ್ಯಕ್ಷ ಕೆ. ರಾಮಚಂದ್ರ ಶೆಣೈಯವರ ನಿವಾಸದಲ್ಲಿ ಇತ್ತೀಚೆಗೆ ನಡೆಯಿತು.

ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದ ಬಿ. ಜೆ. ಪಿಯ ಜಿಲ್ಲಾಧ್ಯಕ್ಷರಾದ ಧನಂಜಯಕುಮಾರ್‌ರವರು ಮುಂಬರುವ ಚುನಾವಣೆಗಳಲ್ಲಿ ಹೆಚ್ಚಿನ ಮತಗಳನ್ನು ಪಡೆದುಕೊಳ್ಳುವ ಪ್ರಯತ್ನ ಪಕ್ಷದಿಂದ ನಡೆಯಬೇಕೆಂದರು.

ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದ ಬಿ.ಜೆ.ಪಿಯ ರಾಜ್ಯ ಕಾರ್ಯದರ್ಶಿಗಳಾದ ಕಂಬಳ್ಳ ಸಂಜೀವ ಶೆಟ್ಟರು ರಾಷ್ಟ್ರಮಟ್ಟದ ಪಕ್ಷ ಒಂದರ ಕಾರ್ಯಕರ್ತರಿರುವ ಅರ್ಹತೆಯನ್ನು ರೂಢಿಸಿಕೊಳ್ಳುವಂತೆ ಸಲಹೆ ಇತ್ತರು.

ಸಮಾರೋಪ ಭಾಷಣ ಮಾಡಿದ ಪುತ್ತೂರಿನ ಮಾಜಿ ಶಾಸಕರಾದ ಕೆ. ರಾಮ ಭಟ್‌ರವರು ಇತರ ಎಲ್ಲಾ ಪಕ್ಷಗಳ ವಿದ್ಯಮಾನಗಳಿಂದ ಭ್ರಮೆ ನಿರಸನಗೊಂಡ ಜನ ಭಾರತೀಯ ಜನತಾ ಪಕ್ಷದತ್ತ ನೋಡುವಂತಾಗಲಿದೆ ಎಂದರು.

ಪಿ. ತಾರಾನಾಥರವರು ಸ್ವಾಗತಿಸಿದರು. ಪುರಸಭಾ ಸದಸ್ಯ ರಾಮಚಂದ್ರ ಬೊಳುವಾರು ವಂದಿಸಿದರು.

ಪದಾಧಿಕಾರಿ ಆಯ್ಕೆ

ಬಜ್ಪೆ, ಅ. 28–ಸ್ಥಳೀಯ ರಿಕ್ಷಾ ಚಾಲಕರ ಸಂಘಕ್ಕೆ 1988-89 ನೇ ಸಾಲಿಗೆ ಈ ಕೆಳಗಿನ ಪದಾಧಿಕಾರಿಗಳನ್ನು ಆರಿಸಲಾಗಿದೆ.

ಡಾ| ಗೋಪಿನಾಥ ಭಟ್ (ಗೌರವ ಅಧ್ಯಕ್ಷ), ಮುತ್ತಯ್ಯ (ಕಾರ್ಯಾಧ್ಯಕ್ಷ), ಸಂಜೀವ ಬೆಳ್ವಡ, ಲೋಬಿರ ಪೂಜಾರಿ (ಉಪಾಧ್ಯಕ್ಷರು), ಅಣ್ಣಾ ಶೆಟ್ಟಿಗಾರ (ಕಾರ್ಯದರ್ಶಿ), ಓಕಾಂಬರ ರೈ, ವಸಂತ ಶ್ರೀಯಾನ್ (ಜತೆ ಕಾರ್ಯದರ್ಶಿಗಳು), ದೇವದಾಸ ಶೆಟ್ಟಿಗಾರ (ಕೋಶಾಧಿಕಾರಿ)

ಅವಿನಾಶ್ ಯುವಕ ಮಂಡಲ
ನೀರುಮಾರ್ಗ

ಅವಿನಾಶ್ ಯುವಕ ಮಂಡಲ ನೀರುಮಾರ್ಗ ಇದರ ಮಹಾಸಭೆಯು ಇತ್ತೀಚೆಗೆ ಜರುಗಿ ಈ ಕೆಳಗಿನ ಪದಾಧಿಕಾರಿಗಳನ್ನು ಮುಂದಿನ ಸಾಲಿಗೆ ಆರಿಸಲಾಯಿತು.

ಭಾಸ್ಕರ ಅಮೀನ್ (ಅಧ್ಯಕ್ಷ), ಶೇಖರ ಕೆ. (ಉಪಾಧ್ಯಕ್ಷ), ವನಜಾಕ್ಷ, ಸುಂದರ (ಕಾರ್ಯದರ್ಶಿಗಳು), ಸುಂದರ ಕೆ. (ಕೋಶಾಧಿಕಾರಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು.

ಸಂತಾಪ

ಮಂಗಳೂರು, ಅ. 28- ಮೂಲ್ಕಿ ಜನತಾ ಪಕ್ಷದ ಅಧ್ಯಕ್ಷ ರಮೇಶ ಕೋಟ್ಯಾಂಟರ್ ಅವರ ನಿಧನಕ್ಕೆ ಮಾಜಿ ಸಚಿವ ಹಾಗೂ ಶಾಸಕ ಕೆ. ಅಮರನಾಥ ಶೆಟ್ಟಿ, ಮಂಗಳೂರು ತಾಲೂಕು ಜನತಾಪಕ್ಷದ ಅಧ್ಯಕ್ಷ ಎಂ. ಸಂಜೀವ ಅವರು ತಮ್ಮ ಶೋಕವನ್ನು ವ್ಯಕ್ತಪಡಿಸಿದ್ದಾರೆ.

ಈಶ್ವರಮಂಗಲದಲ್ಲಿ ಶಿಶು ಪ್ರದರ್ಶನ

ಈಶ್ವರ ಮಂಗಲ, ಅ. 28–ಯುವಕ ಮಂಡಲ ಮುಡ್ನೂರು, ಈಶ್ವರಮಂಗಲ ಪ್ರಾಥಮಿಕ ಆರೋಗ್ಯ ಘಟಕ ಮತ್ತು ನವಚೇತನಾ ವಿದ್ಯಾರ್ಥಿ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಒಂದು ವರ್ಷದೊಳಗಿನ ಶಿಶು ಪ್ರದರ್ಶನ ಕಾರ್ಯಕ್ರಮ ನಡೆಯಿತು.

ಡಾ| ಸಿದ್ದಲಿಂಗಯ್ಯ, ಡಾ| ಉದಯಶಂಕರ ಪಟ್ಟಾರ್, ಡಾ| ಚಂದ್ರಶೇಖರ, ಡಾ| ಪಿ. ಆರ್. ಜಗನ್, ಡಾ| ಕೆ. ಶ್ರೀಕುಮಾರ್ ಅವರು ನಿರ್ಣಾಯಕರಾಗಿದ್ದರು. ಮಂಡಲ ಪ್ರಧಾನ ಬಾಲಕೃಷ್ಣ ರೈ ಅವರ ಅಧ್ಯಕ್ಷತೆಯಲ್ಲಿ ಡಾ| ಶ್ರೀಕುಮಾರ್ ಬಹುಮಾನ ವಿತರಿಸಿದರು.

ಸನತ್ ಕುಮಾರ್ (ಪ್ರಥಮ), ಅಶ್ವಿನಿ (ದ್ವಿತೀಯ), ಹರಿಪ್ರಸಾದ್ (ತೃತೀಯ) ಹಾಗೂ ಮಲ್ಲಿಕಾ, ಅಜಿತ್ ಕುಮಾರ್, ಕಿರಣ್ ಕುಮಾರ್ ಸಮಾಧಾನಕರ ಬಹುಮಾನ ಪಡೆದರು.

ಅಬ್ದುಲ್ ಪಿ. ಎ. ಸ್ವಾಗತಿಸಿದರು. ಚಂದ್ರಹಾಸ ರಾವ್ ಪಿ. ವಂದಿಸಿದರು.

ಕೋಟೇಶ್ವರದಲ್ಲಿ ಜಯಲಕ್ಷ್ಮಿ ಹಾರ್ಡ್‌ವೇರ್ಸ್ ಪ್ರಾರಂಭ

ಕೋಟೇಶ್ವರ, ಅ. 28–ಗ್ರಾಮಾಂತರ ಪ್ರದೇಶದ ಜನರಿಗೆ ಕಟ್ಟಡ ಸಾಮಗ್ರಿಗಳಿಗೆ ಅವಶ್ಯವೆನಿಸುವ ಜಯಲಕ್ಷ್ಮಿ ಹಾರ್ಡ್‌ವೇರ್ಸ್ ಸಂಸ್ಥೆಯನ್ನು ದ. ಕ. ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ಹಾಗೂ ಖ್ಯಾತ ಉದ್ಯಮಿಯಾದ ಕೆ. ಸತೀಶ್ಚಂದ್ರ ಹೆಗ್ಡೆಯವರು ಇತ್ತೀಚೆಗೆ ಉದ್ಘಾಟಿಸಿದರು.

ವಿವಿಧ ಬಗೆಯ ಅವಶ್ಯಕ ಕಟ್ಟಡ ಸಾಮಗ್ರಿಗಳು ಲಭ್ಯವಿರುವ ಅಂಗಡಿಯನ್ನು ಸಾಮಾನ್ಯವಾಗಿ ಪೇಟೆ, ಪಟ್ಟಣಗಳಲ್ಲಿ ಆರಂಭಿಸಲಾಗುತ್ತದೆ. ಆದರೆ, ಜಯಲಕ್ಷ್ಮಿ ಹಾರ್ಡ್‌ವೇರ್ಸ್ ಸಂಸ್ಥೆಯ ಮಾಲಿಕರಾದವರು ಗ್ರಾಮೀಣ ಪ್ರದೇಶದಲ್ಲಿ ಇಂತಹ ಅಂಗಡಿಯನ್ನು ಆರಂಭಿಸಿದ ಸಾಹಸವನ್ನು ಅವರು ಪ್ರಶಂಸಿಸಿದರು.

ಇಲ್ಲಿನ ಮನೋಹರ ನಿಲಯದಲ್ಲಿ ಆರಂಭಗೊಂಡ ಜಯಲಕ್ಷ್ಮಿ ಹಾರ್ಡ್‌ವೇರ್ಸ್ ಸಂಸ್ಥೆಗೆ ಶ್ರೀಮತಿ ಗೀತಾ ಜಯಚಂದ್ರ ಹೆಗ್ಡೆ ಆತಿಥೇಯ ಮಾಲಿಕರಾಗಿದ್ದು, ಶ್ರೀಮತಿ ಜಯಂತಿ ಮೋಹನದಾಸ ಹೆಗ್ಡೆ, ಶ್ರೀಮತಿ ಪ್ರೇಮಲತಾ ಕೆ. ಶೆಟ್ಟಿ, ಎಂ. ಪ್ರಭಾಕರ ಶೆಟ್ಟಿ, ಎಚ್. ಬಾಲಕೃಷ್ಣ ಶೆಟ್ಟಿ, ಕೆ. ಎಚ್. ಸಂತೋಷ ಹೆಗ್ಡೆ ಪಾಲುದಾರರಾಗಿದ್ದಾರೆ.

ಶ್ರೀಮತಿ ಪ್ರೇಮಲತಾ ಎಸ್. ಹೆಗ್ಡೆ ಅವರು ಜ್ಯೋತಿ ಬೆಳಗಿಸಿದರು. ಶ್ರೀಮತಿ ಗೀತಾ ಜಯಚಂದ್ರ ಹೆಗ್ಡೆ ಅವರು ಸ್ವಾಗತಿಸಿದರು.

ಮಂಡಲ ಬಿಲ್ ಪಾವತಿಗೆ ತಡೆಯಾಜ್ಞೆ ಖಂಡನೆ

ಉಡುಪಿ, ಅ. 28– ಅಕ್ಟೋಬರ್ 6ರಿಂದ ಉಡುಪಿಯ ವಿಜಾನಿಯಲ್ಲಿ ಮಂಡಲ ಪಂಚಾಯತಿನ ವರ್ಗ 1ರ ಬಿಲ್ಲು ಯಾವುದೇ ಬಿಲ್ ಪಾವತಿಗೆ ಸರಕಾರ ತಡೆಯಾಜ್ಞೆ ನೀಡಿದ್ದು, ಇದರಿಂದ ಮಂಡಲ ಪಂಚಾಯತಿನ ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವುದಾಗಿ ಉಡುಪಿ ತಾಲೂಕು ಮಂಡಲ ಪ್ರಧಾನರುಗಳ ಒಕ್ಕೂಟದ ಅಧ್ಯಕ್ಷರೂ, ಬೈಲೂರು ಪ್ರಧಾನರೂ ಆದ ಕೃಷ್ಣರಾಜ ಸರಳಾಯರು ಹೇಳಿಕೆಯೊಂದರಲ್ಲಿ ತಿಳಿಸಿದ್ದು, ಸರಕಾರದ ಈ ನಿಲುವನ್ನು ಖಂಡಿಸಿದ್ದಾರೆ.

ಹೊಸ ಸಾಲ ನೀಡಿಕೆ

ಉಡುಪಿ, ಅ. 28– ಉಡುಪಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ 88-89ನೇ ಸಾಲಿನ ವಿವಿಧ ಯೋಜನೆಗಳಿಗೆ ರಾಜ್ಯ ಬ್ಯಾಂಕಿನಿಂದ ರೂ. 50 ಲಕ್ಷ ಹೊಸ ಸಾಲ ಬಿಡುಗಡೆಯಾಗಿರುವುದರಿಂದ ಉಡುಪಿ ತಾಲೂಕಿನ ರೈತ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಪ್ರಯೋಜನ ಪಡೆಯಬೇಕೆಂದು, ಬ್ಯಾಂಕಿನ ಅಧ್ಯಕ್ಷರಾದ ಪಿ. ಕೃಷ್ಣ ಹೆಗ್ಡೆಯವರು ತಿಳಿಸಿದ್ದಾರೆ.

ಕೈಗಾ ಅಣುಸ್ಥಾವರಕ್ಕೆ ಸಿ.ಪಿ.ಎಂ. ಬೆಂಬಲ

ಉಡುಪಿ, ಅ. 28–ಕೈಗಾ ಅಣುಸ್ಥಾವರದ ವಿರುದ್ಧ ನಡೆಯುತ್ತಿರುವ ಚಳವಳಿಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ (ಸಿಪಿಎಂ) ದ. ಕ. ಜಿಲ್ಲಾ 13ನೇ ಸಮ್ಮೇಳನ ಟೀಕಿಸಿದ್ದು, ರಾಜ್ಯದ ಅಭಿವೃದ್ಧಿಗೆ ಪೂರಕವಾದ ಈ ಯೋಜನೆಗೆ ಬೆಂಬಲವನ್ನು ವ್ಯಕ್ತಪಡಿಸಿದೆ.

ದೇಶದ ಕೈಗಾರಿಕಾಭಿವೃದ್ಧಿಯನ್ನು ಕುಂಠಿತಗೊಳಿಸುವ ಸಾಮ್ರಾಜ್ಯಶಾಹಿ ಪ್ರೇರಿತವಾದ ಕೈಗಾ ವಿರೋಧಿ ಚಳವಳಿಯನ್ನು ಸೋಲಿಸುವ ಕರೆನೀಡಿರುವ ಸಮ್ಮೇಳನ, ಸ್ಥಾವರದಲ್ಲಿ ಸರ್ವ ಸುರಕ್ಷತಾ ಕ್ರಮಗಳನ್ನೂ ಅಳವಡಿಸಬೇಕೆಂದೂ ಸಂತ್ರಸ್ತರಿಗೆ ಸೂಕ್ತ ಪರಿಹಾರ ಒದಗಿಸಬೇಕೆಂದೂ ಒತ್ತಾಯಿಸಿದೆ. ಅ. 23 ರಿಂದ 25 ರ ವರೆಗೆ ಇಲ್ಲಿ ನಡೆದ ಸಮ್ಮೇಳನದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಯಿತು.

ಮಂಗಳೂರು ಕೈಗಾರಿಕಾ ಮತ್ತು ಕೊಂಕಣ ರೈಲ್ವೆ ಯೋಜನೆ ಜಾರಿಗಾಗಿ ಈ ಹಿಂದೆ ಸಿಪಿಎಂ ಚಳವಳಿ ನಡೆಸಿತ್ತು. ಕೇಂದ್ರ ಸರಕಾರ ಇನ್ನೂ ಸರಿಯಾಗಿ ಕಾರ್ಯನಿರ್ವಹಿಸದಿದ್ದಲ್ಲಿ ಅದಕ್ಕಾಗಿ ಇನ್ನಷ್ಟು ತೀವ್ರ ಹೋರಾಟವನ್ನು ನಡೆಸಲೂ ಸಮ್ಮೇಳನ ತೀರ್ಮಾನಿಸಿದೆ. ರೂ. 750 ಕನಿಷ್ಠ ಕೂಲಿ ಕಾನೂನಿನ ಜಾರಿಗಾಗಿ ಅ. 31 ರಂದು ದೇಶಾದ್ಯಂತ ನಡೆಯಲಿರುವ ಚಳವಳಿಗೆ ಸಮ್ಮೇಳನ ಬೆಂಬಲ ವ್ಯಕ್ತಪಡಿಸಿದ್ದು ಜಿಲ್ಲೆಯಲ್ಲಿ ಅದರ ಯಶಸ್ಸಿಗೆ ಶ್ರಮಿಸಲು ಕರೆ ನೀಡುವ ನಿರ್ಣಯವನ್ನು ಸಮ್ಮೇಳನ ಅಂಗೀಕರಿಸಿತು.

ರೈತ ಕೃಷಿ ಕೂಲಿಗಾರರು ಅಕ್ರಮವಾಗಿ ಮಾಡಿರುವ ಜಮೀನನ್ನು ಸಕ್ರಮಗೊಳಿಸಬೇಕೆಂದೂ ಅದು ಒತ್ತಾಯಿಸಿದೆ. ಕೇಂದ್ರ ಸರಕಾರ ಕಾಂಗ್ರೆಸೇತರ ರಾಜ್ಯ ಸರಕಾರಗಳತ್ತ ತೋರುತ್ತಿರುವ ತಾರತಮ್ಯ ನೀತಿಯನ್ನು ಖಂಡಿಸಿದ ಸಮ್ಮೇಳನ, ಕರ್ನಾಟಕಕ್ಕೆ ಸರಬರಾಜು ಮಾಡುತ್ತಿದ್ದ ಪಡಿತರದಲ್ಲಿ ಕಡಿತ ಮಾಡಿರುವುದನ್ನು ಕಟುವಾಗಿ ಟೀಕಿಸಿದೆ.

ಪಡಿತರದಾರರಿಗೆ ಸೂಚನೆ

ಮಂಗಳೂರು, ಅ. 28–ನ್ಯಾಯ ಬೆಲೆ ಅಂಗಡಿಗೆ ಕುಟುಂಬದ ಮುಖ್ಯಸ್ಥ ಹೋಗಿ ಅರ್ಜಿಗೆ ಸಹಿ ಮಾಡಲು ಸಾಧ್ಯವಾಗದಿದ್ದರೆ (ಅಸೌಖ್ಯದಿಂದ ಅಥವಾ ಪರಸ್ಥಳಕ್ಕೆ ಹೋಗಿದ್ದರೆ) ನಂತರದ ಅಧಿಕೃತ ವಾರಸುದಾರರು ಅರ್ಜಿಯನ್ನು ನ್ಯಾಯ ಬೆಲೆ ಅಂಗಡಿಯಿಂದ ಪಡೆಯಬಹುದು ಹಾಗೂ ಅವರೇ ಭಾವಚಿತ್ರ ನೀಡಬೇಕೆಂದು ತಿಳಿಸಲಾಗಿದೆ.

ಜಿ. ಪ. ಅಧ್ಯಕ್ಷರ ಆಯ್ಕೆಗೆ ವಿಳಂಬ: ಟೀಕೆ

ಬಂಟ್ವಾಳ, ಅ. 28– ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ ಅಧ್ಯಕ್ಷರ ರಾಜೀನಾಮೆಯಿಂದ ಜಿಲ್ಲೆಯಲ್ಲಿ "ಆಡಳಿತಾತ್ಮಕ ಶೂನ್ಯ" ನಿರ್ಮಾಣವಾಗಿದ್ದು ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂದು ಜಿಲ್ಲಾ ಯುವ ಜನತಾ ನಾಯಕರು ಆಪಾದಿಸಿದ್ದಾರೆ.

ಪಕ್ಷದ ಆಂತರಿಕ ಭಿನ್ನಮತದಿಂದಲೇ ಜಿಲ್ಲಾ ಪರಿಷತ್ ಅಧ್ಯಕ್ಷರು ರಾಜೀನಾಮೆ ನೀಡಬೇಕಾದ ಪ್ರಸಂಗ ಏರ್ಪಟ್ಟಿದ್ದು, ಇಂತಹ ಪಕ್ಷ ಜಿಲ್ಲೆಗೆ ಭದ್ರ ಆಡಳಿತ ನೀಡಲು ಹೇಗೆ ಸಾಧ್ಯ, ಎಂದು ದ. ಕ. ಜಿಲ್ಲಾ ಯುವ ಜನತಾ ಅಧ್ಯಕ್ಷ ಕೆ. ಎನ್. ಗೋವರ್ಧನ್, ಬಂಟ್ವಾಳ ತಾಲೂಕು ಯುವ ಜನತಾ ಅಧ್ಯಕ್ಷ ದಿನೇಶ ಎಂ. ಪಡಿಯಾರ್ ಹಾಗೂ ರಾಜ್ಯ ಯುವ ಜನತಾ ಕಾರ್ಯಕಾರಿ ಸಮಿತಿ ಸದಸ್ಯ ಜನಾರ್ದನ ಶೆಟ್ಟಿ ಪತ್ರಿಕಾ ಹೇಳಿಕೆಯೊಂದರಲ್ಲಿ ಪ್ರಶ್ನಿಸಿದ್ದಾರೆ.

ಕಳೆದ ಮಾರ್ಚ್ ಅಂತ್ಯದಲ್ಲಿ ರಾಜ್ಯ ಸರಕಾರವೇಕಾದಷ್ಟು ಹಣ ಒದಗಿಸಿದ್ದರೂ ಪೂರ್ತಿ ನಷ್ಟ ಮಾಡಿದ ಜಿಲ್ಲಾ ಪರಿಷತ್ ನಿರ್ಲಕ್ಷಿಸಿದ್ದು, ಮಾರ್ಚ್ ಅನಂತರದಲ್ಲಿ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಂಡಲ ಪಂಚಾಯತುಗಳಿಗೆ ವಿವರ ಒದಗಿಸದೇ ಕೇವಲ ಕೆಲವೇ ತಾಲೂಕುಗಳಲ್ಲಿ ಮಂಡಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದೆ ಎಂದು ಅವರು ದೂರಿದ್ದಾರೆ.

ಡಿ. 10-11: ಮೂಲ್ಕಿಯ ಬಾಲಮೇಳ

ಮೂಲ್ಕಿ, ಅ. 28–ಮೂಲ್ಕಿ ಬಪ್ಪನಾಡು ಶ್ರೀ ದುರ್ಗಾಪರಮೇಶ್ವರಿ ದೇವಳದ ಜ್ಞಾನ ಮಂದಿರದಲ್ಲಿ ಡಿಸೆಂಬರ್ 10 ಮತ್ತು 11ರಂದು ನಡೆಯುವ ಅದ್ದೂರಿಯ ವರ್ಣರಂಜಿತ 'ಬಾಲ ಪ್ರತಿಭಾ ಮೇಳ–88'ನ್ನು ಉದ್ಘಾಟಿಸಲು ಧರ್ಮಸ್ಥಳದ ವೀರೇಂದ್ರಕುಮಾರ್ ಹೆಗ್ಗಡೆ ಅವರು ಒಪ್ಪಿರುತ್ತಾರೆ.

ಉದ್ಘಾಟನೆ ಸಮಾರಂಭ ಡಿಸೆಂಬರ್ ಹತ್ತರಂದು ಬೆಳಿಗ್ಗೆ ನಡೆಯುವುದು ಎಂದು ಬಾಲ ಪ್ರತಿಭಾ–88ರ ಕಾರ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಅವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ.

ಭುವನೇಂದ್ರ ಕಾಲೇಜಿನ ಎನ್.ಎಸ್.ಎಸ್. ಶಿಬಿರ ಉದ್ಘಾಟನೆ

ಕಾರ್ಕಳ, ಅ. 28–ಕಾರ್ಕಳದ ಶ್ರೀ ಶ್ರೀ ಭುವನೇಂದ್ರ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳ ವಾರ್ಷಿಕ ಶಿಬಿರವನ್ನು ಇತ್ತೀಚೆಗೆ ನೆಲ್ಲಿಕಾರಿನ ಸೈಂಟ್ ಪಿಕ್ಸರ್ಸ್ ಹಿ. ಪ್ರಾ. ಶಾಲೆಯಲ್ಲಿ ತೋಟಗಾರಿಕಾ ಸಹನಿರ್ದೇಶಕ ಮನಮೋಹನ ರಾವ್ ಅವರು ಉದ್ಘಾಟಿಸಿದರು.

ಭುವನೇಂದ್ರ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಕೆ. ಬಿ. ನೀರಾವರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಲ್ಲೂರು ಮಂಡಲ ಪ್ರಧಾನ ಮುಖ್ಯಾಧ್ಯಾಯವರು ಗುದ್ದಲಿ ಪೂಜೆ ನೆರವೇರಿಸಿದರು. ಸೈಂಟ್ ಪಿಕ್ಸರ್ಸ್ ಚರ್ಚಿನ ಧರ್ಮಗುರು ರೆ| ಫಾ| ಜೋನಿ ಫಾನ್ ಡಿ'ಸೋಜಾ ಅವರು ಆಶೀರ್ವಚನ ನೀಡಿದರು.

ಶಾಲಾ ಮುಖ್ಯೋಪಾಧ್ಯಾಯ ಮಾರಿಸ್ ತಾಷ್ಟ್ರೀ ಶಿಬಿರವನ್ನುದ್ದೇಶಿಸಿ ಮಾತನಾಡಿದರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷ ಎಂ. ಎಂ. ಡಿ'ಸೋಜಾ ಸಭೆಯಲ್ಲಿ ಉಪಸ್ಥಿತರಿದ್ದರು.

ಎನ್. ಎಸ್. ಎಸ್. ಅಧಿಕಾರಿ ಕೆ. ನಾರಾಯಣ ಪೂಜಾರಿ ಕಾರ್ಯಕ್ರಮ ಸಂಯೋಜಿಸಿದ್ದರು. ಶಿಬಿರದ ಸಂಚಾಲಕ ಕೆ. ಕೃಷ್ಣ ಸ್ವಾಗತಿಸಿದರು. ಎನ್. ಪಿ. ನಾರಾಯಣ ಶೆಟ್ಟಿ ವಂದಿಸಿದರು.



ನ. 2: ಕುಂದಾಪುರಕ್ಕೆ ಕಾಸರಗೋಡು ಕನ್ನಡಿಗರ ತಂಡ

ಕುಂದಾಪುರ, ಅ. 28 – ಕುಂದಾಪುರಕ್ಕೆ ನ.2ರಂದು ಹಿರಿಯ, ಕಿರಿಯ ಕನ್ನಡ ಸಾಹಿತಿ, ಕವಿಗಳ, ಕಲಾವಿದರ ತಂಡವೇ ಆಗಮಿಸಲಿದೆ.

ಕಯ್ಯಾರ ಕಿಂಞಣ್ಣ ರೈಯವರ ನೇತೃತ್ವದಲ್ಲಿ ಆಗಮಿಸುವ ತಂಡ ಕುಂದಾಪುರ ತಾಲೂಕು ಸಾಹಿತ್ಯೋತ್ಸವದಲ್ಲಿ ಗಡಿನಾಡ ಕನ್ನಡಿಗರ ಗೋಷ್ಠಿ ನಡೆಸಲಿದ್ದು, ಕವಿತಾ ವಾಚನ, ಭಾವಗೀತೆಗಳ ಹಾಡುಗಾರಿಕೆ, ಕಾರ್ಯಕ್ರಮ ಸಹ ನೀಡಲಿದ್ದಾರೆ.

ಎಡನೀರು ಮಠಾಧೀಶರಾದ ಕೇಶವಾನಂದ ಭಾರತಿಯವರೂ ಸಹ ಆಗಮಿಸಿ ಅನುಗ್ರಹ ಭಾಷಣ ಮಾಡಲಿದ್ದಾರೆ.

ಕಾಸರಗೋಡಿನ ಸಾಹಿತಿ ಕವಿ, ಕಲಾವಿದರು ಆಗಮಿಸುವವರಲ್ಲಿ ಕೆ.ಟಿ. ಶ್ರೀಧರ, ಶ್ರೀಶ ದೇವ, ಗಂಗಾಧರ ಭಟ್, ವೆಂಕಟರಾಜ ಪುಣಿಂಚಿತ್ತಾಯ, ಎ. ವಿ. ರಾಮು ಭಾಗ, ರಾಜೇಶ್ವರಿ ಅಲವಾಡಿ, ರಾಧಾ ಮುರಲೀಧರ, ವಿಮಲಾ ಮೋಹನ ಅನ್ನಪೂರ್ಣ, ಭಾರತಿ, ವಿ.ಡಿಗೆ.

ಪ್ರತಿಭಟನೆ

ಬಜ್ಪೆ, ಅ. 28–ಬಜ್ಪೆ ಬಸ್ಸು ನಿಲ್ದಾಣದಲ್ಲಿ ಕೆಲವು ಟೂರಿಸ್ಟ್ ಕಾರುಗಳು ಮತ್ತು ವ್ಯಾನುಗಳು ಸಾರಿಗೆ ನಿಯಮವನ್ನು ಉಲ್ಲಂಘಿಸುವುದರಿಂದ ರಿಕ್ಷಾ ಚಾಲಕರ ದುಡಿಮೆಗೆ ಅಡ್ಡಿಯಾಗುತ್ತಿರುವುದಕ್ಕೆ ರಿಕ್ಷಾ ಚಾಲಕರ ಸಂಘ ಪ್ರತಿಭಟನೆ ವ್ಯಕ್ತಪಡಿಸಿದೆ.

ರಾಜ್ಯ ಜೇಸಿಸ್ ಅಧ್ಯಕ್ಷರಾಗಿ ಕೂಡೂರ್

ವಿಟ್ಲ, ಅ. 28–ಇತ್ತೀಚೆಗೆ ಹೊಸಪೇಟೆಯಲ್ಲಿ ನಡೆದ ಕರ್ನಾಟಕ ರಾಜ್ಯ ಜೇಸಿಸ್‌ನ ಸಮ್ಮೇಳನದಲ್ಲಿ, 1989ನೇ ಸಾಲಿನ ರಾಜ್ಯಾಧ್ಯಕ್ಷರಾಗಿ ಎಲ್. ಎನ್. ಕೂಡೂರ್‌ರವರು ಬಹುಮತದಿಂದ ಆಯ್ಕೆಯಾಗಿದ್ದಾರೆ.

ವಿಟ್ಲ ಜೇಸಿಸ್ ಘಟಕದ ಪೂರ್ವಾಧ್ಯಕ್ಷರೂ ಆಗಿದ್ದ ಅವರು, ವೃತ್ತಿಯಲ್ಲಿ ಪ್ರಗತಿಪರ ಕೃಷಿಕರಾಗಿದ್ದಾರೆ. ಕರ್ನಾಟಕ ರಾಜ್ಯ ಜೇಸೀಸ್‌ನಲ್ಲಿ 1987ರ ರಾಜ್ಯ ಉಪಾಧ್ಯಕ್ಷರಾಗಿಯೂ, 1988ರ ದಾಖಲೆ ಮತ್ತು ಪುರಸ್ಕಾರಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ದ.ಸಂ.ಸ ಕಾರ್ಯಕರ್ತರ ತರಬೇತಿ ಶಿಬಿರ

ಮೂಡಬಿದ್ರೆ, ಅ. 28–ಕರ್ನಾಟಕ ದಲಿತ ಸಂಘರ್ಷ ಸಮಿತಿಯ ನಗರ ಶಾಖೆಯ ಮೂರು ದಿನಗಳ ಕಾರ್ಯಕರ್ತರ ಸೈದ್ಧಾಂತಿಕ ತರಬೇತಿ ಶಿಬಿರವು ಇತ್ತೀಚೆಗೆ ನಡೆಯಿತು.

ಮೂರು ದಿನಗಳ ಶಿಬಿರದಲ್ಲಿ ಮಂಗಳೂರು ಎ.ವಿ. ಉಪನ್ಯಾಸಕರಾದ ಡಾ| ವಲೇರಿಯನ್ ರೋಡ್ರಿಗಸ್, ಡಾ| ಪುರುಷೋತ್ತಮ ಬಿಳಿಮಲೆ, ಮಂಗಳೂರು ಉಪಸಂಪಾದಕ ಬೋರಾಕ್ಸ್ ಪಿ.ಡಿಸೋಜ, ಚಂದ್ರಕಲಾ ಬೆಳ್ಳಂಗಡಿ ಅವರು ಪಾಲ್ಗೊಂಡು ವಿಚಾರಗಳನ್ನು ಮಂಡಿಸಿದರು. ದ.ಸಂ.ಸ. ಹಾಸನ ಜಿಲ್ಲಾ ಮುಖ್ಯ ಸಂಯೋಜಕ ಪುಟ್ಟರಾಜು ಉಪಸ್ಥಿತರಿದ್ದರು.

ಪ್ರಾಸ್ತಾವಿಕ ಕಾರ್ಯಕರ್ತರ ಮೇಲೆ ಬೌದ್ಧಿಕ ಸವಾರಿ ನಡೆಸುವ ನಾಯಕತ್ವದ ವಿರುದ್ಧ ಕಾರ್ಯಕರ್ತರು ಎಚ್ಚರಿಕೆ ವಹಿಸಬೇಕೆಂದು ಸಮಾರೋಪ ಭಾಷಣ ಮಾಡುತ್ತಾ ಶೋಭಿತ್ ಅವರು ಗಮನ ಸೆಳೆದರು.

ದ.ಸಂ.ಸ. ಮೂಡಬಿದ್ರೆ ನಗರ ಶಾಖೆಯ ಸಂಚಾಲಕ ಕಿರಣ್‌ಕುಮಾರ್ ವಂದಿಸಿದರು.